TIGHT BINDING BOOK

UNIVERSAL LIBRARY
OU_198129
UNIVERSAL LIBRARY

★

# ಸಮರ್ಪಣೆ

ನನ್ನ ಇಷ್ಟ ದೇವರಾದ

ಪ್ರಾಣನಾಥರ

ಅಡಿದಾವರೆಗಳಲ್ಲಿ

ಅತಿ ನಮ್ರತೆಯೊಡನೆ

ಸಮರ್ಪಿಸುತ್ತೇನೆ

ಇತಿ

**ಜಯಲಕ್ಷ್ಮೀ ಆರ್. ಶ್ರೀನಿವಾಸ್**

★

# ಚಿನ್ನದ ಬಳೆ

ಮತ್ತು

## ಇತರ ಕಥೆಗಳು

ಮೂಲ ಲೇಖಕರು:

ಶ್ರೀ ಪುರಸು ಬಾಲಕೃಷ್ಣನ್

ಅನುವಾದಕರು:

ಶ್ರೀಮತಿ ಜಯಲಕ್ಷ್ಮೀ ಆರ್. ಶ್ರೀನಿವಾಸನ್

ಸತ್ಯ ಶೋಧನ ಪ್ರಕಟನ ಮಂದಿರ

ಕೋಟೆ, ಬೆಂಗಳೂರು ನಗರ

೧೯೪೬

ಮೊದಲನೆಯ ಮುದ್ರಣ

ಬೆಲೆ: ಒಂದು ರೂಪಾಯಿ

1951

965

[ಎಲ್ಲ ಹಕ್ಕುಗಳನ್ನೂ ಕಾದಿಡಲಾಗಿದೆ]

ಮುದ್ರಕರು

ವಿ. ರಾಮಕೃಷ್ಣ ರಾಮಕೃಷ್ಣ ಅಂಡ್ ಕೋ,

ಕೋಟೆ, ಬೆಂಗಳೂರು ನಗರ.

# ಪ ರಿ ವಿ ಡಿ


| | | |
|---|---|---|
| ೧ | ಚಿನ್ನದ ಬಳೆ | ೧ |
| ೨ | ಮುನಿಯ | ೬ |
| ೩ | ಮಾತೃವಾತ್ಸಲ್ಯ | ೧೪ |
| ೪ | ಕಡುಬು | ೨೧ |
| ೫ | ದೃಶ್ಯವೂ ಕಲ್ಪನೆಯೂ | ೩೨ |
| ೬ | ವಜ್ರದ ಓಲೆ | ೩೭ |
| ೭ | ಒಂದು ದಿನದ ಸಂಭವ | ೪೩ |
| ೮ | ಬಳೆಯ ಕೈ | ೬೦ |
| ೯ | ಹಡೆದವರು | ೬೮ |
| ೧೦ | ನೆಲಗಡಲೇಕಾಯಿ | ೮೧ |

# ಪ್ರಕಾಶಕರ ಒಂದು ಮಾತು

ಇಂದಿನ ತಮಿಳು ಸಾಹಿತ್ಯ ಕ್ಷೇತ್ರದಲ್ಲಿ ಶ್ರೀ ಪುರಸು ಬಾಲಕೃಷ್ಣನ್ ಎಂಬವರು ಅತ್ಯುತ್ತಮ ಸಣ್ಣ ಕಥೆಗಳನ್ನು ಬರೆದು ಹೆಸರು ಪಡೆದಿದ್ದಾರೆ. ಈ ಪುಸ್ತಕವು ಅವರ ಕೆಲವು ಕಥೆಗಳ ಕನ್ನಡ ಅನುವಾದದ ಸಂಗ್ರಹ. ಕನ್ನಡಿಸಿರುವರುವವರು ಶ್ರೀಮತಿ ಜಯಲಕ್ಷ್ಮೀ ಆರ್. ಶ್ರೀನಿವಾಸನ್. ಇವರು ಬರೆದ ಹಲವು ಪುಸ್ತಕಗಳು ಆಗಲೇ ಪ್ರಕಟವಾಗಿ ಇವರು ಕನ್ನಡಿಗರಿಗೆ ಚೆನ್ನಾಗಿ ಪರಿಚಿತರಾಗಿದ್ದಾರೆ. ಎಲ್ಲಿನ ಉತ್ತಮ ಸಾಹಿತ್ಯವನ್ನು ಓದುವುದೂ ಆನಂದದಾಯಕವಾದ್ದು. ಇದರ ಜೊತೆಗೆ ನಮ್ಮ ನೆರೆನಾಡುಗಳಲ್ಲಿ ಸಾಹಿತ್ಯದ ಬೆಳೆವಣಿಗೆಯು ಹೇಗೆ ನಡೆಯುತ್ತಿದೆಯೆಂಬುದನ್ನು ಅರಿತು ಕೊಳ್ಳುವುದು ನಮಗೆ ಶ್ರೇಯಸ್ಕರವೆಂದು ಹೇಳಬೇಕಾದುದಿಲ್ಲ. ಇದನ್ನು ಸಾಧಿಸಲು ಅಲ್ಲಿನ ಸಾಹಿತ್ಯದ ಉತ್ತಮ ಪುಸ್ತಕಗಳನ್ನು ಕನ್ನಡಿಸುವದೇ ನೈಜ ಮಾರ್ಗ. ಈ ರೀತಿ ತಮಿಳು ಸಾಹಿತ್ಯದ ಪರಿಚಯವನ್ನು ಮಾಡಿ ಕೊಡುವ ಸ್ತುತ್ಯ ಪ್ರಯತ್ನದಲ್ಲಿ ಈ ಲೇಖಕಿಯರು ತೊಡಗಿದ್ದಾರೆ ಈ ಪ್ರಯತ್ನದ ಫಲಗಳಲ್ಲಿ ಈ ಪುಸ್ತಕವೂ ಒಂದು. ಇದನ್ನು ನಾವು ಸಂತೋಷದಿಂದ ಕನ್ನಡಿಗರ ಮುಂದಿಡುತ್ತೇವೆ.

# ಚಿನ್ನದ ಬಳೆ

—————

"ಏನು ಪ್ರಮಾದ ? ಅಂತಹದೇನನ್ನು ನಾನು ಮಾಡಿಬಿಟ್ಟಿ ? ಕಣ್ಣಗಿಯು ಕೋವಲನಿಗೆ ಕಾಲ್ಕಡಗವನ್ನು ಕೊಡಲಿಲ್ಲವೇ, ಮಾರಿಬರಲು ?"

ಈ ರೀತಿಯಾಗಿ ಕಾಮಾಕ್ಷಿಯು ತನ್ನ ಪತಿಗೆ ಹೇಳುತ್ತಲಿದ್ದಳು. ಅವರುಗಳಿಗೆ ಈಗ ಅತ್ಯಂತ ದರಿದ್ರದೆಶೆ ! ಅಂದಂದಿನ ಊಟಕ್ಕೆ ದಾರಿಯು ಅವರುಗಳಿಗೆ ಬೆಳಗಾದರೇನೇ ತಿಳಿಯಬೇಕು.

"ಇಕೊಳ್ಳಿ, ನನ್ನ ಬಳೆಯನ್ನು ತೆಗೆದುಕೊಂಡು ಹೋಗಿ ಮಾರಿ ಬನ್ನಿ. ಅದರಲ್ಲಿ ಬರುವ ಹಣವು ಇರುವವರೆಗೂ ನೋಡೋಣ. ಏನಾದರೊಂದು ಕೆಲಸವನ್ನೂ ಹುಡುಕೋಣ. ಬಳಿಕ ದೇವರು ದಾರಿ ತೋರಿಸುವನು."

ಹೀಗೆ ಹೇಳಿ ಕಾಮಾಕ್ಷಿಯು ಅವನ ಕಡೆಗೆ ತನ್ನ ಕೈಗಳೆರಡನ್ನೂ ನೀಡಿದಳು. ಅವುಗಳಲ್ಲಿ, ಕೈಗೊಂದರಂತೆ, ಎರಡು ಚಿನ್ನದ ಬಳೆಗಳು, ಉತ್ಸಾಹಹೀನವಾಗಿ ಏನೋ ಚಿಂತೆಯಿಂದ ಪೀಡಿತವಾದಂತೆ ತೋರುತ್ತಿದ್ದವು.

ನೀಡಿದ ಕೈಗಳೆರಡನ್ನೂ ಅವುಗಳಲ್ಲಿ ರಂಜಿಸುತ್ತಿದ್ದ ಒಂಟಿ ಬಳೆಗಳನ್ನೂ ಪ್ರೇಮವು ತುಂಬಿತುಳುಕುವ ನೋಟದಿಂದ ಸುಂದರನು ನೋಡಿದನು. ಆ ಬಳೆಗಳನ್ನು ಎಂದಾದರೂ ಮಾರಿಯೇ ಮಾರಬೇಕು ಎಂದು ಅವನಿಗೆ ಚೆನ್ನಾಗಿ ಗೊತ್ತುಂಟು. ಆದರೂ ಕೂಡ, ಆ ವಿಷಯವನ್ನು ಕಾಮಾಕ್ಷಿಯೇ ಎತ್ತಿದುದು ಅವನ ಹೃದಯವನ್ನು ಕರಗಿಸಿಬಿಟ್ಟಿತು. ಕಾಮಾಕ್ಷಿಯ ಪ್ರಸ್ತಾಪವು ಆ ಬಳೆಗಳ ನಿತ್ಯಮೌನವನ್ನು ಕ್ಷಣಮಾತ್ರದಲ್ಲಿ ಚದುರಿಸಿತು. ಸುಂದರನು ಮೋಹಿತನಾದವನಂತೆ ಅವಳನ್ನು ದೃಷ್ಟಿಸುತ್ತಲಿದ್ದನು.

"ಯಾಕೆ ಹೀಗೆ ಸುಮ್ಮನಿರುವಿರಿ? ಸಂಶಯವಾಗಿದ್ದರೆ, ನಾನೇ ಕಳಚಿ ಕೊಡುತ್ತೇನೆ" ಎಂದು ಹೇಳಿ, ಕಾಮಾಕ್ಷಿಯು ತನ್ನ ಬಲಗೈಯಿಂದ ಎಡೆಗಯ್ಯಲ್ಲಿರುವ ಬಳೆಯನ್ನು ಕಳಚಲು ತೊಡಗಿದಳು.

"ಯಾಕೆ ಇಷ್ಟೊಂದು ಅವಸರ?" ಎಂದು ಹೇಳುತ್ತಾ ಸುಂದರನು ತಟ್ಟನೆ ಅವಳ ಬಲದ ಕರವನ್ನು ಹಿಡಿದುಕೊಂಡನು.

"ಚಿನ್ನವನ್ನು ಊಟಮಾಡಲಾರೆವಲ್ಲಾ!" ಎಂದಳು ಅವಳು ನಸುನಗುತ್ತಾ. ಮನಸ್ಸು ಸಾಧಾರಣವಾಗಿ ಅಷ್ಟೊಂದು ಪ್ರೇಮಮಯವಾಗಿ, ಕರುಣಾಮಯವಾಗಿರುವುದೇ ಇಲ್ಲ. ಆದರೆ ಕೆಲಕೆಲವು ಸಮಯಗಳಲ್ಲಿ ಪ್ರೇಮವು ಎಂದೂ ಇಲ್ಲದ ವೇಗದೊಡನೆ ಹೃದಯದಲ್ಲಿ ಉಕ್ಕಿ ಸುರಿಯಲು ಆರಂಭಿಸಿಬಿಡುತ್ತದೆ. ಅಂತಹ ಪರಿಸ್ಥಿತಿಯಲ್ಲಿ ಆಗ ಇದ್ದಳು ಕಾಮಾಕ್ಷಿ.

"ಹಾಗಲ್ಲಾ, ಕಾಮೂ! ನಾನೇ ಕಳಚುತ್ತೇನೆ." ಎಂದನು ಸುಂದರನು.

ಕಾಮಾಕ್ಷಿಯ ತುಟಿಗಳಲ್ಲಿ ಅರಳಿದ ನಸುನಗೆಯನ್ನು ಅವನು ತಾನು ಪ್ರಾರಂಭಿಸಿದ ಕೆಲಸದಲ್ಲಿದ್ದ ಶ್ರದ್ಧೆಯಲ್ಲಿ ಗಮನಿಸಲಿಲ್ಲ. ಅವಳ ಬಲಗೈಯನ್ನು ಒಂದು ಪುಷ್ಪದೋಪಾದಿಯಲ್ಲಿ ತನ್ನ ಕೈಯಲ್ಲಿ ಇರಿಸಿಕೊಂಡು, ಬಳೆಯನ್ನು ಕಳಚತೊಡಗಿದನು. ಆದರೆ ಆ ಎರಡು ಕೆಲಸಗಳಲ್ಲಿ ಯಾವುದರ ಮೇಲೆ ಅವನ ಮನಸ್ಸು ನೆಲಸಿತ್ತೆಂದು ಕೇಳಿದರೆ, ಅದು ಬಳೆಯನ್ನು ಕಳಚುವುದರಲ್ಲಿ ಇಲ್ಲವೆಂದು ತಕ್ಷಣ ಹೇಳಿಬಿಡಬಹುದು.

ಹಠಾತ್ತಾಗಿ ಅವಳ ಕೈಯನ್ನು ಬಲವಾಗಿ ಹಿಡಿದುಕೊಂಡು, ಅವಳ ಕಣ್ಣುಗಳನ್ನು ದಿಟ್ಟಿಸಿ ನೋಡುತ್ತಾ, "ಕಾಮಾಕ್ಷಿ, ನನ್ನ ಮೇಲೆ ನಿನಗೆ ಯಾವ ಕೋಪವು ಇಲ್ಲವಲ್ಲಾ?" ಎಂದನು.

"ಯಾಕೆ ಹಾಗೆ ಹೇಳುತ್ತೀರಿ?" ಎಂದು ಸ್ವಲ್ಪ ಬೆದರಿದವಳಾಗಿ ಕೇಳಿದಳು ಕಾಮಾಕ್ಷಿ.

ಅವನಿಗೆ ತಟ್ಟನೆ ಹಳೆಯ ಕಾಲದಲ್ಲಿ ಸಂಭವಿಸಿದ ವಿಷಯವೊಂದು ಜ್ಞಾಪಕಕ್ಕೆ ಬಂದುದೇ ಅವನ ಪ್ರಶ್ನೆಗೆ ಕಾರಣ.

೨

ಜ್ಞಾಪಕವೆಂಬುದು ಒಂದು ತಂತ್ರದ ಮಾಯಾವಿ. ಪರಿತಪಿಸುವ ಹೃದಯವನ್ನು ಯಾವಾಗ ಬಾಡಿಸಬಹುದೆಂಬುದು ಅದಕ್ಕೆ ಚೆನ್ನಾಗಿ ಗೊತ್ತುಂಟು. ತನಗೆ ತಕ್ಕ ಸಮಯ, ಸಂದರ್ಭ, ಮನಸ್ಸಿನ ಪರಿಸ್ಥಿತಿ ಎಲ್ಲವನ್ನೂ ತಿಳಿದು ಅದು ಮರ್ಮಸ್ಥಾನವನ್ನು ಗುರಿ ನೋಡಿ ಹೊಡೆಯುವದು.

ಆ ಸಂಗತಿಯೆಂದರೆ ಹಲವು ವರ್ಷಗಳಿಗೆ ಹಿಂದೆ—ಅವರುಗಳಿಗೆ ವಿವಾಹವು ನಡೆಯುವುದಕ್ಕೆ ಮುಂಚಿತವಾಗಿಯೇ—ನಡೆದ ವಿಷಯ. ಆಗ ಅವನೊಬ್ಬ ಸಣ್ಣ ಹುಡುಗ; ಅವಳೂ ಸಣ್ಣ ಹುಡುಗಿ. ಅವರೊಳಗೆ ಯಾವುದೋ ಒಂದು ಆಟದ ನಿಮಿತ್ತವಾಗಿ ನಡೆದ ಜಗಳವದು. ಆ ಆಟದ ಸಾಮಾನು ಯಾವುದೆಂಬುದು ಅವನಿಗೆ ಈಗ ಜ್ಞಾಪಕವಿಲ್ಲ. ಆದರೂ ಕೂಡ ಆ ಜಗಳವೂ ಅದರಿಂದೊದಗಿದ ಗಲಭೆಯೂ ಅವನಿಗೆ ಈ ಸಂದರ್ಭದಲ್ಲಿ ಜ್ಞಾಪಕಕ್ಕೆ ಬಂದುವು. ಅದೂ ಕೂಡ ಬೇಕಾದುದನ್ನು ಮಾತ್ರ ಆರಿಸಿಕೊಳ್ಳುವಂತಹ ಜ್ಞಾಪಕದ ತಂತ್ರ! ಆ ವಸ್ತುವನ್ನು ಕಾಮಾಕ್ಷಿಯು ತನ್ನ ಕೈಯಲ್ಲಿಟ್ಟುಕೊಂಡಿದ್ದಳು. ಅದನ್ನು ಅವನು ತನಗೆ ಬೇಕೆಂಬುದಾಗಿ ಇಚ್ಛಿಸಿದನು. ಅವಳು ಕೊಡಲಿಲ್ಲ. ಅವನು ಗದರಿಸಿದನು; ಅದಕ್ಕೂ ಅವಳು ಹೆದರಲಿಲ್ಲ. ಅವನ ಅಟ್ಟಹಾಸವೆಲ್ಲವೂ ನಿಷ್ಫಲವಹೊಂದಲು, ಅವನ ಮೊಂಡತನವು ಅಧಿಕವಾಯಿತು. ಅವಳು ಆ ಸಾಮಾನನ್ನು ಕೈಯಲ್ಲಿ ಬಿಗಿಯಾಗಿ ಮುಚ್ಚಿಟ್ಟುಕೊಂಡಿದ್ದಳು. ಅವನು ಅಹಂಕಾರದೊಡನೆ ಅವಳ ಕೈಯ್ಯನ್ನು ಹಿಡಿದು ತಿರುವಿ ಅದನ್ನು ಬಲವಂತದಿಂದ ಕಿತ್ತುಕೊಳ್ಳಲು ಯತ್ನಿಸಿದನು. ಅವಳೂ ಕೂಡ ಸ್ವಲ್ಪದರಲ್ಲಿ ಬಿಡಲಿಲ್ಲ. ಬಹಳ ಬಲವಾಗಿಯೇ ಅವನನ್ನು ಎದುರಿಸಿ ನಿಂತಳು ಕೊನೆಗೆ........ ಫಟ್!—ಅವಳ ಬಲಗೈಯ್ಯಲ್ಲಿದ್ದ ಕನ್ನಡಿ ಬಳೆ ಅವನ ಕ್ರೂರವಾದ ಹಿಡಿತದಲ್ಲಿ ಒಡೆಯಿತು. ಹೌದು, ಆಗಲೂ ಕೂಡ ಅವಳ ಕೈಯಲ್ಲಿದ್ದುದು ಒಂದೇ ಒಂದು ಬಳೆ. ಈಗಿದ್ದ ದಾರಿದ್ರ್ಯವು ಆಗಲೂ ಅವರಲ್ಲಿ ಮನೆ ಮಾಡಿತ್ತು. ಅನಿರೀಕ್ಷಿತವಾಗಿ ಬಳೆಯು ಒಡೆದುಹೋಗಲಾಗಿ, ಅವಳ ಹಿಡಿತವು ತಟ್ಟನೆ ಸಡಿಲಹೊಂದಿತು. ಸ್ವಾಭಾವಿಕವಾಗಿ ಅವಳ ಕಣ್ಣಿ

ನಿಂದ ನೀರು ಹರಿಯತೊಡಗಿತು. ಅವಳ ಕಣ್ಣೀರನ್ನು ನೋಡಿದ ಮೇಲಂತೂ ಆ ಮೂರ್ಖನ ಆನಂದವು ಇನ್ನೂ ಇಮ್ಮಡಿಯಾಗಿ ಅವನು ಬೇಕೆಂದೇ ಅವಳ ಮತ್ತೊಂದು ಕರದಲ್ಲಿದ್ದ ಬಳೆಯನ್ನೂ ಸಹ ಒಡೆದು ಬಿಟ್ಟನು. ಹೌದು. ಬೇಕುಬೇಕೆಂದೇ ಅವನು ಹಾಗೆ ಮಾಡಿದನು. ತಕ್ಷಣ ಅವಳ ನಯನಗಳಿಂದ ದಡದಡವೆಂದು ಜಲವು ಹೊಮ್ಮಿ ಸುರಿಯು ಲಾರಂಭಿಸಿತು. ಅವಳು ತನ್ನ ಕೈಯಲ್ಲಿದ್ದ ಆಟದ ಸಾಮಾನನ್ನು ದೂರ ಎಸೆದು, ಸ್ತ್ರೀಸ್ವಭಾವಕ್ಕನುಗುಣವಾಗಿ ತನ್ನ ಪ್ರತಿಕಾರವನ್ನು ಸಾಧಿಸಿ ಕೊಂಡಳು.

"ಇನ್ನು ಬೇಕಾದರೆ ತೆಗೆದುಕೊಂಡು ಹೋಗೋ ಧಾಂಡಿಗ! ಯಾಕೋ ನನ್ನ ಬಳೆಯನ್ನು ಒಡೆದೆ? ಆಟದ ಸಾಮಾನು ಬೇಕಾದಲ್ಲಿ ನನ್ನ ಬಳೆಯನ್ನು ಹೀಗೆ ಒಡೆಯಬೇಕೇನೋ? ಅದನ್ನು ನೀನೇ ತೆಗೆದು ಕೊಂಡು ಹೋಗು! ನನಗೇನೂ ಬೇಕಾಗಿಲ್ಲ ಅದು!........"

ಸಂಪೂರ್ಣವಾಗಿ ಮರೆತುಹೋಗಿದ್ದ ಆ ಸನ್ನಿವೇಶವು ಈಗ ಸುಂದರನ ನೆನಪಿಗೆ ಬಂದಿತು. ಅದು ಸಣ್ಣ ವಿಷಯವೇ ಹೌದು. ಮದುವೆಯಾದ ಮೇಲೆ ಇತರ ಸಮಯಗಳಲ್ಲಿ ನೆನಪಿಗೆ ಬಂದಿದ್ದರೆ ಅದನ್ನು ಕುರಿತು ಈರ್ವರೂ ಕೂಡಿ ಒಮ್ಮನಸ್ಸಿನಿಂದ ನಗಾಡಿರಬಹುದು. ಅದರೆ ಅದೇಕೋ ಅದು ಹಾಗೆ ನೆರವೇರಲಿಲ್ಲ. ಇದೇ ತಾನೇ ಅದು ಜ್ಞಾಪಕಕ್ಕೆ ಬಂದಿತು. ಆ ನೆನಪಿನಿಂದ ಅವನಿಗೆ ಈಗ ಉಂಟಾದುದು ಕೇವಲ ಹುಮ್ಮಸ್ಸಿನ ನಗೆ ಯಲ್ಲ; ನಗುವಿಗಿಂತ ಆಳವಾದ ವಿಷಯರಹಿತವಾದ ಮತ್ತೊಂದು ತರ ಹದ ಅನುಭವ. ಅದೇ ಜ್ಞಾಪಕಶಕ್ತಿಯ ಅನುಭವ. ಅದೇ ಜ್ಞಾಪಕ ಶಕ್ತಿಯ ವಿನೋದವೋ ಎಂಬಂತೆ!

೩

"ಕಾಮಾಕ್ಷಿ! ನನ್ನ ಮೇಲೆ ನಿನಗೆ ಕೋಪವಿಲ್ಲವಲ್ಲಾ?" ಎಂದು ಅವಳ ಕೈಯನ್ನು ಹಿಡಿದುಕೊಂಡು ಪುನಃ ಕೇಳಿದನು ಸುಂದರ.

"ಏಕೆ ಕೋಪ?"

" ನಾನು ನಿನ್ನ ಕನ್ನಡಿಯ ಬಳೆಗಳನ್ನು ಒಡೆದುದು ನಿನಗೆ ನೆನಪಿದೆಯೇ ?"

" ಇದೆ. ಅದರಿಂದ ಈಗ ಏನಾಗಬೇಕು ?"

ಕಾಮಾಕ್ಷಿಗೆ ಮುಂಚೆ ಇದ್ದ ಮನಸ್ಸಿನ ಪರಿಸ್ಥಿತಿಯು ಈಗ ಸುಂದರನಿಗೆ ಅನುಭವವಾಗಿತ್ತು. ಅವನ ಹೃದಯದಲ್ಲಿ ಎಂದೂ ಇಲ್ಲದ ವೇಗದಲ್ಲಿ ಪ್ರೇಮವು ಬಂದು ಬಿರುಗಾಳಿಯಂತೆ ಹೊಡೆಯುತ್ತಲಿದ್ದಿತು ಅವನ ಹೃದಯದಲ್ಲಿ ಕರುಣೆಯ ಚಿಲುಮೆಯು ಹೊಮ್ಮಿ ಅವನು ಹೇಳಿದ ಪ್ರತಿಯೊಂದು ಮಾತಿನಲ್ಲಿಯೂ ಉಕ್ಕಿ ಸುರಿಯುತ್ತಲಿದ್ದಿತು.

" ಕಾಮಾಕ್ಷಿ, ಏನಾಶ್ಚರ್ಯವಿದು ! ಹಿಂದೆ ಸಂಭವಿಸಿದುದೇ ಈಗ ಬೇರೊಂದು ವಿಧದಲ್ಲಿ ನಡೆಯುತ್ತಲಿದೆ ! ಆಗ ನಿಷ್ಕಾರಣವಾಗಿ—ಮೊಂಡುತನದೊಡನೆ—ನಿನ್ನ ಕನ್ನಡಿ ಬಳೆಗಳನ್ನು ಒಡೆದೆ. ಈಗ ದಿಕ್ಕುತೋಚದೆ–ಹಣದ ನಿಮಿತ್ತವಾಗಿ -ನಿನ್ನ ಚಿನ್ನದ ಬಳೆಗಳನ್ನು ಮಾರುತ್ತೇನೆ. ಆದರೆ ಎರಡಕ್ಕೂ ವ್ಯತ್ಯಾಸವೇನು ? ಒಂದೂ ಇಲ್ಲ. ನಾನು ಯಾವಾಗಲೂ ಒಂದೇ ವಿಧವಾಗಿರುವೆನು. ಆಗ ಬಾಲ್ಯಾವಸ್ಥೆ ಅಷ್ಟೆ. ಆದರೆ—ನೀನಾದರೋ—ಆಗ ಚಿಕ್ಕವಳಾಗಿದ್ದಾಗಲೂ ಸರಿ, ಈಗ ದೊಡ್ಡವಳಾಗಿರುವಾಗಲೂ ಸರಿ—ಒಂದೇ ವಿಧವಾಗಿಯೇ ಇದ್ದೀಯೆ ; ನನ್ನ ಹತ್ತಿರದಲ್ಲಿ ಅದೇ ತರಹದ ಪ್ರೀತಿಯಿಂದಿರುವಿ, ಅದೇ ಚಿನ್ನದ ಹೃದಯದೊಡನೆಯೇ ಇದ್ದೀಯೆ."

———

# ೨. ಮುನಿಯ

ಮುದುಕ ಪಟ್ಟಾಭಿಯು ವಸಂತಭವನದ ತೋಟಗಾರ. ಭವನವೆಂದರೆ ಅದು ಸಾಕ್ಷಾತ್ ಭವನವೇ ಹೌದು "ವಸಂತ ಭವನ" ವೆಂಬ ಹೆಸರು ಸಹ ಅದಕ್ಕೆ ಚೆನ್ನಾಗಿ ಹೊಂದಿಕೊಂಡಿತ್ತು. ವಸಂತನು ಸ್ವತಃ ತನ್ನ ಪುಷ್ಪ ವೈಖರಿಯನ್ನು ಇಲ್ಲಿ ತಂದು ಚೆಲ್ಲಿದಂತೆ ಒಪ್ಪಿಗಳ ಮೇಲೂ ನೀರಿನಲ್ಲೂ ನೆಲದ ಮೇಲೂ ಹೂಗಳು ಹರಡಿ ತೋಟವೆಲ್ಲವೂ ಪುಷ್ಪಮಯವಾಗಿದ್ದಿತು. ಮಲ್ಲಿಗೆ, ಜಾಜಿ, ತಾವರೆ, ಗುಲಾಬಿ, ಇನ್ನೂ ಅದೆಷ್ಟೋ ವಿವಿಧ ಪುಷ್ಪಗಳು ನೋಡುವವರ ಹೃದಯವನ್ನು ಸೆಳೆದು ಮನಸ್ಸನ್ನು ಆನಂದಗೊಳಿಸುತ್ತಿದ್ದುವು ನಗು ನಗುತ್ತಿರುವ ಈ ಪುಷ್ಪಗಳ ಗುಂಪುಗಳೆಲ್ಲವೂ ಮುದುಕ ಪಟ್ಟಾಭಿಯು ಪ್ರೀತಿಯಿಂದ ಲಾಲಿಸಿ ಪಾಲಿಸಿದುವು. ಮುದುಕನು ಹಗಲೆಲ್ಲಾ ಅವುಗಳ ಆರೈಕೆಯಲ್ಲೇ ಇದ್ದು ಪ್ರೀತಿಯಿಂದ ಬೆಳೆಸುವುದರಿಂದ ಆ ತೋಟವನ್ನು ತನ್ನ ಸ್ವಂತ ಆಸ್ತಿಯಂತೆ ಭಾವಿಸಿ ಬಹಳವಾಗಿ ದುಡಿಯುತ್ತಿದ್ದನು.

ಇವನೊಡನೆ ಸದಾ ಕಾಲವೂ ಜೊತೆಯಲ್ಲಿದ್ದು ಓಡಾಡುತ್ತಿದ್ದವನೊಬ್ಬನಿದ್ದನು. ಅವನೇ ಮುದುಕನ ಮೊಮ್ಮಗ, ಮುನಿಯ. ಅವನಿಗೆ ಐದು ವರ್ಷ ವಯಸ್ಸು. ಮನೆಯಿಂದ ವಸಂತ ಭವನಕ್ಕೆ ಮುದುಕನ ಭುಜದ ಮೇಲೆ ಹತ್ತಿ ಕುಳಿತು ಸವಾರಿ ಮಾಡುತ್ತಾ ಬರುವನು. ಮನೆಗೆ ಹಿಂದಿರುಗುವಾಗಲೂ, ಮುದುಕನ ತೋಳಿನ ಮೇಲೆ ಸವಾರಿ ಮಾಡುತ್ತಾ, "ಹೇಯ್, ಹೇಯ್" ಎಂದು ಮುದುಕನನ್ನು ಕುದುರೆಯಂತೆ ಓಡಿಸುವನು. ಮುದುಕನ ರುಮಾಲನ್ನು ಲಗಾಮಿನಂತೆ ಹಿಡಿದು ಆಡಿಸುವನು.

ಕುದುರೆಯೂ ಸಹ ಬಹಳ ಸಾಧುವಾಗಿ ನಗುನಗುತ್ತಾ ನಡೆಯುವುದು. ಓಡಲಾರದ ಕುದುರೆ ಅದು ; ಮುದಿ ಕುದುರೆ !

ಈ ಮುದುಕನಿಗೊಬ್ಬ ಮಗಳು. ಅವಳ ಮಗನೇ ಮುನಿಯ. ಅವಳು ಮುನಿಯನನ್ನು ತಬ್ಬಲಿಯಾಗಿ ಬಿಟ್ಟು ಸತ್ತು ಹೋದಳು. ಈಗ ಮುನಿಯನನ್ನು ಹೊರತು ಮುದುಕನು ಇನ್ನಾರಿಗಾಗಿಯೂ ಈ ಲೋಕದಲ್ಲಿ ಜೀವಿಸಿರಬೇಕಾಗಿರಲಿಲ್ಲ ಮುದುಕನುಂಟು, ಅವನ ಹುಡುಗನುಂಟು, ತೋಟವುಂಟು.

ಮುದುಕನು ಆ ತೋಟದ ಹೂಗಳನ್ನು ಅಷ್ಟೊಂದು ಶ್ರಮ ವಹಿಸಿ ಪೋಷಿಸುತ್ತಿರುವನಲ್ಲಾ; ಇವನ ಬಳಿಕ ಅವುಗಳನ್ನು ಇವನಂತೆ ಗಮನಿಸು ವವರಾರಿರುವರು ? ಅದೂ ಕೂಡ ದೊಡ್ಡ ಮಾತಲ್ಲ, ಇವನ ಬಳಿಕ ಆ ಅರಿಯದ ಪುಟ್ಟ ಬಾಲಕನನ್ನು ಯಾರು ಇವನು ನೋಡಿಕೊಂಡಂತೆ ನೋಡಿಕೊಳ್ಳುವರು ? ನಗುನಗುತ್ತಿರುವ ಎಸಳುಗಳುಳ್ಳ ಸೂರ್ಯಕಾಂತಿ ಯನ್ನೋ ಯಾವುದಾದರೂ ಹೂವನ್ನೋ ನೋಡುವಾಗ ಮುದುಕನಿಗೆ ತಕ್ಷಣ ನಗುನಗುತ್ತಿರುವ ಮಗು ಮುನಿಯನ ನೆನಪೂ ಅದರ ಜೊತೆಯ ಲ್ಲಿಯೇ ವ್ಯಸನವೂ ಕೂಡಿ ಒಂದಾಗಿ ತೋರುವುದು. ಕೆಲಸದ ನಡುವೆ ಕೊಂಚ ಹಿಂದಿರುಗಿ ಮುನಿಯನನ್ನು ದೃಷ್ಟಿಸುವನು. ಮುನಿಯನ ನಗು ವಿನಲ್ಲಿ ಕೊಂಚ ಸಮಾಧಾನ ಹೊಂದುವನು. ಆದರೆ ಹೆದರಿಕೆಯು ಒಳ ಗೊಳಗೇ ವಿಷಕ್ರಿಮಿಯಂತೆ ಕೆಲಸಮಾಡುತ್ತಲೇ ಇರುವುದು. ಇವನ ಸುತ್ತ ಮುತ್ತಲೂ ಪುಷ್ಪ, ಸುವಾಸನೆ, ಸೌಂದರ್ಯ. ಇವನ ಹೃದಯ ದಲ್ಲಿ ಬಳಲಿಕೆ, ಮುಪ್ಪು, ಹುಡುಗನ ನೆನಪು, ಎರಡಕ್ಕೂ ನಡುವೆ ತೆರೆ ಯಂತೆ ಮರೆಸುವ ಮೌನ.

೨

ಈ ತೋಟಕ್ಕೊಂದು ರಾಜನೂ, ರಾಣಿಯೂ ಉಂಟು. ಯಜ ಮಾನನ ಮಗನೂ ಮಗಳೇ ಅವರು. ಮಗನ ಹೆಸರು ದಾಮೋದರ. ಮುನಿಯನಿಗಿಂತ ಒಂದೇ ಒಂದು ವರ್ಷ ಹಿರಿಯನು. ಮಗಳ ಹೆಸರು ಧನಂ; ದಾಮೋದರನಿಗಿಂತ ಎರಡು ವರ್ಷ ಹಿರಿಯಳು. ಇವರುಗಳೇನು

ತೋಟಕ್ಕೆ ರಾಜ, ರಾಣಿ? ಸಂದೇಹವಿಲ್ಲದೆ ಇವರುಗಳೇ ಹೌದು. ಅಪ್ಪನೂ, ಅಮ್ಮನೂ ಹೆಸರಿಗೆ ಮಾತ್ರವೇ ಯಜಮಾನರು. ಈ ಮಕ್ಕಳೇ ತೋಟದಲ್ಲಿ ನಿಜವಾಗಿಯೂ ರಾಜ್ಯಪರಿಪಾಲನೆ ಮಾಡುವವರು. ಅವ ರೊಳಗೆ ತೋಟವನ್ನು ವಿಭಾಗಿಸಿಕೊಂಡುಬಿಟ್ಟಿದ್ದರು. ಮನೆಗೆ ಬಲಪಾರ್ಶ್ವ ದಲ್ಲಿಯೂ ಮುಂಭಾಗದಲ್ಲಿಯೂ ಇರುವುದು ರಾಜನದು; ಎಡ ಪಾರ್ಶ್ವದ ಲ್ಲಿಯೂ ಹಿಂಭಾಗದಲ್ಲಿಯೂ ಇರುವುದು ರಾಣಿಯದು. ರಾಜನಿಗೂ ರಾಣಿಗೂ ತೋಟವೆಂದರೆ ಬಹಳ ಪ್ರೀತಿಯೇನೊ ಹೌದು. ಆದರೆ ಜೊತೆಗೆ ತೋಟದವನ ಮೇಲೂ ಕೂಡ ಅವರುಗಳಿಗೆ ಬಹಳ ಪ್ರೇಮ. ಮತ್ತೂ ಮುನಿಯನೆಂದರೆ ಪ್ರಾಣಸ್ನೇಹ.

ಒಂದು ದಿನ ಸಂಜೆ ಮೂರು ಘಂಟೆಗೆ ದಾಮೋದರನೂ ಧನ ಲಕ್ಷ್ಮಿಯೂ ಅಡಿಗೆಯ ಮನೆಯಲ್ಲಿ 'ಟಿಫನ್' ತಿನ್ನುತ್ತಿದ್ದರು. ಆ ದಿನ 'ಟಿಫನ್' ಬೋಂಡ. ಧನಳಿಗೆ ಬದನೆಯಕಾಯಿ ಬೋಂಡವೆಂದರೆ ಇಷ್ಟ. ದಾಮೋದರನಿಗೆ ಬಾಳೆಯಕಾಯಿ ಬೋಂಡವೆಂದರೆ ಇಷ್ಟ. ಈ ರೀತಿ ಯಾಗಿ ಅವರುಗಳು ತಂತಮ್ಮ ಇಷ್ಟದಂತೆ ಬೋಂಡಗಳನ್ನು ಜಮಾಯಿ ಸುತ್ತಲಿದ್ದರು. ಕೊನೆಗೆ ಇಬ್ಬರೂ ಎರಡೆರಡು ಬೋಂಡಗಳನ್ನು ಕೈಯಲ್ಲಿ ತೆಗೆದುಕೊಂಡು ಅಡಿಗೆಯ ಮನೆಯಿಂದ ಹೊರಗೆ ಬಂದರು. ಮಕ್ಕಳಿಗೆ ಅನ್ನ ಅರಗಲು ಭಗವಂತನು ಅದಾವುದೋ ಉಪಾಯ ಮಾಡಿರುವ ನಲ್ಲವೇ?

ಈ ಸಮಯದಲ್ಲಿ ಅವರುಗಳು ತೋಟದಲ್ಲಿ ಮುದುಕನು ಮುನಿಯ ನನ್ನು ಹೆಗಲಮೇಲೆ ಕುಳ್ಳಿರಿಸಿಕೊಂಡು ಹೋಗುತ್ತಿರುವುದನ್ನು ಕಂಡರು.

ಅದನ್ನು ನೋಡುತ್ತಲೇ "ಮುನಿಯನಿಗೊಂದು ಬೋಂಡವನ್ನು ಕೊಡೋಣವೇ?" ಎಂದು ಗುಟ್ಟಾಗಿ ತನ್ನ ತಮ್ಮನನ್ನು ಕೇಳಿದಳು ಧನಂ.

"ಅಮ್ಮನು ಬೈಯುವಳಲ್ಲಾ!" ಎಂದ ದಾಮೋದರ.

"ಅಮ್ಮನು ಮಲಗಿರುವಳಲ್ಲಾ. ಬಾ, ಹೋಗಿ ಮೆಲ್ಲಗೆ ಒಂದು ಕೊಡೋಣ.''

ಈ ರೀತಿಯಾಗಿ ಅವರುಗಳು ಹಿತ್ತಲ ಕಡೆಯ ಬಾಗಿಲ ಬಳಿ ಬಂದು ಬಳಿಕ—ಪುನಃ ಕೊಂಚ ಯೋಚಿಸಿದರು. ಅವರುಗಳ ಕೈಯಲ್ಲಿ ಎರಡೆರಡು ಬೋಂಡಗಳು ಇದ್ದವು.

"ಒಂದನ್ನು ಇಲ್ಲಿಯೇ ತಿಂದು ಬಿಡೋಣ. ಇನ್ನೊಂದನ್ನು ಅವನಿಗೆ ಕೊಡೋಣ" ಎಂದನು ದಾಮೋದರ.

"ಸರಿ, ಆಗ ಅವನಿಗೆ ಒಂದು ಬದನೆಯಕಾಯಿ ಬೋಂಡ, ಒಂದು ಬಾಳೆಯಕಾಯಿ ಬೋಂಡ ಸಿಗುವುದು" ಎಂದಳು ಧನಂ.

ಈಗ ಅವರುಗಳು ತಿನ್ನಬೇಕಾದುದು ಕೊನೆಯ ಬೋಂಡವಾದುದರಿಂದ, ಅವರುಗಳಿಗೆ ಅದನ್ನು ಶೀಘ್ರವಾಗಿ ತಿಂದುಬಿಡಲು ಮನಸ್ಸು ಬರಲಿಲ್ಲ. ಸಾವಧಾನವಾಗಿ ರುಚಿ ನೋಡುತ್ತಾ ತಿಂದರು. ತಿಂದು ಮುಗಿದ ಕೂಡಲೇ ಪುನಃ ಹಿತ್ತಲ ಕಡೆಗೆ ಹೊರಟರು.

"ಅಕೋ, ಅಲ್ಲಿ ಮುನಿಯ ಇದ್ದಾನೆ. ನಾನು ಹೋಗಿ ನನ್ನದನ್ನು ಬೇಗ ಕೊಟ್ಟುಬಿಡುತ್ತೇನೆ." ಎಂದು ಹೇಳಿ, ಬೇಗ ಬೇಗ ನಡೆದನು ದಾಮೋದರ.

"ಮುನಿಯಾ, ಇಕೋ, ಬೋಂಡ ಬೇಕೇ?" ಎಂದನು.

ಈಗ ಮುನಿಯನು ಅದನ್ನು ಕೈ ನೀಡಿ ತೆಗೆದುಕೊಳ್ಳುವ ಸಮಯ; ಧನಳೂ ಸಮೀಪಿಸಿಬಿಟ್ಟಳು. ತನ್ನ ಬೋಂಡವನ್ನು ಮುಂದಕ್ಕೆ ನೀಡುತ್ತಿರುವಷ್ಟರಲ್ಲಿ, "ಏನೋ ಮಾಡುತ್ತಿರುವಿರಿ ಅಲ್ಲಿ, ಧಾಂಡಿಗರಾ?" ಎಂಬ ಧ್ವನಿ ಕೇಳಿಸಿತು.

ಅಮ್ಮನು ಅವರುಗಳನ್ನು ನೋಡಿಬಿಟ್ಟಳು!

"ಲೋ ದಾಮೂ, ಧನಂ! ಬನ್ನಿ, ಇಲ್ಲಿ, ಇಬ್ಬರೂ!" ಎಂದಳು.

ಮುನಿಯನಿಗೆ ಬೋಂಡವನ್ನು ಕೊಟ್ಟು ಹೋಗೋಣವೇ ಎಂದು ದಾಮೋದರನ ಆಲೋಚನೆ. ಆದರೆ ಅಮ್ಮನ ಭಯ. ಆದುದರಿಂದ ಬೋಂಡವನ್ನು ಕೊಡದೆಯೇ ಹಿಂದಿರುಗಿದನು. ಧನಳೂ ಸಹ ಹೆದರಿ ಹಿಂದಿರುಗಿದಳು. ಅಂತೂ ಈರ್ವರೂ ಕೈಯಲ್ಲಿ ಆ ಕಳ್ಳ ಬೋಂಡಗಳ ಸಹಿತ ಹಿಂದಿರುಗಿದರು.

" ಏನೋ ದಾಮೂ, ಏನೇ ಧನಂ, ನಿಮಗಾಗಿ 'ಸ್ಪೆಷಲಾ'ಗಿ ಬೋಂಡ ಮಾಡಿಕೊಟ್ಟರೆ, ಅದನ್ನು ಹೋಗಿ ಪಟ್ಟಾಭಿ, ಮುನಿಯ, ಸೇವಕರು, ಭಿಕ್ಷುಕರು, ಎಲ್ಲರಿಗೂ ತೆಗೆದುಕೊಂಡು ಹೋಗಿ ಕೊಡಹೇಳಿತೇನು? ಕಂತ್ರಿಗಳು."

ಇದನ್ನು ಹೇಳುತ್ತಿರುವಾಗಲೇ ಇಬ್ಬರಿಗೂ ಪಕ್ಷಪಾತವಿಲ್ಲದೆ, ಕೆನ್ನೆಗೊಂದು ಜಿಗುಟು. " ಬರು ಬರುತ್ತಾ ಕೆಟ್ಟುಹೋದುವು ಕತ್ತೆಗಳು! ಇನ್ನು ಮೇಲೆ ಇಂತಹ ತಲೆಹರಟೆ ಮಾಡಿದರೆ ಜೋಕೆ; ನಿಮ್ಮನ್ನು ಹಗ್ಗ ಬಿಗಿದು ಎಳೆಸುತ್ತೇನೆ."

ಬೈಗಳ ಜೊತೆಗೆ, ಧನಳೂ ದಾಮುವೂ ಬೋಂಡವನ್ನು ಹಾಕಿಕೊಂಡು ನುಂಗಿದರು.

ಇಷ್ಟರೊಳಗೆ, " ಎನೋ ಪಟ್ಟಾಭಿ!" ಎಂದು ಕರೆದಳು ತಾಯಿ.

" ಏನು ತಾಯಿ?" ಎಂದು ಬಂದನು ಮುದುಕ.

"ಇಷ್ಟಾದ ಮೇಲೆ ಮುನಿಯನನ್ನು ಇಲ್ಲಿಗೆ ಕರೆತರಬಾರದು, ಗೊತ್ತೇ? ನಿನ್ನನ್ನು ಇಲ್ಲಿ ಇಟ್ಟಿರುವುದು ಕೆಲಸಕ್ಕೋ ಅಥವಾ, ನಿಮ್ಮ ಮನೆಯಲ್ಲಿರುವವರನ್ನೆಲ್ಲಾ ಇಲ್ಲಿಗೆ ಕರೆತರುವುದಕ್ಕೋ? ಮನೆಯಲ್ಲಿ ಏನಾದರೂ ಕಳೆದುಹೋದರೆ, ನಿನ್ನನ್ನೇ ಹಿಡಿಯುವೆನು; ಜೋಕೆ! ನಿನ್ನೆ ಮಗುವಿನ ಪೀಪಿ ಕಾಣಲಿಲ್ಲ. ಎಲ್ಲವೂ ಆ ಕಳ್ಳ ಮುನಿಯನ ಕೆಲಸವಾಗಿಯೇ ಇರಬೇಕು. ಅಲ್ಲಿಗೂ ಇಲ್ಲಿಗೂ ನುಗ್ಗಿ, ಮನೆಯಲ್ಲಿರುವ ಸಾಮಾನುಗಳೆಲ್ಲವನ್ನೂ ಕದ್ದುಕೊಂಡು ಹೋಗಿಬಿಡುವುದು! ಇನ್ನು ಮೇಲೆ ಅವನನ್ನು ಇಲ್ಲಿಗೆ ಕರೆತರಬಾರದು; ತಿಳಿಯಿತೇ?"

" ಸರಿ ತಾಯಿ." ಎಂದನು ಪಟ್ಟಾಭಿ.

ಮರುದಿನ ಮುನಿಯನು ಪಟ್ಟಾಭಿಯೊಡನೆ ಬರಲಿಲ್ಲ. ಪಟ್ಟಾಭಿ ಮಾತ್ರ ಬಂದು ತೋಟದಲ್ಲಿ ಏನೋ ಕೆಲಸಮಾಡುತ್ತಿದ್ದನು. ದಾಮೋದರನೂ ಧನಳೂ ಕಿಟಕಿಯ ಮೂಲಕ ಅವನನ್ನು ನೋಡಿದರು.

" ಮುನಿಯ, ಪಾಪ, ಈವತ್ತು ಬರಲಿಲ್ಲ," ಎಂದಳು ಧನಳು ಮೊದಲು.

"ಹೌದು ಪಾಪ!" ಎಂದನು ದಾಮೂ.

ಮರುದಿನವೂ ಮುನಿಯ ಬರಲಿಲ್ಲ.

೩

ಮುನಿಯನು ಬಾರದೆಯೇ ಕೆಲ ದಿನಗಳು ಕಳೆದವು.

ಒಂದು ದಿನ ದಾಮುವೂ ಧನಳೂ ಪಟ್ಟಾಭಿಯನ್ನು ಸಮೀಪಿಸಿ "ಯಾಕೋ ಈಗ ನೀನು ಮುನಿಯನನ್ನು ಕರೆಕೊಂಡು ಬರುವುದಿಲ್ಲ?" ಎಂದು ಕೇಳಿದರು.

ಪಟ್ಟಾಭಿಯ ನೇತ್ರಗಳು ಅಶ್ರುಬಿಂದುಗಳಿಂದ ತುಂಬಿದುವು.

"ಅವನಿಗೆ ಜ್ವರ" ಎಂದನು ಪಟ್ಟಾಭಿ.

"ಇಲ್ಲ, ಅಮ್ಮನು ಅಂದು ಕೋಪಿಸಿಕೊಂಡಳೆಂದು ಅಲ್ಲವೇ?" ಎಂದು ಕೇಳಿದಳು ಧನಂ.

"ಇಲ್ಲ, ನಿಜವಾಗಿಯೂ ಅವನಿಗೆ ಜ್ವರ. ಅಮ್ಮನು ಆ ದಿನ ಏನೋ ಕೋಪದಲ್ಲಿ ಹೇಳಿದರು. ಹಾಗೆಯೇ ಹೇಳುವರು. ಆದರೂ ಕೂಡ ಕರೆತಂದರೆ ಏನೂ ಹೇಳಲಾರರು. ಅಮ್ಮನ ಗುಣ ನನಗೆ ಗೊತ್ತಿಲ್ಲವೇನು? ಅವರಂತಹ ಒಳ್ಳೆಯ ಗುಣ ಯಾರಿಗುಂಟು? ಮುನಿಯನಿಗೆ ನಿಜವಾಗಿಯೂ ಜ್ವರ. ಅದರಿಂದಲೇ ಅವನನ್ನು ಕರೆತರಲಿಲ್ಲ."

"ಹಾಗಾದರೆ ಜ್ವರ ಇಳಿದ ಮೇಲೆ ಕರೆತರುತ್ತೀಯಾ?" ಎಂದು ಕೇಳಿದಳು ಧನಂ.

"ಆಗಲಿ ತಾಯಿ!" ಎಂದನು ಪಟ್ಟಾಭಿ.

ಬಳಿಕ ಮಕ್ಕಳಿಬ್ಬರೂ ಆಟವಾಡಲು ಓಡಿ ಹೋದರು.

ಆದರೆ ಮುದುಕನು ಬಹಳ ಹೊತ್ತಿನವರೆಗೆ ಅವರುಗಳನ್ನು ದೃಷ್ಟಿಸುತ್ತಲೇ ನಿಂತಿದ್ದನು. ಅವನ ಕಣ್ಣುಗಳಿಂದ ಎರಡು ಬಿಂದುಗಳು ಉರುಳಿದವು. ಕೈಯಿಂದ ಕಣ್ಣನ್ನು ಒರಸುತ್ತಾ ಪುನಃ ಹುಲ್ಲನ್ನು ಕೆದಕಲು ಪ್ರಾರಂಭಿಸಿದನು.

೪

ಮುನಿಯನು ತೋಟಕ್ಕೆ ಬಾರದೇ ಮೂರು ವಾರಗಳು ಕಳೆದವು.

ಇಷ್ಟರೊಳಗೆ ದೀವಳಿಗೆ ಹಬ್ಬವು ಸಮೀಪಿಸಿತು; ಕೊನೆಗೆ ಬಂದೇ ಬಿಟ್ಟಿತು. ಸುಡಲು, ಅಪ್ಪನು ತುಂಬ ಪಟಾಕಿಗಳನ್ನು ಕೊಂಡಿರಿಸಿದ್ದರು. ಸೂಜಿ ಪಟಾಕಿ, ಆನೆ ಪಟಾಕಿ, ಮತಾಪುಗಳು, ಕಂಬಿ ಮತಾಪು, ವಿಷ್ಣು ಚಕ್ರ, ಬಾಣ ಬಿರುಸುಗಳು, ಅದು ಇದು ಎಂದು ಹಲವು ತರಹೆಯವು. ಅಪ್ಪನಿಗೂ ಅಮ್ಮನಿಗೂ ತಿಳಿಯದಂತೆ ಧನಳು ತನ್ನ ಭಾಗದಿಂದ ಕೆಲವನ್ನು ಆರಿಸಿ, ಮುನಿಯನಿಗೆಂದು ರಹಸ್ಯವಾಗಿ 'ತೆಗೆದಿಟ್ಟಿದ್ದಳು. ಪಟ್ಟಾಭಿಯ ಬಳಿಗೆ ಹೋಗಿ ಮನೆಗೆ ಹೋಗಿ ಮುನಿಯನಿಗೆ ಕೊಡು" ಎಂದು ಮೆಲ್ಲಗೆ ಕೊಟ್ಟುಬಿಡುವೆನು ಎಂದು ಆಲೋಚಿಸುವಾಗಲೇ, ಅವಳರಿವಿಲ್ಲದೆ ಅವಳ ತುಟಿಗಳಲ್ಲಿ ನಸುನಗು ಮೂಡಿತು.

ಪಟ್ಟಾಭಿಯು ದೂರದಲ್ಲಿ ಬರುತ್ತಿರುವಾಗಲೇ ಧನಳು ಅವನನ್ನು ನೋಡಿಬಿಟ್ಟಳು. ಅವನು ಹಿತ್ತಲ ಕಡೆಗೆ ಬರುವವರೆವಿಗೂ ಕಾದಿದ್ದು, "ಪಟ್ಟಾಭಿ, ಮುನಿಯನಿಗೆಂದು ಕೊಂಚ ಪಟಾಕಿ ತೆಗೆದಿಟ್ಟಿದ್ದೀನೆ, ತೆಗೆದು ಕೊಂಡು ಹೋಗು" ಎಂದಳು.

ಪಟ್ಟಾಭಿಯ ನಯನಗಳಿಂದ ಕಣ್ಣೀರು ಪಳ್ಳನೆ ಹೊಮ್ಮಿ ಸುರಿಯಿತು.

"ಅಮ್ಮಾ, ನನ್ನ ಮುನಿಯ ಸತ್ತುಹೋದನಲ್ಲಾ!" ಎಂದು ಹಲುಬಿದನು.

ಧನಂ ಬೆಚ್ಚಿ ಬಿದ್ದಳು "ಯಾವಾಗ? ಯಾವಾಗ?" ಎಂದಳು. ಪಟ್ಟಾಭಿಯನ್ನು ನೋಡುತ್ತಿರುವಾಗಲೇ ಅವಳ ಎರಡು ಕಣ್ಣುಗಳೂ ಭಾವಿ ಗಳೆರಡರಂತೆ ಕಣ್ಣೀರಿನಿಂದ ತುಂಬಿದುವು.

"ಈವತ್ತಿಗೆ ನಾಲ್ಕು ದಿನವಾಯಿತು" ಎಂದನು ಪಟ್ಟಾಭಿ.

"ಮೊನ್ನೆಯ ದಿವಸ ನಾನು ಕೇಳಿದಾಗ ವಾಸಿಯಾದಮೇಲೆ ಕರೆತರುತ್ತೇನೆಂದು ಹೇಳಿದೆಯಲ್ಲಾ!" ಎಂದಳು ಧನಂ.

ಪಟ್ಟಾಭಿ ಉತ್ತರವಾವುದೂ ಕೊಡಲಿಲ್ಲ. ಬಳಿಕ, "ಹೌದು, ಹೇಳಿದೆ. ಆದರೂ ಅವನು ಸತ್ತು ನಾಲ್ಕು ದಿನವಾಗಿಹೋಯಿತು" ಎಂದನು.

ಇಷ್ಟರೊಳಗಾಗಿ ಮನೆಯೊಳಗಿಂದ ಗದ್ದಲ ಕೇಳ ಬಂದಿತು.

"ಅಮ್ಮಾ, ನನ್ನ ಬಂದೂಕವನ್ನು ಕಾಣಲಿಲ್ಲವಲ್ಲಾ" ಎಂದು ಕೂಗುತ್ತಿದ್ದನು ದಾಮೋದರ.

"ಚೆನ್ನಾಗಿ ಹುಡುಕಿನೋಡೋ" ಎಂದಳು ತಾಯಿ.

"ಎಲ್ಲಾ ನೋಡಿದೆ, 'ಕ್ಯಾಪ್' ಸುಡೋ ನನ್ನ ಬಂದೂಕ ಎಲ್ಲೂ ಕಾಣಲಿಲ್ಲ." ಎಂದು ಪುನಃ ಗಟ್ಟಿಯಾಗಿ ಕಿರಿಚಿಕೊಂಡನು ದಾಮೋಧರ.

"ಎಲ್ಲಾ ಆ ಪೋಲೀ ಹುಡುಗ ಮುನಿಯನೇ ಕದ್ದುಕೊಂಡು ಹೋಗಿರಬಹುದು." ಎಂದು ಅಪ್ಪನ ಬಲವಾದ ಧ್ವನಿಯು ಧನಳ ಕಿವಿಗೆ ಎಟುಕಿತು.

ಹುಂ, ಮುನಿಯನು ಮರಣಹೊಂದಿ ನಾಲ್ಕು ದಿವಸಗಳಾಗಿ ಹೋಯಿತು. ಆದರೆ ಮೂರು ವಾರವಾಗಿ ಅವನು ಮನೆಗೆ ಬಂದನೇ ಇಲ್ಲವೇ ಎಂದು ಸಹ ಅಪ್ಪನಿಗೆ ತಿಳಿಯದು. ಎಂದರೂ ಕೂಡ "ಆ ಕಳ್ಳ ಬಡ್ಡೀ ಮಗ ಮುನಿಯನೇ ಅದನ್ನು ಕದ್ದುಕೊಂಡು ಹೋಗಿರಬಹುದು!" ಎಂದು ಅಪ್ಪ ಹೇಳಿದರು. "ಪಾಪ! ಮುನಿಯ"—ಧನಳಿಗೆ ದುಃಖವೂ ಕೋಪವೂ ಒಟ್ಟಿಗೆ ಉಕ್ಕಿತು.

———

# ೩. ಮಾತೃವಾತ್ಸಲ್ಯ

" ಒಂದು ಸುಖವಾದ ಗಳಿಗೆಯಲ್ಲಿ ಅಥವಾ ಒಂದು ಪ್ರಿಯವಾದ ಆಲೋಚನೆಯಲ್ಲಿ ಇರುವ ಅಮೃತ ಶಕ್ತಿ ಎಂತಹ ವೈದ್ಯನಿಗೆ ತಾನೇ ಉಂಟು ? "

—ಅಮಿಲ್

ನಡು ಮಧ್ಯಾಹ್ನ. ಬಿಸಿಲು ಜ್ವಾಲೆ ಒಂದೇ ಪ್ರಕಾರ ಸುಡುತ್ತಿದೆ. ರಸ್ತೆಯೆಲ್ಲವೂ ಧೂಳು. ಎಲೆಗಳು ಕಾದು, ಬಾಡಿ ಬಳಲಿ ಹೋದಂತೆ ಮರಗಳಲ್ಲಿ ನೇತಾಡುತ್ತಿವೆ.

ಮನೆಯೊಳಗೂ ಸಹ, ಇದೇ ತೆರನಾದ ನಿಶ್ಶಬ್ದವೂ, ಇದೇ ತೆರನಾದ ಬಳಲಿಕೆಯೂ ಕಂಡುಬಂದವು. ಹೊರಗೆ ಭೂಮಿಯು ಬಿಸಿಲಿನ ತಾಪದಿಂದ ದುಃಖಿಸುವಂತೆ, ಒಳಗೆ ಮಲಗಿರುವ ಮಗುವು ಕೂಡ ಜ್ವರದ ದೆಸೆಯಿಂದ ಪರಿತಪಿಸುತ್ತಲಿರುವಳು. ಹೊರಗೆ ಇರುವ ಬಿಸಿಬಿಸಿ ಗಾಳಿಯೋಪಾದಿಯಲ್ಲಿ ಇರುವುದು ಜ್ವರದ ವೇಗ. ತುಟಿಗಳು ಒಣಗಿ ಹೋಗಿವೆ. ಜ್ವರವು ಅವಳನ್ನು ಹೀಗೆ ದಹಿಸಿದರೂ ಕೂಡ ಮಗುವಿನ ಸ್ವಭಾವಕ್ಕನುಸಾರವಾಗಿ, ತನ್ನ ಬೆರಳುಗಳನ್ನು ಮೂಗಿನ ಹತ್ತಿರವಿಟ್ಟು, ಜ್ವರದಿಂದ ಸುಡುವ ತನ್ನ ಉಸಿರನ್ನು ಸ್ಪರ್ಶಿಸುತ್ತಿರುವಳು.

ಮನೆಯ ಕದಗಳೆಲ್ಲವೂ ಬಿಸಿಲಿನ ತಾಪಕ್ಕಾಗಿ ಮುಚ್ಚಲ್ಪಟ್ಟಿವೆ. ಒಂದು ಹೊರತು ಕಿಟಕಿಗಳೆಲ್ಲಾ ಮುಚ್ಚಿವೆ. ಒಳಗೆಲ್ಲಾ 'ಆಸ್ಪತ್ರೆಯ ವಾಸನೆ' ಎಂಬ ಒಂದು ತೆರನಾದ ಅನುಭವ. ಖಾಯಿಲೆಯವರಿಗಾಗಿ ತೋರಿಸುತ್ತಿರುವ ಶ್ರದ್ಧೆಯೂ ಪ್ರೀತಿಯೂ ಆ ಕೊಠಡಿಯ ಸ್ವಚ್ಛತೆಯನ್ನು ನೋಡಿದೊಡನೆಯೇ ಸ್ಪಷ್ಟವಾಗುತ್ತದೆ.

ಈ ಹೊತ್ತು ಅವಳ ತಂದೆಯೂ ಸಹ ಮನೆಯಲ್ಲಿದ್ದಾರೆ. ತಾಯಿಯು ಅವರನ್ನು ಆಫೀಸಿಗೆ ಹೋಗಬೇಡಿ ಎಂದು ಹೇಳಿಬಿಟ್ಟಳು. ಪಕ್ಕದ ಹಜಾರದಲ್ಲಿ

ಅವರು ಆರಾಮ ಕುರ್ಚಿಯಲ್ಲಿ ಮಲಗಿ, ಹಗಲನಿದ್ರೆಯನ್ನು ಹೊಡೆಯುತ್ತಿರುವರು. ಅಮ್ಮನೂ ಸಹ ಪಕ್ಕದ ಕೊಠಡಿಯಲ್ಲಿ ಒಂದು ಚಾಪೆಯ ಮೇಲೆ ಕಣ್ಣುಮುಚ್ಚಿಕೊಂಡು ಮಲಗಿರುವಳು ; ಆದರೆ ಅವಳು ನಿದ್ರೆ ಮಾಡುತ್ತಿರುವಳೇ ಎಂದು ನಿಶ್ಚಯವಾಗಿ ಹೇಳಲಾಗುವುದಿಲ್ಲ.

ಪಂಕಜಳು ತನ್ನ ಬೆರಳುಗಳನ್ನು ಮೂಗಿನಿಂದ ತೆಗೆದು, ಬಿಸಿಯಾಗಿದೆಯೋ ಎಂದು ತನ್ನ ಬಲಗೆನ್ನೆಯ ಮೇಲಿಟ್ಟು ನೋಡುತ್ತಾಳೆ. ಬಳಿಕ, ಮಲಗಿದಂತೆಯೇ ಅವಳ ಕೊಠಡಿಯ ಮೇಲುಚಾವಣಿಯನ್ನೂ ಕಬ್ಬಿಣದ ತೊಲೆಯನ್ನೂ ಅಲ್ಲಿ ನೇತಾಡುವ 'ಪಂಖ' ವನ್ನೂ, ಮತ್ತೂ ಇರತಕ್ಕ "ಸ್ವಿಚ್" ಗಳನ್ನೂ ಬಳಲಿದ ಕಣ್ಣುಗಳಿಂದ ಸ್ವಲ್ಪ ಹೊತ್ತು ದೃಷ್ಟಿಸುತ್ತಾಳೆ. ಮಗುವಿನ ಮನಸ್ಸನ್ನು ಸೆಳೆಯಲು ಏನಾದರೊಂದು ಬೇಕಲ್ಲವೇ ? ಕೊನೆಗೆ ಜೊಂಪು ಹತ್ತಲು ಅವಳ ಎವೆಗಳು ಮೆಲ್ಲಗೆ "ಕಣ್ಣುಗಳನ್ನು ಸರಿಯಾಗಿ ಮುಚ್ಚಿಕೊಳ್ಳೋಣವೇ" ಎಂದು ಹಿಂಜರಿಯುತ್ತಿರುವಂತೆ ಮುಚ್ಚಿಕೊಳ್ಳುತ್ತವೆ.

ಅರ್ಧಘಂಟೆಯ ಕಾಲ ಕಳೆಯುತ್ತದೆ. ಆದರೆ ಈ ಉರಿಬಿಸಿಲಿನಲ್ಲಿ ಒಂದು ಘಂಟೆಗೂ ಮತ್ತೊಂದು ಘಂಟೆಗೂ ಬಹಳ ವ್ಯತ್ಯಾಸವಿಲ್ಲ. ಖಾಯಿಲೆ ಕೊಠಡಿಯೊಳಗೂ ಹೊರಗೆ ರಸ್ತೆಯಲ್ಲಿಯೂ ಮುಂಚೆ ಹೇಳಿದಂತೆಯೇ ಈಗಲೂ ಇದೆ

ಆದರೆ ಈಗ ಈ ನಿಶ್ಶಬ್ದತೆಯಲ್ಲಿ, ಮೃದುವಾದ ಧ್ವನಿಯಲ್ಲಿ ಹಾಡುವ ಸಂಗೀತವು ಕೇಳಬರುತ್ತದೆ. ಸುಮಾರು ಹನ್ನೆರಡು ವರ್ಷ ವಯಸ್ಸಿನ ಬಡ ಹುಡುಗನೊಬ್ಬನು ಹಾಡುತ್ತಾ, ತೆರೆದಿರುವ ಕಿಟಕಿಯ ಆಚೆ ಓಂತೆಗೆಯುತ್ತಾ ನಿಲ್ಲುತ್ತಾನೆ. ಅಮ್ಮನೂ ಅಪ್ಪನೂ ಇನ್ನೂ ನಿದ್ರೆಮಾಡುತ್ತಲಿದ್ದಾರೆ. ಕಣ್ಣನ್ನು ಮಾತ್ರ ಸುಮ್ಮನೆ ಮುಚ್ಚಿಕೊಂಡಿದ್ದ ಪಂಕಜಳು ಹಾಡಿನ ಚರಣವನ್ನು ಕೇಳಿದೊಡನೆಯೇ ಕಿಟಕಿಯ ಕಡೆಗೆ ನೋಡುತ್ತಾಳೆ. ಇದೀಗ ಮೃದುವಾದ ಸಂಗೀತವು ಅಚಲವಾದ ಗಾಳಿಯನ್ನು ತಟ್ಟಿ ಎಬ್ಬಿಸುತ್ತದೆ. ಮಧ್ಯಾಹ್ನಕಾಲದ ಶಾಂತತೆ, ಬಳಲಿಕೆ, ನಿದ್ರೆ, ಇವುಗಳಿಂದ ಇವುಗಳ ಸಾಕ್ಷಾತ್ ಸ್ವರೂಪವಾಗಿಯೇ ಈ ಸಂಗೀತವು ಹಠಾತ್ತನೆ ಉತ್ಪನ್ನವಾಯಿತೋ ಎಂಬಂತೆ !

"ಮಾರ್‌ಗಷಿ ಮಾದಂ ತಿರುವಾದರೈ ವರಪೋಗಿರದೈಯೋ" ಎಂದು ಹಾಡುತ್ತಾನೆ ಬಾಲಕ.

ಅದರೊಳಗೆ ಅಮ್ಮನು ಪಕ್ಕದ ಕೊಠಡಿಯಿಂದ ಪಂಕಜಳ ಕೊಠಡಿಗೆ ಬಂದುಬಿಟ್ಟಳು. ಈ ಹುಡುಗನನ್ನು ಕಳುಹಿಸಿಬಿಡೋಣವೇ ಅಥವಾ ಏನಾದರೂ ಸ್ವಲ್ಪ ಕೊಡೋಣವೇ ಎಂಬುದು ಅವಳ ಯೋಚನೆ.

"ಅಮ್ಮಾ! ಅವನು ಹಾಡಲಿ!" ಎನ್ನುತ್ತಾಳೆ ಪಂಕಜ. ಅಮ್ಮನೂ ಮಂಚದ ಹತ್ತಿರ ಬಂದು ಕುಳಿತುಕೊಳ್ಳುತ್ತಾಳೆ.

ಈಗ ಸಂಗೀತದ ಶಕ್ತಿಯು ಆ ಕೊಠಡಿಯನ್ನೆಲ್ಲಾ ಆವರಿಸಿಕೊಳ್ಳುತ್ತದೆ. ಖಾಯಿಲೆಯಿಂದ ನರಳುವ ಪಂಕಜಳ ಕಿವಿಗಳಲ್ಲೂ ಅಮ್ಮನ ಕಿವಿಗಳಲ್ಲೂ ನುಗ್ಗುತ್ತದೆ. ಆದರೆ ಅಪ್ಪನ ವಿಷಯವಾಗಿ ಮಾತ್ರ ಯಾವುದೊಂದೂ ನಿಶ್ಚಯವಾಗಿ ಹೇಳಲಾಗುವುದಿಲ್ಲ.

"ಲೋ! ಆ ಹುಡುಗನನ್ನು ಅಟ್ಟೋ ಆಚೆ!" ಎಂದು ನಡುಮನೆಯಿಂದ ಘರ್ಜಿಸುತ್ತಾರೆ. ಅರೆನಿದ್ರೆಯಲ್ಲಿಯೂ ಸಹ ಅವರ ಧ್ವನಿಯು ಭಯಂಕರವಾಗಿಯೇ ಇರುವುದು.

ತಲೆಯ ಬುರುಡೆಯ ಮೇಲೆ 'ಪಟಾರ್' ಎಂದು ಏಟು ತಿಂದವನಂತೆ, ಹುಡುಗನು ತಟ್ಟನೆ ಹಾಡನ್ನು ನಿಲ್ಲಿಸುತ್ತಾನೆ. ಪಂಕಜಳು ಅಮ್ಮನನ್ನು ನೋಡಲಾಗಿ, ಅಮ್ಮನು ಹುಡುಗನನ್ನು ಕುರಿತು, "ನಿಲ್ಲಿಸಬೇಡ, ನೀನು ಹಾಡಪ್ಪಾ," ಎಂದು ಹೇಳುತ್ತಾಳೆ. ಸ್ವಲ್ಪ ಹೆದರಿದ ಧ್ವನಿಯಲ್ಲಿ ಹುಡುಗನು ಪುನಃ ಹಾಡಲು ತೊಡಗುತ್ತಾನೆ.

"ಏನಿದು ಹುಚ್ಚು!" ಎಂದು ಹೇಳುತ್ತಾ ಅಪ್ಪನು ದಡದಡನೆ ಒಳಗೆ ಬರುತ್ತಾರೆ. "ಮೀನಾಕ್ಷಿ! ಇದು ಶುದ್ಧ ದಡ್ಡತನ, ಪಂಕಜಳ ಸ್ಥಿತಿಯು ಹೇಗಿದೆ ಎಂಬುದು ನಿನಗೆ ಗೊತ್ತೇ? ಡಾಕ್ಟರ್ ಹೇಳಿದುದನ್ನು ನಾನು ನಿನ್ನೊಡನೆ ಹೇಳಲು ಸಹ ಹೆದರಿದೆ. ನಿನಗೆಷ್ಟು ಹೇಳಿದರೂ ತಿಳಿಯುವುದಿಲ್ಲ!"

"ಸರಿ, ದಯವಿಟ್ಟು ನೀವೀಗ ಮಾತನಾಡಿ ಆಡಿ ಹಾಡನ್ನು ಕೆಡಿಸಬೇಡಿ."

"ಹೊಂ! ಶುದ್ಧ ದಡ್ಡತನ!" ಎಂದು ಗೊಣಗುತ್ತಾ ಅಪ್ಪನು ಪುನಃ ಆರಾಮಕುರ್ಜಿಗೆ ಹೋಗಿಬಿಡುತ್ತಾರೆ. ಶ್ರದ್ಧೆಯಿಂದ ಕೇಳುವುದರಿಂದ ಪಂಕ

ಜಳ ತುಟಿಗಳು ಒಂದರಿಂದ ಇನ್ನೊಂದು ಅಗಲುತ್ತದೆ. ಜ್ವರದಿಂದ ಕಾದು, ಮರಳಿರುವ ಅವಳ ಎರಡು ನಯನಗಳಿಂದಲೂ ಜಲಬಿಂದುಗಳು ಜ್ವರ ಜ್ವಾಲೆಯನ್ನೂ ಸಹ ಮೀರಿಕೊಂಡು, ಹೊರಹೊಮ್ಮುತ್ತವೆ. ಏಕೆ? ಯಾರಿಂದ ತಾನೆ ಹೇಳಲು ಸಾಧ್ಯ? ಆರು ವರ್ಷ ದಾಟದ ಈ ಬಾಲಕಿಯ, ಈ ಪುಟ್ಟ ರೋಗಿಯ, ಮನದಲ್ಲಿ ಅದೆಂತಹ ಭಾವನೆಗಳು ಉದ್ಭವಿಸಿರಬಹುದು? "ಅವು ಯಾವುವು? ಕಳೆದ ಜನ್ಮದ ನೆನಪುಗಳೇ? ಮರುಜನ್ಮವೆಂಬ ಮಂಜಿಗೆ ಆಚೆ ಮಂಕುಮಂಕಾಗಿ ತೋರುವ ಪೂರ್ವಜನ್ಮದ, ಪ್ರೇಮ, ಸ್ನೇಹ ಮುಂತಾದುವುಗಳೇ?" ಎಂದು ವರಕವಿ ಕಾಳಿದಾಸನನ್ನು ನಾವು ಪ್ರಶ್ನಿಸೋಣವೇ? ಆದರೆ ನಮಗೆ ಉತ್ತರ ಎಲ್ಲಿಂದ ದೊರಕೀತು?

ಈಗ ಹಾಡು ಮುಗಿಯುತ್ತದೆ. ಆದರೆ ಪುನಃ "ಇನ್ನೊಂದು ಹಾಡು ಹೇಳು ಹುಡುಗ!" ಎಂದು ಹೇಳುತ್ತಾಳೆ ಪಂಕಜ.

"ಮುತ್ತಿನೆರೀ ಅರಿಯಾದಿ" ಎಂದು ಬಿಸಿಲ ಬೇಗೆಯಲ್ಲಿ ಕಾದಿರುವ ಹುಡುಗನ ತುಟಿಗಳಿಂದ ಹೊರಹೊಮ್ಮುತ್ತದೆ.

"ಸಾಕು, ಸಾಕು," ಎಂದು ಕಣ್ಣೀರಿಡುತ್ತಾ ಹೇಳುತ್ತಾಳೆ ಪಂಕಜಳು.

"ನೀನು ಕಷ್ಟಪಡುತ್ತೀ ಎಂದು ತೋರುತ್ತದೆ. ಶ್ರಮವಿಲ್ಲದಿರುವಾಗ ಪುನಃ ಹಾಡೋಣ"

ಈ ಹೊತ್ತಿಗೆ ಅಪ್ಪನು ಪುನಃ ಪಂಕಜಳ ಕೊಠಡಿಯೊಳಗೆ ಬರುತ್ತಾರೆ.

"ಲೋ ಹುಡುಗ, ಇಕೋ, ಇದನ್ನು ತೆಗೆದುಕೊಂಡು ಹೋಗು. ನೀನು ಹಾಡಿದ್ದು ಸಾಕು" ಎಂದು ಹೇಳಿ ಎರಡಾಣೆಯ ನಾಣ್ಯವೊಂದನ್ನು ಅವನ ಕಡೆಗೆ ಎಸೆಯುತ್ತಾರೆ.

ಹುಡುಗನು ಅದನ್ನು ತೆಗೆದುಕೊಳ್ಳುತ್ತಾನೆಯೇ ಹೊರತು, ಅವನ ಮುಖವೇನೂ ಪ್ರಫುಲ್ಲವಾಗುವುದಿಲ್ಲ. ನಿರೀಕ್ಷಣೆ ತುಂಬಿ ತುಳುಕುವ ಕಣ್ಣುಗಳಿಂದ ಮರಳಿ ರೋಗಿಯ ಕೊಠಡಿಯೊಳಗೆ ಇಣಿಕಿ ನೋಡಿ, ಬಂದ ದಾರಿಯಲ್ಲೇ ಹಿಂದಿರುಗುತ್ತಾನೆ.

ಇಷ್ಟರೊಳಗಾಗಿ ಅಮ್ಮನು ಬೀದಿಯ ಬಾಗಿಲನ್ನು ತೆರೆದುಕೊಂಡು ಹೊರಗೆ ಬರುತ್ತಾಳೆ.

"ಹೀಗೆ ಇಲ್ಲಿ ಬಾಪ್ಪಾ ಹುಡುಗ; ನೀನು ಇಲ್ಲಿಗೆ ಒಂಟಿಯಾಗಿ ಬಂದೆಯೇನು?" ಎಂದು ಅವನನ್ನು ಪ್ರೇಮಪೂರ್ವಕವಾದ ಧ್ವನಿಯಲ್ಲಿ ಕೇಳುತ್ತಾಳೆ.

"ಹೌದು, ಹೌದು."

"ಬಹಳ ಚೆನ್ನಾಗಿ ಹಾಡುತ್ತೀಯಲ್ಲಾ! ಎಲ್ಲವೂ ತಮಿಳು ಹಾಡಾಗಿದೆ. ಇದೆಲ್ಲವನ್ನೂ ನಿನಗೆ ಯಾರಪ್ಪಾ ಹೇಳಿಕೊಟ್ಟರು?"

"ನನ್ನ ಅಮ್ಮನು ಹೇಳಿಕೊಟ್ಟರು."

"ಊಂ, ಈ ಉರಿಬಿಸಿಲಿನಲ್ಲಿ ನೀನು ಒಂಟಿಯಾಗಿ ಬಂದೆಯೇನು?"

"ಹೌದು, ಮುಂಜಾನೆಯೇ ಹೊರಟೆ. ಇಷ್ಟರವರೆಗೂ ಏನೂ ಸಿಗಲಿಲ್ಲ."

"ಏನೂ ಸಿಗಲಿಲ್ಲವೇ?....ಊಂ! ನೀನು ಈಗ ಬಹಳ ಹಸಿದಿರಬಹುದಲ್ಲಾ."

ಅಳು ಯಾವಾಗ ಬಂದುಬಿಡುವುದೋ ಎಂಬಂತೆ ತುಟಿಗಳು ಅದುರಲಾಗಿ, ಹುಡುಗನು ಉತ್ತರವೇನೂ ಕೊಡದೆ, ತಲೆಯನ್ನು ಮಾತ್ರ ಸುಮ್ಮನೆ ಅಲ್ಲಾಡಿಸುತ್ತಾನೆ.

"ನಿನ್ನ ತಾಯಿಯೆಲ್ಲಿ? ಅವಳು ನಿನ್ನೊಡನೆ ಬರಲಿಲ್ಲವೇ?"

"ಅಮ್ಮನಿಗೆ ಜ್ವರ, ಮನೆಯಲ್ಲಿಯೇ ಇದ್ದಾಳೆ."

"ಓಹೋ!........ಅವಳೇ ನಿನಗೆ ಇದೆಲ್ಲವನ್ನೂ ಹೇಳಿಕೊಟ್ಟಳು, ಅಲ್ಲವೇ? ನೀನೀಗ ಹಾಡಿದೆಯಲ್ಲಾ ಆ ಹಾಡೆಲ್ಲವನ್ನೂ ನಿಮ್ಮ ಅಮ್ಮನಲ್ಲವೇ ನಿನಗೆ ಹೇಳಿಕೊಟ್ಟದ್ದು?"

"ಹೌದು,........ನಮ್ಮಮ್ಮನು ಬಹಳ ಚೆನ್ನಾಗಿ ಹಾಡುತ್ತಾಳೆ" ಎಂದು ಮಕ್ಕಳ ಸ್ವಭಾವಕ್ಕನುಗುಣವಾದ ಗರ್ವದೊಡನೆ ಉತ್ತರ ಕೊಡುತ್ತಾನೆ ಆ ಬಾಲಕನು. "ನನಗೇ ಮತ್ತೆ ಅಮ್ಮನಂತೆ ಹಾಡಲು ಬರುವುದಿಲ್ಲ" ಎಂದು ಹೇಳುತ್ತಾ, ಅದೇಕೋ ತನ್ನ ಹರಕಲು ಬಟ್ಟೆಯಿಂದ ಕಣ್ಣುಗಳನ್ನು ಒರಸಿಕೊಳ್ಳುತ್ತಾನೆ.

"ಇಲ್ಲಿ, ಬಾಪ್ಪ ಅಪ್ಪಾ. ನೀನು ಬಹಳ ಹಸಿದಿರಬಹುದು. ನಾನು ಅನ್ನ ಹಾಕುತ್ತೇನೆ. ನೀನು ಹಿತ್ತಲ ಕಡೆಗೆ ಹೋಗಿ, ಆ ನಲ್ಲಿಯಲ್ಲಿ ಕೈಕಾಲುಗಳನ್ನು ತೊಳೆದುಕೊಂಡು ಬಾ."

ಯಜಮಾನಿಯು ಹುಡುಗನಿಗೆ ಅನ್ನ ಬಡಿಸುವಾಗ, ಯಜಮಾನರು ಅಲ್ಲಿಗೆ ಬರುತ್ತಾರೆ.

"ಭೇಷ್! ಒಳ್ಳೆಯ ಕೆಲಸ ಮಾಡುತ್ತೀ ನೀನು!" ಎನ್ನುತ್ತಾರೆ ಅವರು.

"ಸರಿ, ಪಾಪ! ಇವನು ಊಟಮಾಡುವಾಗ ಇವನನ್ನು ಸ್ವಲ್ಪ ಹೆದರಿಸದೆ ಇರೀಂದ್ರೆ. ಆ ಬಳಿಕ ನಾವು ಸಾವಧಾನದಿಂದ ಮಾತನಾಡಿಕೊಳ್ಳೋಣ." ಎಂದು ಹೇಳುತ್ತಾಳೆ ತಾಯಿ.

ಅದರ ಬಳಿಕ ಯಜಮಾನರು ಮುಖ ಸಿಡುಕುಮಾಡಿಕೊಂಡು, ಸುಮ್ಮನೆ ಹಿಂದಿರುಗಿಬಿಡುತ್ತಾರೆ.

ಹುಡುಗನ ಊಟ ಮುಗಿಯಿತು. ಹೋಗುವ ದಾರಿಯಲ್ಲಿ ಅವನು ಪುನಃ ಪಂಕಜಳ ಕೊಠಡಿಯೊಳಕ್ಕೆ ಕಿಟಕಿಯ ಮೂಲಕ ಇಣಿಕಿ ನೋಡುತ್ತಾನೆ.

"ಪುನಃ ಹಾಡಲೇ?" ಎಂದು ಕೇಳುತ್ತಾ ಕಿಟಕಿಯ ಬಳಿ ಹಿಂಜರಿಯುತ್ತಾ ನಿಲ್ಲುತ್ತಾನೆ.

ಒಳಗಿನಿಂದ ಉತ್ತರವಾವುವೂ ಬರುವುದಿಲ್ಲ. ಪಂಕಜಳು ಗಾಢ ನಿದ್ರೆಯಲ್ಲಿರುತ್ತಾಳೆ.

"ನಿದ್ರೆ ಮಾಡಿಬಿಟ್ಟಿರುವಳೆಂದು ತೋರುತ್ತದೆ. ನಾಳೆ ಪುನಃ ಬರುತ್ತೇನೆ" ಎಂದು ತನ್ನಷ್ಟಕ್ಕೆ ತಾನೆ ಅಂದುಕೊಳ್ಳುತ್ತಾನೆ.

ಇಷ್ಟರೊಳಗಾಗಿ ಬೀದಿಯ ಬಾಗಿಲನ್ನು ತೆರೆದುಕೊಂಡು ಯಜಮಾನಿಯು ಕರೆಯುತ್ತಾಳೆ; "ಹುಡುಗಾ! ಇಲ್ಲಿ ಬಾ" ಎನ್ನುತ್ತಾಳೆ.

ಬಳಿಕ ಅವನಿಗೆ ಮೂರು ರೂಪಾಯಿ ಕೊಟ್ಟು, ಆ ಬಳಿಕ ಹೇಳುತ್ತಾಳೆ ಆಕೆ. "ಇಕೋ ಇದನ್ನು ತೆಗೆದುಕೊಂಡು ಹೋಗಿ ನಿಮ್ಮಮ್ಮನಿಗೆ ಕೊಡು. ಅವಳಿಗೆ ಜ್ವರವಾಗಿರುವುದರಿಂದ ಇದು ನೆರವಾದೀತು. ತಿಳಿಯಿತೇ? ನೀನು ನಾಳೆ ಅಮ್ಮನನ್ನು ಬಿಟ್ಟು, ಹೊರಗೆ ಬರಬೇಡ. ಅಮ್ಮನ ಹತ್ತಿರದಲ್ಲೇ ಇದ್ದುಕೊಂಡು ನೋಡಿಕೊ. ತಿಳಿಯಿತೆ?"

ಹುಡುಗನು ಆಶ್ಚರ್ಯದಿಂದಲೂ ಆನಂದದಿಂದಲೂ ಚಕಿತನಾಗಿ, ದಿಗ್ಭ್ರಮೆಯೊಡನೆ ಹಿಂದಿರುಗಿ ಹಿಂದಿರುಗಿ ನೋಡಿಕೊಂಡೇ ಹೋಗುತ್ತಾನೆ.

ಈಗ ಪಂಕಜಳ ತಂದೆಯು ಕೊಠಡಿಯಿಂದ ಹೊರಗೆ ಬರುತ್ತಾರೆ.

"ಎಂಥಾ ಹುಚ್ಚಿಯೇ ನೀನು! ಹೀಗೆ ಅರ್ಥವಿಲ್ಲದ ಕೆಲಸ ಮಾಡುತ್ತೀಯ!"

ಅಮ್ಮನು ಉತ್ತರ ಹೇಳದೆ, ಪಂಕಜಳ ಕೊಠಡಿಯೊಳಗೆ ಕಿಟಕಿಯ ಮೂಲಕ ನೋಡುತ್ತಾಳೆ.

"ಅಕೋ ನೋಡೀಂದ್ರೆ, ಪಂಕಜ, ಅಲ್ಲಿ ನಿದ್ರೆ ಮಾಡುತ್ತಲಿರುವಳು. ಅವಳು ನಿದ್ರೆ ಮಾಡುತ್ತಾಳೆ ಎನ್ನುವುದಕ್ಕೋಸ್ಕರ ಮಾತ್ರ ಹೇಳಲಿಲ್ಲ. ಹೌದು, ಅವಳು ಆ ಹುಡುಗನ ಹಾಡನ್ನು ಕೇಳಿದಾಗ ಅವಳ ಮುಖ ಅದೆಷ್ಟೊಂದು ಗೆಲುವಾಗಿತ್ತು ಗೊತ್ತೆ? ಅವಳ ಮುಖವೇ ತಟ್ಟನೆ ಅರಳಿದಂತೆ ಇದ್ದುದನ್ನು ಗಮನಿಸಿದಿರಾ?............ಪಂಕಜಳು ಹಾಸಿಗೆಯಲ್ಲಿ ಹೀಗೆ ಮಲಗಿದಂದಿನಿಂದ, ಎಂದಾದರೂ ನೀವು ಅವಳ ಮುಖವು ಈಗಿನಂತೆ ಪ್ರಸನ್ನ ಹೊಂದಿದುದನ್ನು ನೋಡಿದ್ದುಂಟೇ? ಈ ತರಹದ ಮಂದಹಾಸವು ಅವಳನ್ನು ಬಿಟ್ಟಗಲಿ ಹೋಗಿ ಇಂದಿಗೆ ಅದೆಷ್ಟೊಂದು ದಿನವಾಗಿ ಬಿಟ್ಟದೆ? ನನ್ನ ಮುದ್ದು ಗಿಣಿಯನ್ನು ಈ ರೀತಿಯಾಗಿ ಪುನಃ ಯಾವಾಗ ನೋಡುವೆನೋ ಎಂದು ನಾನು ಪರಿತಪಿಸುತ್ತಿದ್ದುದು ನಿಮಗೇನು ಗೊತ್ತು? ಅದೆಲ್ಲ ಆ ಅಖಿಲಾಂಡೇಶ್ವರಿಗೇ ಗೊತ್ತು.

---

# ೪. ಕಡುಬು

—❀—

೧

ಅಂದು ವಿನಾಯಕ ಚತುರ್ಥಿ. ಕಿಟ್ಟಿ ಹನ್ನೊಂದು ವರ್ಷದ ಬಾಲಕ. ಹಾಸಿಗೆಯಲ್ಲಿ ಮಲಗಿದ್ದನು. ಕಳೆದ ಹತ್ತು ದಿನಗಳಿಂದ ಅವನಿಗೆ ಜ್ವರ. ಆ ಅನಿಷ್ಟ ಜ್ವರವು ಅವನನ್ನು ವಿನಾಯಕ ಚತುರ್ಥಿಗೆಂದು ಹಿಡಿದು ಕೊಂಡಿತ್ತು. ಈಗ ಅವನಿಗೆ ಕಡುಬೂ ಇಲ್ಲ, ಒಂದೂ ಇಲ್ಲ. ಆ ಕಡುಬಿ ಗಾಗಿ ಅವನು ಅದೆಷ್ಟೊಂದು ಆಸೆಯೊಡನೆ ವಿನಾಯಕ ಚತುರ್ಥಿಯನ್ನು ನಿರೀಕ್ಷಿಸುತ್ತಲಿದ್ದನು! ಕೊನೆಗೆ ಎಲ್ಲವೂ ಬರಿಯ ಆಸೆಯಾಗಿ ಮುಗಿಯಿ ತಲ್ಲಾ, ಆ ಅನಿಷ್ಠ ಜ್ವರದಿಂದ!

ಅವನ ಹಾಸಿಗೆಯ ಮುಂಭಾಗದ ಗೋಡೆಯಲ್ಲೊಂದು "ಕ್ಯಾಲೆಂ ಡರ್" ತಗಲು ಹಾಕಿತ್ತು. ಅಕೋ ಆ ಚೌಕಟ್ಟಿನೊಳಗೆ, ತಾರೀಖು ಹಾಕಿದೆ, "ವಿನಾಯಕ ಚತುರ್ಥಿ" ಎಂದು ಬರೆದಿದೆ. ಆ ತಾರೀಖು ಸಮೀಪಿಸು ವುದಕ್ಕೆ ಹಲವು ವಾರಗಳಿಗೆ ಮುಂದಿನಿಂದಲೇ ಅವನು ಅದೆಷ್ಟೊಂದು ಸಲ ಆ ಚೌಕಟ್ಟನ್ನು ಗಮನಿಸಿರುವನು! ಕೊನೆಗೆ ಆ ತಾರೀಖು ಬಂದಿತು............ ಆದರೆ ಅದರ ಜೊತೆಗೆ ಜ್ವರವೂ ಬಂದುಬಿಟ್ಟಿತು.

ಈಗ ಅಮ್ಮನು ಅಡಿಗೆಯ ಮನೆಯಲ್ಲಿ 'ಕಡುಬುಗಳನ್ನು ಮಾಡುತ್ತಿರು ವಳು. ಆದರೆ ಅವುಗಳಲ್ಲಿ ಅವನಿಗೆ ಭಾಗವಿಲ್ಲ. ಅಲಮೇಲಿಗಂತೂ ಖುಷಿಯೇ ಖುಷಿ, ಅಮ್ಮನೂ ಕೂಡ ಕಿಟ್ಟಿಯನ್ನು ಕುರಿತು ಯೋಚಿಸು ವಂತೆ ತೋರಲಿಲ್ಲ. ಇದನ್ನು ನೆನೆಸಿಕೊಂಡಾಗ ಅಮ್ಮನ ಮೇಲೂ ಕಿಟ್ಟೀಗೆ ಸ್ವಲ್ಪ ಸಿಟ್ಟು ಬಂತು.

"ಜ್ವರವು ಇಂದು ಬಾರದೆ, ಬೇರೆ ಎಂದಾದರೂ ಬಂದಿದ್ದರೆ ಎಷ್ಟೊಂದು ಚೆನ್ನಾಗಿರುತ್ತಿತ್ತು!" ಎಂದುಕೊಂಡನು.

ಪಕ್ಕದ ಕೊಠಡಿಯಲ್ಲೊಂದು ಹುಡುಗಿಯು ಹಾಡುತ್ತಿದ್ದುದು ಅವನ ಕಿವಿಗಳಿಗೆ ಎಟುಕಿತು. ತಲೆಯನ್ನು ತಿರುಗಿಸಿ ಬಾಗಿಲಿಗಾಚೆ ನೋಡಿದನು. ತೊಟ್ಟಿಲಲ್ಲಿದ್ದ ಮಗುವನ್ನು ಅಲಮೇಲಿ ತೂಗುತ್ತಿದ್ದಳು.

"ಅಲಮೇಲಿಗೆ ಜ್ವರ ಬಂದಿದ್ದು, ಅವಳು ನನಗೆ ಬದಲಾಗಿ ಇಲ್ಲಿ ಮಲಗಿದ್ದರೆ, ಎಷ್ಟೊಂದು ಚೆನ್ನಾಗಿರುತ್ತಿತ್ತು." ಎಂದು ಮತ್ತೆ ಅಂದುಕೊಂಡನು.

ಅಲಮೇಲಿ ಅವನ ತಂಗಿ ; ಒಂಬತ್ತು ವರ್ಷದ ಬಾಲಕಿ.

'ಕಿಟ್ಟೀ' ಎಂದು ಕೂಗುತ್ತಾ ಅವನ ತಾಯಿಯು ಒಳಗೆ ಪ್ರವೇಶಿಸಿದಳು. 'ಇಕೋ, ಈ ಗಂಜಿಯನ್ನು ಕುಡಿ' ಎಂದು ಹೇಳಿ, ಗಂಜಿಯ ಬಟ್ಟಲನ್ನೂ ಒಂದು ಹಪ್ಪಳವನ್ನೂ ಅವನ ಮುಂದಿಟ್ಟಳು. ಜಿಗುಪ್ಸೆಯೊಡನೆ ಅವನು ಗಂಜಿಯನ್ನು ದೃಷ್ಟಿಸಿದನು. ಬಳಿಕ ಹಪ್ಪಳದ ಮೇಲೆ ಅವನ ದೃಷ್ಟಿ ಬಿದ್ದಿತು. 'ಸರಿ, ಇದಾದರೂ ವಾಸಿ............ಆದರೆ............ ಊಂ............ಇದೂ ಕೂಡ ಕರಿದದ್ದಲ್ಲ, ಸುಟ್ಟದ್ದೇ' ಎಂದು ಮುಖವನ್ನು ಸಿಂಡರಿಸಿಕೊಂಡನು.

ಬಳಿಕ ತಾಯಿಯನ್ನು ಕುರಿತು, "ಅಮ್ಮಾ, ನಾನು ಒಂದೇ ಒಂದು ಕಡುಬು ತಿನ್ನಬಹುದೇನಮ್ಮಾ?" ಎಂದು ಆಸೆಯೊಡನೆ ಮೆಲ್ಲನೆ ಕೇಳಿದನು.

'ಕೂಡದು, ಚಿನ್ನಾ!' ಎಂದು ಪ್ರೀತಿಯೊಡನೆ ನುಡಿದಳು ತಾಯಿ ; "ನಿನಗೆ ಈಗ ಜ್ವರವಲ್ಲವೇ ? ನಿನಗೆ ಜ್ವರ ಬಿಟ್ಟ ಬಳಿಕ ನಾನು ತುಂಬ ಮಾಡಿ ಕೊಡುತ್ತೇನೆ, ಆಗ ತಿನ್ನುವೆಯಂತೆ ಚಿನ್ನಾ, ಈಗ ಬೇಡ" ಎಂದು ಮುಗಿಸಿದಳು.

ಬಳಿಕ ದೊರಕುವುದು ಎಂಬುದರಿಂದ ಈಗ ದೊರಕಲಿಲ್ಲವೆಂಬ ದುಃಖ ಹೇಗೆ ಇಂಗೀತು ? "ಅಲಮೇಲಿಗೆ ಇದರಿಂದ ಎರಡರಷ್ಟು ಸಿಗುವುದಲ್ಲಾ !" ಎಂದು ನೆನೆದಾಗ ಅವನಿಗೆ ಸ್ವಲ್ಪ ಅಸೂಯೆ ಹುಟ್ಟಿತು.

ಗಂಜಿ ಬಟ್ಟಲನ್ನು ತೆಗೆದುಕೊಂಡು ಒಂದು ಗುಟುಕು ಗಂಜಿ ಕುಡಿದು ತಿರಸ್ಕಾರದೊಡನೆ ಕೆಳಗಿಟ್ಟನು.

"ಅಮ್ಮಾ, ನನಗೆ ಬಹಳ ತಲೆ ನೋಯುತ್ತದೆ. ಅಲಮೇಲಿಯನ್ನು ಕೊಂಚ ಹಾಡಬೇಡವೆಂದು ಹೇಳೇ. ಒಂದೇ ಸಮನೆ ಕಿರಿಚಿಕೊಳ್ಳುತ್ತಾಳಲ್ಲಾ ಅವಳು!"

"ಅಲಮೇಲೀ!" ಎಂದು ಕರೆದಳು ತಾಯಿ. "ಹಾಡನ್ನು ಸ್ವಲ್ಪ ನಿಲ್ಲಿಸೇ! ಮಗು ಆಗಲೇ ಮಲಗಿರಬಹುದು!—ಇನ್ನು ಹಾಡೇಕೆ?"

ಅಷ್ಟಕ್ಕೆ ಅಲಮೇಲಿಯ ಹಾಡು ನಿಂತಿತು. ಕಿಟ್ಟಿಯು ಸ್ವಲ್ಪ ಸಮಾಧಾನ ಹೊಂದಿದನು. ಗಂಜಿಯನ್ನು ತೆಗೆದು ಒಂದು ಗುಟುಕು ಕುಡಿದನು. "ಪಟ್ ಪಟ್" ಎಂದು ಹಪ್ಪಳವನ್ನು ಮುರಿದನು.

"ಅಮ್ಮಾ, ನೀನು ನನಗೆ ಯಾವಾಗ ಕಡುಬು ಮಾಡಿಕೊಡುತ್ತೀಯಾ?" ಎಂದು ಪುನಃ ತಾಯಿಯನ್ನು ಕೇಳಿದನು.

"ಅದಕ್ಕೇನಂತೆ? ನಿನಗೆ ವಾಸಿಯಾದ ಬಳಿಕ ಮಾಡಿಕೊಡುತ್ತೇನೆ."

ಅಷ್ಟರಮೇಲೆ ಕಿಟ್ಟಿಯು ಜೋಲು ಮುಖ ಹಾಕಿಕೊಂಡು, ಗಂಜಿಯನ್ನೂ ಹಪ್ಪಳವನ್ನೂ ಸೇವಿಸುವುದರ ಹೊರತು ಬೇರೆ ದಾರಿಯಿಲ್ಲವೆಂಬ ನಿರ್ಧಾರಕ್ಕೆ ಬಂದನು.

೨

ಪ್ರಯಾಣಿಕನೊಬ್ಬನು ಸಹರಾ ಮರುಭೂಮಿಯಲ್ಲಿ ಬೆಂದು ಬಳಲಿ ಹೋಗಿ, ಕೊನೆಗೆ ಅಕಸ್ಮಾತ್ತಾಗಿ ಗಂಗಾ ತೀರದಂತಹ ತಂಪಾದ ಹಚ್ಚನೆಯ ಪ್ರದೇಶವನ್ನು ತಲುಪಿದರೆ ಅದೆಷ್ಟೊಂದು ಆನಂದಿತನಾಗುವನೋ, ಅದೇ ರೀತಿಯಲ್ಲಿ ಇಂದು ಆನಂದ ಹೊಂದಿದನು ಕಿಟ್ಟಿ.

ಅವನಿಗೆ ಜ್ವರ ಬಿಟ್ಟು ಮೈ ವಾಸಿಯಾಗಿ ಬಿಟ್ಟಿತು. ಇಂದು ಅವನಿಗೆ ಕಡುಬು ಮಾಡಿ ಕೊಡುವುದಾಗಿ ಅಮ್ಮನು ಮಾತು ಕೊಟ್ಟಿದ್ದಳು.

"ಕಡುಬನ್ನೆ ತನ್ನ ಭಕ್ಷ್ಯವನ್ನಾಗಿಟ್ಟುಕೊಂಡನಲ್ಲಾ ಆ ಗಣಪತಿ. ಅವನಲ್ಲವೇ ಗಟ್ಟಿಗ!" ಎಂದು ತನಗೆ ತಾನೆ ಅಂದುಕೊಂಡನು ಕಿಟ್ಟಿ.

ಆದರೆ............ಕೊನೆಗೆ............ಈವತ್ತು ಕೂಡಾ............ಅವನು ಹಾಳಾಗ!............ಆ ಬಾಳೆಯ ಹಣ್ಣಿನವನು ಬಂದು ಕಿಟ್ಟಿಯ ಆಸೆಯನ್ನು

ಸುಟ್ಟು ಬೂದಿ ಮಾಡಿದ. ಆ ಥಾಂಡಿಗ, ಇಂದೇ ಬರಬೇಕೇ? ಅವನ ಹತ್ತಿರ ಅಮ್ಮನು ಎರಡು ಡಜನ್ ಬಾಳೆಯ ಹಣ್ಣುಗಳನ್ನು ಕೊಂಡಳು. ಬಳಿಕ, ಕಡುಬು ಮಾಡಲು ಅದಾವುದೋ ಒಂದು ಸಾಮಾನು ಮನೆಯಲ್ಲಿಲ್ಲವಂತೆ. ಅದನ್ನು ಅಂಗಡಿಯಿಂದ ಕೊಂಡು ತರಬೇಕಂತೆ. ಅದನ್ನು ಕೊಂಡು ತರಲು ಒಬ್ಬರಿಗೂ ಬಿಡುವಿಲ್ಲವಂತೆ. ಆದುದರಿಂದ, ಅದನ್ನು ನಾಳೆ ತಂದ ಬಳಿಕ ಕಡುಬು ಮಾಡಿಕೊಡುವುದಾಗಿ ಅಮ್ಮನು ಹೇಳಿಬಿಟ್ಟಳು. ಈ ಹೊತ್ತು ಅದಕ್ಕೆ ಬದಲಾಗಿ, ಕೊಂಡಿದ್ದ ಬಾಳೆಯ ಹಣ್ಣುಗಳಲ್ಲಿ ಅವನಿಗೂ ಅಲಮೇಲಿಗೂ ಪಂಚಾಮೃತ ಮಾಡಿ ಕೊಡುವುದಾಗಿ ಹೇಳಿದಳು.

" ಪಂಚಾಮೃತವಂತೆ !—ಹೂಂ !—ಯಾರಿಗೆ ಬೇಕಾಗಿದೆ ?"

ಪಕ್ಕದ ಕೊಠಡಿಯಲ್ಲಿದ್ದ ಹಣ್ಣಿನ ಗೂಡಿನ ಮೇಲೆ ಅವನ ದೃಷ್ಟಿ ಬಿದ್ದಿತು.

" ಪಂಚಾಮೃತವಂತೆ !—ಹಣ್ಣನ್ನು ಮಾತ್ರ ಭದ್ರವಾಗಿ ಬೀಗ ಹಾಕಿಟ್ಟುಬಿಡುವರು !

" ಪಂಚಾಮೃತ !—ಪಂಚಾಮೃತ !" ಎಂದು ಹಿಗ್ಗುತ್ತಾ ಕಿರುಚಿದಳು ಅಲಮೇಲಿ.

" ಪಂಚಾಮೃತವೆಂದು ನಿನಗೆ ಸಂತೋಷ ! ನಿನಗೇನಂತೆ ? ಆವತ್ತೇ ಪಟ್ಟಾಗಿ ಕಡುಬನ್ನು ತಿಂದೆಯಲ್ಲಾ !"

" ಲೋ ? ಏನೋ ಅದು ? 'ಗುರ್ರ್' ಅನ್ನುತ್ತೀ ? ನಿನಗೆ ಮಾತ್ರ ಪಂಚಾಮೃತ ಸೇರುವುದಿಲ್ಲವೇನೋ ?"

" ಸೇರುವುದಿಲ್ಲವೆಂದು ಹೇಳಿದವರಾರು ? ಆದರೆ............"

" ಕಿಟ್ಟೀ ! ಅಲಮೇಲೀ !" ಎಂದು ಅಮ್ಮನ ಧ್ವನಿಯು ಅವರಿಗೆ ಕೇಳಿತು. " ಪಾಠವನ್ನು ಓದಿ ! ಹಣ್ಣಿನ ಗೂಡಿನ ಬಳಿ ಹೋಗಿ ಚೇಷ್ಟೆ ಮಾಡಬೇಡಿ ! ಅದರಿಂದ ನನ್ನನ್ನು ಕೇಳದೆ ಹಣ್ಣೊಂದೂ ತೆಗೆಯಬಾರದು............ಕಿಟ್ಟೀ, ನೀನೇ ಮತ್ತೆ ಸಾಮಾನೆಲ್ಲವನ್ನೂ ಬಹಳ ಹೊಡೆಯೋನೂ ! ಅಲಮೇಲೀ ; ಕಿಟ್ಟೀ ಬಾಳೆಯ ಹಣ್ಣನ್ನು ತೆಗೆಯದಂತೆ

ನೋಡಿಕೊ. ಮತ್ತೆ ತುಂಬ ತಿಂದುಬಿಟ್ಟು ಹೊಟ್ಟೆಯ ನೋವು ಬರಮಾಡಿ ಕೊಳ್ಳುವವನು."

ಹೀಗೆ ಹೇಳಿ, ಅಮ್ಮನು ತೋಟಕ್ಕೆ ಹೋಗಿ ಬಿಟ್ಟಳು.

"ಲೋ, ಕಿಟ್ಟೀ, ಜೋಕೆ! ನೀನು ಗೂಡಿನ ಹತ್ತಿರ ಹೋಗಿ, ಏನಾದರೂ ಕುಚೇಷ್ಟೆ ಮಾಡಿದೆಯಾದರೆ, ಆ ಕ್ಷಣ ಹೋಗಿ ಅಮ್ಮನಿಗೆ ಹೇಳಿಬಿಡುವೆನು." ಎಂದು ಅಲಮೇಲಿ ತನ್ನ ಕಿರು ಬೆರಳನ್ನು ಆಡಿಸುತ್ತ ಅವನನ್ನು ಹೆದರಿಸಿದಳು.

ಕಿಟ್ಟಿಗೆ ರೇಗಿತು. "ಊಂ, ನಿನಗೆ ಮತ್ತೇನಂತೆ ಕೆಲಸ? 'ಚಾಡೀ ಚುಚ್ಚಲು ಸರಿ!............ಅಷ್ಟೇ!—ಬೇರೆ ಏನೂ ಗೊತ್ತಿಲ್ಲ............ ಚಾಡೀಕೋರಿ ಚಪ್ಪಲ್‌ಕೋರೀ!" ಎಂದು ಅವಳನ್ನು ಹೀಯ್ಯಾಳಿಸಿದನು.

"ಹೌದೋ, ಸಿಟ್ಟುಬಂದರೆ ಗೋಡೆಯಲ್ಲಿ ಹೋಗಿ ತಲೆ ಚಚ್ಚಿಕೊ! ನಿನ್ನನ್ನು ಕಂಡರೇನಂತೆ; ನನಗೆ ದಿಗಿಲೇನು?" ಎಂದು ತಲೆಯನ್ನು ಅಲ್ಲಾಡಿಸುತ್ತ ಅಲಮೇಲಿ ಹೊರಟು ಹೋದಳು.

ಅಲಮೇಲಿ ಹೋದ ಬಳಿಕ ಕಿಟ್ಟಿಯನ್ನು ಪುನಃ ಹಳೆಯ ನೆನಪು ಗಳು ಪೀಡಿಸತೊಡಗಿದುವು.

"ಪಂಚಾಮೃತವಂತೆ ಪಂಚಾಮೃತ! ಯಾರಿಗೆ ಬೇಕೋ— ಗೂಡನ್ನು ಮಾತ್ರ ತಕ್ಷಣ ಬೀಗಹಾಕಿ ಮಡುಗಿಬಿಡುವರು!............ ಬೇಕು ಬೇಕಾದಂತೆ ಇಲ್ಲೇನೂ ಸಿಗುವಂತಿಲ್ಲ............ಬೇಕಾದಾಗಲೂ ಸಿಗದು............ಎಲ್ಲವೂ ಅಮ್ಮನ ಇಷ್ಟ ಬಂದಂತೆಯೇ............ಅದರ ಜೊತೆಗೆ ಈ ಶನಿ ಅಲಮೇಲಿ ಬೇರೆ ಮಧ್ಯೆ ಮಧ್ಯೆ! ಕಡುಬು ಕೊಡು ತ್ತೇನೆಂದು ಹೇಳಿ, ಅದೂ ಇಲ್ಲದೆ ಏಮಾರಿಸಿ ಬಿಟ್ಟರು! ಇರಲಿ ಇರಲಿ! ಕಡುಬನ್ನೇ ಕೊಡಲಿಲ್ಲವಲ್ಲಾ, ನನ್ನಿಷ್ಟ ಬಂದಂತೆ ನಾನು ಮಾಡುತ್ತೇನೆ."

೩

ಕಿಟ್ಟಿಯು ತೋಟದ ಕಡೆಗೆ ತನ್ನ ಕಳ್ಳನೋಟವನ್ನು ಬೀರಿದನು. ಅಮ್ಮನು ಇನ್ನೂ ಹಿಂದಿರುಗಿ ಬಂದಿಲ್ಲ. ಅಲಮೇಲಿಯನ್ನೂ ಕಾಣಲಿಲ್ಲ. ಮೆಲ್ಲಗೆ ಅಡಿಮೇಲಡಿ ಇಡುತ್ತ ಹೊಂಚು ಹಾಕುತ್ತಾ ನಡೆಯುವ ಬೆಕ್ಕಿ

ನಂತೆ, ಕಿಟ್ಟಿಯು ಹಣ್ಣಿನ ಗೂಡನ್ನು ಸಮೀಪಿಸಿದನು. "ತೋಟದಿಂದ ಹಿಂದಿರುಗಿ ಬಂದೊಡನೆಯೇ ಅಮ್ಮನು ಇದನ್ನು ಬೀಗ ಹಾಕಿಬಿಡುವಳು!" ಎಂದು ಆಲೋಚಿಸುತ್ತಾ, ಅದರ ಬಾಗಿಲನ್ನು ತೆರೆದನು. "ಸರ್" ಎಂದು ಒಳಗೆ ಕೈಬಿಟ್ಟು ಒಂದು ಹಣ್ಣನ್ನು ತೆಗೆದನು. ಅವಸರ ಅವಸರವಾಗಿ ಅದರ ಸಿಪ್ಪೆಯನ್ನು ಸುಲಿದು ಹಣ್ಣನ್ನು ಬಾಯೊಳಗೆ ತೂರಿಸಿಕೊಂಡನು. ಹಣ್ಣು ಗಂಟಲೊಳಗೆ ಸಿಕ್ಕಿಕೊಂಡಂತಾಯಿತು. ಎರಡು ಕೈಗಳಿಂದಲೂ ಬಾಯನ್ನು ಮುಚ್ಚಿಕೊಂಡು, ಕಷ್ಟಪಟ್ಟು ಹೇಗೋ ಅದನ್ನು ನುಂಗಿ ಬಿಟ್ಟನು. ಹಣ್ಣಿನ ಸಿಪ್ಪೆಯನ್ನು ತನ್ನ ಅಂಗಿಯ ಜೋಬಿನೊಳಗೆ ಹಾಕಿಕೊಂಡು ತೋಟದ ಕಡೆಗೆ ತನ್ನ ನೋಟವನ್ನು ತಿರುಗಿಸಿದನು. ಇನ್ನೂ ಅಮ್ಮನು ಕಣ್ಣಿಗೆ ಗೋಚರವಾಗಲಿಲ್ಲ. ಅಲಮೇಲಿಯೂ ಕಾಣಿಸಲಿಲ್ಲ. "ಅಬ್ಬಾ!" ಎಂದು ನಿಟ್ಟುಸಿರು ಬಿಟ್ಟನು.

ಆಗ ಅವನ ಮನಸ್ಸಿನಲ್ಲೊಂದು ಯೋಚನೆ ಹೊಳೆಯಿತು.

"ಇನ್ನೊಂದನ್ನು ತೆಗೆದುಕೊಂಡರೇನೀಗ? ಅವರು ನನ್ನನ್ನು ಕಂಡು ಹಿಡಿದು ಬಿಟ್ಟರೆ, ನಾನು ತೆಗೆದದ್ದು ಒಂದಾದರೇನು, ಎರಡಾದರೇನು?"

ಹೀಗೆ ಆಲೋಚಿಸಿ, ಅವನು ಗೂಡಿನಿಂದ ಮತ್ತೊಂದು ಬಾಳೆಯ ಹಣ್ಣನ್ನು ತೆಗೆದನು. ಶೀಘ್ರವಾಗಿ ಸಿಪ್ಪೆಯನ್ನು ಸುಲಿದು ಅದನ್ನೂ ನೈವೇದ್ಯ ಮಾಡಿಕೊಂಡನು. ಪುನಃ ತನ್ನ ಸುತ್ತ ಮುತ್ತಲು ನೋಡಲಾಗಿ, ಅಮ್ಮನು ಕಾಣಿಸಲಿಲ್ಲ, ಅಲಮೇಲಿಯೂ ಕಾಣಿಸಲಿಲ್ಲ. ಕೆಲಸವು ತಡೆಯಿಲ್ಲದೆ ಮುಗಿದು ಬಿಟ್ಟಿತು; ಇನ್ನು ಮುಂದೆ ಭಯವಿಲ್ಲ!

"ಅಲಮೇಲಿ ಅದೆಲ್ಲಿಗೆ ಹೋಗಿರುವಳು? ಎಂದು ಅಷ್ಟರ ಮೇಲೆ ಚಿಂತಿಸಿದನು ಕಿಟ್ಟಿ; "ಸರಿ, ಈ ಬಾಳೆಯ ಹಣ್ಣಿನ ಸಿಪ್ಪೆಯನ್ನು ಮಾತ್ರ ಒಬ್ಬರಿಗೂ ತಿಳಿಯದಂತೆ ಎಲ್ಲಾದರೂ ಹಾಕಿಬಿಡಬೇಕು."

ಈ ರೀತಿಯಾಗಿ ಆಲೋಚಿಸುತ್ತಾ, ಕಿಟ್ಟಿಯು ಧೈರ್ಯವಾಗಿ ತೋಟದ ಕಡೆಗೆ ಹೋದನು. ಅದೇತಾನೇ ಅಮ್ಮನು ಬಾಳೆಯ ಎಲೆ, ಕೊತ್ತುಂಬರೀ ಸೊಪ್ಪು, ಕರೀ ಬೇವಿನ ಸಹಿತ ಅಡಿಗೆ ಮನೆಯ ಹತ್ತಿರ ಬರುತ್ತಲಿದ್ದಳು. ಅಮ್ಮನನ್ನು ಹಾದು ಅವನು ಶೀಘ್ರವಾಗಿ ತೋಟ

ದೊಳಗೆ ಹೋದನು. ಅಲ್ಲಿ ಅಲಮೇಲಿಯು ಗಣಿಕೇ ಹಣ್ಣು ಕುಯ್ಯು ತ್ತಿದ್ದಳು. ಇನ್ನು ಯಾವಾಗಲಾದರೂ ಆಗಿದ್ದರೆ, ಕಿಟ್ಟಿಯು ತಕ್ಷಣ ಅವಳ ಜೊತೆಗೆ ಹಣ್ಣುಗಳನ್ನು ಪಾಲು ಮಾಡಿಕೊಳ್ಳುತ್ತಿದ್ದನು, ಲಯಿಸುತ್ತಿದ್ದನು. ಆದರೆ ತತ್ಸಮಯ ಅವನು ನೆಟ್ಟಗೆ ತೋಟದ ಮೂಲೆಗೆ ಹೋಗಿ, ಅಲ್ಲಿ ತನ್ನ ಜೇಬಿನಲ್ಲಿದ್ದ ಎರಡು ಬಾಳೆಯ ಹಣ್ಣಿನ ಸಿಪ್ಪೆಗಳನ್ನೂ ಎಸೆದುಬಿಟ್ಟು, ಮೌನವಾಗಿ, ಸದ್ದಿಲ್ಲದೆ ಹಿಂದಿರುಗಿ ಮನೆಯೊಳಗೆ ನುಗ್ಗಿದನು. ಅಲಮೇ ಲಿಯು ಆಗಲೂ ಸಹ ಗಣಿಕೆಯ ಗಿಡದ ಬಳಿ ನಿಂತಿದ್ದಳು.

ಕ್ಷಣಕಾಲ ಕಿಟ್ಟಿ ನಿಂತನು. ಅವಳ ಜೊತೆಗೆ ಏನಾದರೂ ಮಾತನಾ ಡೋಣವೇ, ಯಾವುದಾದರೂ ಚೇಷ್ಟೆಯಲ್ಲಿಳಿಯೋಣವೇ ಎಂದು ಆಲೋ ಚಿಸಿದನು. ಕೊನೆಗೆ ಅವನು ಯಾಕೋ ಏನೋ ತನ್ನ ಓದುವ ಕೊಠ ಡಿಗೆ ನೆಟ್ಟಗೆ ಹೋದನು. ಅಲ್ಲಿ ತನ್ನ ಪುಸ್ತಕವನ್ನು ತೆಗೆದುಕೊಂಡು, ಅತ್ಯಂತ ಅಕ್ಕರೆಯೊಡನೆ ಓದುವವನಂತೆ ನಟಿಸಲಾರಂಭಿಸಿದನು. ಕೈಯ್ಯ ಲ್ಲಿಟ್ಟುಕೊಂಡು, ಕಣ್ಣುಗಳಿಂದ ನೋಡುತಿದ್ದುದೊಂದು ಭೂಗೋಳ ಶಾಸ್ತ್ರದ ಪುಸ್ತಕ. ಆದರೆ ಅವನ ಮನದೊಳಗೆ ಬಂದು ಹೋಗುತ್ತಿದ್ದವು—ತಿಂದ ಬಾಳೆಯ ಹಣ್ಣುಗಳು, ಎಸೆದ ಸಿಪ್ಪೆಗಳು, ಅಲಮೇಲಿ, ಗಣಿಕೆಯ ಹಣ್ಣು ಗಳು, ಅವುಗಳಲ್ಲಿ ತನಗೆ ಪಾಲು, "ಅವಳೇ ಬರಲಿ !", ಪಂಚಾಮೃತ, ಕಡುಬು, ಏಮಾರಿಕೆ, ಬಾಳೆಯ ಹಣ್ಣಿನ ಸಿಪ್ಪೆಗಳು............"

"ನನಗೆ ಪೋಲಿಸಿನವಳೇ ಅವಳು ? ಬರಲಿ, ಹೇಳುತ್ತೇನೆ !"

೪

"ಅಮ್ಮಾ, ಅಮ್ಮಾ!" ಎಂದು ಗೋಳಿಡುತ್ತಾ, ಅದೇತಾನೇ ಅಲಮೇಲಿ ತೋಟದಿಂದ ಅಡಿಗೆಯ ಮನೆಯೊಳಗೆ ಓಡಿ ಬಂದಳು. ಕಿಟ್ಟಿಯು ತನ್ನ ಕುರ್ಚಿಯಲ್ಲಿ ನೆಟ್ಟಗೆ ಕುಳಿತನು.

ಅವಳ ಧ್ವನಿ ಅಳುವ ಧ್ವನಿಯಾಗಿದ್ದಿತು.

"ಅಮ್ಮಾ! ಅಮ್ಮಾ! ನಾನು ತೋಟದಲ್ಲಿ ಕಾಲು ಜಾರಿ ಬಿದ್ದು ಬಿಟ್ಟೆ !..........." ಎಂದು ಅಳಲು ಪ್ರಾರಂಭವಾಯಿತು.

“ ಬಿದ್ದೆಯಾ ?—ಚೆನ್ನಾಗಿ ಬೇಕು ನಿನಗೆ !'' ಎಂದು ಅಂದು ಕೊಂಡನು ಕಿಟ್ಟಿ.

“ ಎಲ್ಲಾ ಕಿಟ್ಟಿಯಿಂದ ಅಮ್ಮಾ............” ಎಂದು ಅಳುವಿನ ಪಲ್ಲವಿ ಪ್ರಾರಂಭವಾಯಿತು.

“ ಇದೇನಪ್ಪಾ !” ಎಂದು ಕಿಟ್ಟಿಯು ಸ್ವಲ್ಪ ಸ್ವಾರಸ್ಯವಾಗಿಯೂ ಸ್ವಲ್ಪ ಭೀತಿಯೊಡನೆಯೂ ಕೇಳತೊಡಗಿದನು.

“ ತೋಟದಲ್ಲಿ ಗಣಿಕೇ ಹಣ್ಣು ಕುಯ್ಯುತ್ತಿದ್ದೆ. ಆ ಮೇಲೆ ಹೂ ಕುಯ್ಯಲು ಹೋದೆ. ಕೊಯ್ಯುತ್ತಿರುವಾಗ ದೊಪ್ಪನೆ ಬಿದ್ದು ಬಿಟ್ಟೆ ಅಮ್ಮಾ! ಓಡಿ ಬರುವಾಗ ಬಾಳೆಯ ಹಣ್ಣಿನ ಸಿಪ್ಪೆಯ ಮೇಲೆ ಕಾಲಿಟ್ಟುಬಿಟ್ಟೆ. ಅದು ಕಾಲು ಜಾರಿಸಿ ಬಿಟ್ಟಿತು. ಕಿಟ್ಟೀನೇಮ್ಮಾ, ಅಲ್ಲಿ ಬಾಳೆಯ ಹಣ್ಣಿನ ಸಿಪ್ಪೆ ಯನ್ನು ಹಾಕಿರಬೇಕು............ಊಂ............ಊಂ........ಊಂ........” ಎಂದು ಪಲ್ಲವಿ ಹೋಯಿತು.

ಕಿಟ್ಟಿಯ ಮನದೊಳಗೆ ವಿಸ್ಮಯವೂ, ಸಂಕಟವೂ ಒಟ್ಟಿಗೆ ಹೊಮ್ಮಿತು. ತನ್ನ ಕಳ್ಳತನಕ್ಕೆ ಬಳಿಕ ಇದ್ದ ನಿರ್ಭಯವು ಕಳೆದು ಒಂದು ತೆರನಾದ ಕಳ ವಳವು ತಲೆದೋರಿತು.

“ ಕಿಟ್ಟೀ !'' ಎಂದು ಕೋಪ ಧ್ವನಿಯೊಡನೆ ಅಮ್ಮನ ಧ್ವನಿ ಕೇಳ ಬಂದಿತು ; ಕಿಟ್ಟಿಯ ಭೀತಿಯು ಅಧಿಕರಿಸಿತು.

‘‘ಏನು............?............ಇಕೋ........ಬಂದೆ........'' ಎನ್ನುತ್ತಾ ಕಿಟ್ಟಿಯು, ತನ್ನ ಕುರ್ಚಿಯನ್ನೂ ಮೇಜನ್ನೂ ಶಬ್ದ ಉಂಟಾಗುವಂತೆ ಜರುಗಿಸುತ್ತಾ ಎದ್ದನು. ಈ ಶಬ್ದದಿಂದ ಅಮ್ಮನಿಗೆ ತಾನು ಇದುವರೆವಿಗೆ ಓದುತ್ತಿದ್ದಂತೆ ತಿಳಿಯಲೆಂದು ಅವನ ಅಂತರಂಗದ ಆಲೋಚನೆ.

ಆದರೆ ಅಮ್ಮನೇ ಮೋಸ ಹೋಗುವವಳು ?

“ ಕಿಟ್ಟೀ, ನಿಜವನ್ನು ಹೇಳು ! ಹಣ್ಣನ್ನು ತೆಗೆದೆಯೋ, ಇಲ್ಲವೋ ?” ಎಂದು ಗದರಿಸಿದಳು. ಕಿಟ್ಟಿಯ ನಾಡಿಯು ಉಡುಗಿಬಿಟ್ಟಿತು.

ಆದರೆ ಹೊರಗಿನ ನೋಟಕ್ಕೆ ಬಹಳ ಮರ್ಯಾದೆಯಾಗಿ, “ ಇಲ್ಲ, ಅಮ್ಮಾ ! ನಾನು ತೆಗೆಯಲೇ ಇಲ್ಲ. ಅಲಮೇಲಿ ಸುಳ್ಳುಹೇಳುತ್ತಾಳೆ.” ಎಂದು ಬುರುಡೆ ಬಿಟ್ಟ.

"ಸುಳ್ಳು ಹೇಳುವುದು ನೀನೋ? ನಾನೋ ಕಣೋ?" ಎಂದು ಮಧ್ಯೆ ನುಗ್ಗಿದಳು ಅಲಮೇಲಿ. ಕಿಟ್ಟಿಯು ಅವಳನ್ನು ದುರುಗುಟ್ಟಿ ನೋಡಿದನು. ಆದರೆ ಏನೊಂದೂ ಮಾಡಲಾಗಲಿಲ್ಲ. ಮಾತನಾಡಲೂ ಸಾಧ್ಯವಾಗಲಿಲ್ಲ. ಅಮ್ಮನು ಅಷ್ಟರೊಳಗಾಗಿ ತನ್ನ ಶಿಕ್ಷೆಯನ್ನು ಪ್ರಾರಂಭಿಸಿಬಿಟ್ಟಳು.

"ಕಿಟ್ಟೀ, ಸುಳ್ಳು ಹೇಳಬೇಡ. ಎಷ್ಟು ಹಣ್ಣು ತಿಂದೆ? ಒಂದೇ? ಎರಡೇ?"

"ನಾನು ಹಣ್ಣನ್ನು ಮುಟ್ಟಲೇ ಇಲ್ಲ ಅಮ್ಮಾ."

"ತೋಟದಲ್ಲಿ ಮತ್ತೆ ಹೇಗೋ ಸಿಪ್ಪೆ ಬಂತು?

"ನನಗೆ ಹೇಗಮ್ಮಾ, ಅದೆಲ್ಲವೂ ಗೊತ್ತು?"

"ಇಲ್ಲವೋ, ಗೂಡಿನಿಂದ ಬಾಳೆಯ ಹಣ್ಣಿನ ಸಿಪ್ಪೆ ತಾನೇ ತಾನಾಗಿ ಹಾರಿ ಹೋಗಿರಬಹುದು!" ಎಂದಳು ಅಲಮೇಲಿ.

"ಅಲಮೇಲೀ, ನೀನು ಮಾತನಾಡಬೇಡ, ಎಂದು ಅವಳನ್ನು ಖಂಡಿಸಿದಳು ತಾಯಿ. ಕಿಟ್ಟಿಗೆ ಅದರಿಂದ ಸ್ವಲ್ಪ ತೃಪ್ತಿಯೇ ಆಯಿತು. ಆದರೆ ಕೂಡಲೇ ಅಮ್ಮನು ಅವನನ್ನು ನೋಡಿ ಜೀರೆ ಬೈಗಳನ್ನು ಪ್ರಾರಂಭಿಸಿಬಿಟ್ಟಳು.

"ಕಿಟ್ಟೀ, ಆಮೇಲೆ ಏಟು ತಿನ್ನುತ್ತೀ, ಮರ್ಯಾದೆಯಾಗಿ ಈಗಲೇ ನಿಜವನ್ನು ಹೇಳಿದೆಯಾದರೆ, ಬದುಕುತ್ತಿ, ಇಲ್ಲವಾದರೆ........" ಎಂದು ಅವನಿಗೆ ಸಹಜವಾಗಿ ಹೋಗಿದ್ದ ದಂಡನೆಯನ್ನು ಹೇಳದೆ ಅಷ್ಟಕ್ಕೇ ನಿಲ್ಲಿಸಿದಳು.

"ನಾನು ಗೂಡಿನ ಹತ್ತಿರವೇ ಹೋಗಲಿಲ್ಲಾಮ್ಮಾ!" ಎಂದು ಮನಸ್ಸು ಜಗ್ಗದೆ ಅಂದ ಕಿಟ್ಟಿ.

"ಕಿಟ್ಟೀ, ನೀನೇ ಅಲ್ಲಿ ಹಾಕಿದೆಯೆಂದು ನನಗೆ ಗೊತ್ತುಂಟು." ಎಂದು ಖಂಡಿತವಾಗಿ ನುಡಿದಳು ತಾಯಿ. ಅವಳು ಮಾತನಾಡಿದ ರೀತಿಯಿಂದಲೂ, ಧ್ವನಿಯಿಂದಲೂ ಕಿಟ್ಟಿಗೆ ಉಳಿದಿದ್ದ ನಂಬಿಕೆಯೂ ಸಂಪೂರ್ಣವಾಗಿ ಮಾಯವಾಯಿತು. ಅಮ್ಮನಿಗೆ ಅದು ಹೇಗೆ ತಿಳಿದಿರಬಹುದು?

"ಇಲ್ಲಾಮ್ಮಾ, ಅದು ಹಳೆಯ ಬಾಳೆಯ ಹಣ್ಣಿನ ಸಿಪ್ಪೆಯಾಗಿರಬಹುದು!" ಎಂದು ಒಂದು ಬರುಡೆ ಹೊಡೆದನು ಕಿಟ್ಟಿ.

"ಇಲ್ಲ ನನಗೆ ಗೊತ್ತು ಅದನ್ನು ನೀನು ಈವತ್ತೇ ಹಾಕಿದೆ" ಎಂದು ಸಾವಧಾನವಾಗಿ ಹೇಳಿದಳು ತಾಯಿ.

ಕಿಟ್ಟಿಯು ಏನುತ್ತರ ಕೊಡೋಣವೆಂದು ಸ್ವಲ್ಪ ಯೋಚಿಸಿದನು.

"ಏನೋ ಕಣ್ಣು ಕಣ್ಣು ಬಿಡುತ್ತೀಯಾ?" ಎಂದು ಅಷ್ಟರೊಳಗಾಗಿ ಕೋಪಗೊಂಡು ಪ್ರಾರಂಭಿಸಿಬಿಟ್ಟಳು ಅಮ್ಮನು. "ಈವತ್ತೇ ಅಲ್ಲವೇನೋ ಬಾಳೆಯ ಹಣ್ಣು ಕೊಂಡಿದ್ದು? ಅದೇ ಮತ್ತೆ ಕಳೆದ ಒಂದು ತಿಂಗಳಿನಿಂದಲೂ ನಿನಗೆ ಜ್ವರವೆಂದು ಕೊಳ್ಳಲೇ ಇಲ್ಲವಲ್ಲಾ! ನಿನ್ನಿಂದ ಅಲಮೇಲಿಗೂ ಇಷ್ಟೊಂದು ದಿನ ಬಾಳೆಯಹಣ್ಣಿಲ್ಲದೆ ಹೋಯಿತಲ್ಲಾ! ಹಳೆಯ ಬಾಳೆಯ ಹಣ್ಣಿನ ಸಿಪ್ಪೆ ಅಲ್ಲಿ ಹೇಗೆ ಬಂದಿರಬೇಕು?

ಅದರ ಜೊತೆಗೆ ಫಟ್ ಫಟ್ ಎಂದು ಕೆನ್ನೆಗೂ ಬೆನ್ನಿನ ಮೇಲೂ ಏಟುಗಳು. ಶೀಘ್ರದಲ್ಲಿ ನಿಜಾಂಶವು ಹೊರಬಿತ್ತು. ತನ್ನ ಜಾಣ್ಮೆಯು ಫಲಿಸಲಾರದೆಂದು ಮನಗಂಡನು ಕಿಟ್ಟಿ.

"ಕಳ್ಳ ಬಡ್ಡೀ ಮಗ! ಈಕ್ಷಣ ದೇವರ ಮುಂದೆ ಹೋಗಿ, ಇನ್ನು ಮೇಲೆ ಸುಳ್ಳು ಹೇಳುವುದಿಲ್ಲವೆಂದು ಹತ್ತು ಬಸ್ಕಿ ಹಾಕಿ ಬಾ, ಹೋಗು. ನನ್ನಿದಿರಲ್ಲಿ ನಿಲ್ಲಬೇಡ, ಹೋಗು!" ಎಂದು ಹೇಳಿದಳು ಅಮ್ಮ.

ಕಿಟ್ಟೀ ನಿಂತಲ್ಲೇ ನಿಂತಿದ್ದನು.

"ಹೋಗೋ! ಇಲ್ಲದಿದ್ದರೆ, ನಿನಗೆ ನಾಳೆ ಕಡುಬು ಸಿಗಲಾರದು.... ಹೋಗು, ಬಸ್ಕಿ ಹಾಕಿ ಬಾ"

ಕಿಟ್ಟಿಯು ಕಣ್ಣುಗಳಿಂದ ನೀರು ಹರಿಯಲಾರಂಭಿಸಿತು ತಡೆತಡೆದು ನೋಡಿದ; ಇನ್ನು ಸಹಿಸಲಾರದೆ ಹೋದ. ಕೊನೆಗೆ ಸಿಟ್ಟನಿಂದ, ಕಣ್ಣುಗಳಲ್ಲಿ ನೀರು ತುಂಬಿಕೊಂಡು ಉತ್ತರವಿತ್ತ

"ನನಗೇನೂ ಕಡುಬು ಬೇಡ! ನಾನೇನೂ ಬಸ್ಕಿ ಹಾಕುವುದಿಲ್ಲ."

ಅಮ್ಮನೂ ಕೂಡ ಕ್ಷಣಕಾಲ ಬೆರಗಾದಳು, ಬಳಿಕ ಮೃದುವಾಗಿ, "ಹೋಗೋ, ಬಸ್ಕಿ ಹಾಕಿ ಬಾ, ಒಳ್ಳೆಯ ಹುಡುಗ, ಹೇಳಿದ ಮಾತನ್ನು ಕೇಳು" ಅಂದಳು

ಸುಮ್ಮನೆ ಕಿಟ್ಟಿಯು ದೇವರ ಮನೆಗೆ ಹೋದನು. ಅಲ್ಲಿ ಹತ್ತು ಬಸ್ಕಿ ಹಾಕಿ ಹಿಂದಿರುಗುವಲ್ಲಿ, "ಕೊನೆಗೆ ಕಡುಬೂ ಸಿಗಲಿಲ್ಲ" ಎಂದು ತನಗೆ ತಾನೇ ಅಂದು ಕೊಂಡನು.

ಹೊರಗೆ ಅಲಮೇಲೀ ನಿಂತಿದ್ದಳು. ಅವಳನ್ನು ನೋಡಿದೊಡನೆಯೇ ಅವನಿಗೆ ಮತ್ತೆ ಸಿಟ್ಟು ಬಂದಿತು.

"ನಾಚಿಗೆಯಿಲ್ಲ ? ಚಾಡೀ ಕೋರೀ ಕತ್ತೆ! ಹೋಗೇ ! " ಎಂದ.

"ಯಾರಿಗೋ ನಾಚಿಕೆಯಿಲ್ಲಾ!—ನಿನಗಾ, ನನಗಾ ?"

"ಪೀಡೆ ! ನನ್ನೊಡನೆ ಮಾತನಾಡಬೇಡ, ಹೋಗು ! ಯಾವುದಕ್ಕೂ ನಡುವೆ ಬಂದು ನಿಲ್ಲುವುದು !........ತೋಟದಲ್ಲಿ ಕೆಳಗೆ ಬಿದ್ದರೆ, ಹಾಗೆ ಅಳುತ್ತಾ ಬರಬೇಕೇನೇ ? ಅಳು ಬುರುಕಿ !" ಎಂದು ಸರಸರನೆ ಹೇಳಿ, ಅವಳ ಉತ್ತರಕ್ಕಾಗಿ ನಿಲ್ಲದೆ 'ಸ ರ್ ರ್' ಎಂದು ಹೋಗಿಬಿಟ್ಟನು

ಅಡಿಗೆ ಮನೆಯಲ್ಲಿ ಅಮ್ಮನು ಕಾಣಲಿಲ್ಲ ಅವಳನ್ನು ಹುಡುಕಿಕೊಂಡು ಹೋದನು.

ಅಮ್ಮನು ಅಪ್ಪನ ಕೊಠಡಿಯಲ್ಲಿ ಅದೇನೋ ಮಾತನಾಡುತ್ತಿದ್ದಳು. ಕಿಟ್ಟಿಯು ಹೊರಗೆ ನಿಂತು ಹೊಂಚು ಕೇಳಿದ.

"ಹೌದೂಂದ್ರೆ! ಕಿಟ್ಟೀ, ಪಾಪ, ಕಾಯಿ ಕಡುಬು ಬೇಕೂಂತ ಬಹಳ ಆಸೆಪಡುತ್ತಾನೆ. ಕಳೆದ (ವಿನಾಯಕ) ಚತುರ್ಥಿಯ ದಿವಸದಂದು ಆ ಹುಡುಗನಿಗೆ ಜ್ವರ ಬಂದುಬಿಟ್ಟಿತು. ಈ ಹೊತ್ತು ಮರೆಯದೆ, ನಾನು ಹೇಳಿದು ದೆಲ್ಲವನ್ನೂ ಕೊಂಡು ಬನ್ನಿ. ನಾಳೆ ತಪ್ಪದೆ ಅವನಿಗೆ ಕಡುಬು ಮಾಡಿ ಕೊಡಬೇಕು" ಎಂದು ಅಮ್ಮನು ಹೇಳುತ್ತಿದ್ದಳು.

# ೫. ದೃಶ್ಯವೂ ಕಲ್ಪನೆಯೂ

———

೧

ನಾನು ನನ್ನ ಸ್ನೇಹಿತನಾದ ನಾರಾಯಣನೊಡನೆ ಮೈಸೂರಲ್ಲಿ ಪ್ರವಾಸ ಮಾಡುತ್ತಲಿದ್ದಾಗ, ಶ್ರವಣಬೆಳಗೊಳವನ್ನು ಸಂದರ್ಶಿಸಿದೆ. ಆ ಜೈನ ಕ್ಷೇತ್ರ ದಲ್ಲಿ ಅವತಾರ ಪುರುಷನಂತೆ ಬೆಳಗುವ ಗೋಮಟೇಶ್ವರ ಶಿಲಾಮೂರ್ತಿ ಯನ್ನು ಕಂಡೆ. ಬ್ರಹ್ಮಾಂಡವಾದ ಶಿಲಾಮೂರ್ತಿ ; ಅದುವತ್ತು ಅಡಿ ಎತ್ತರ; ನಿರ್ವಾಣನೆಲೆಯಲ್ಲಿರುವ ಜೈನ ಋಷಿಯ ಶಾಂತಮುಖ ಮುದ್ರೆಯನ್ನು ತೋರ್ಪಡಿಸುತ್ತದೆ. ಹತ್ತು ಶತಮಾನಗಳಿಗೆ ಹಿಂದೆ ನಿಂತಂತೆಯೇ ಈಗಲೂ ಅಲ್ಲಿ ನಿಂತಿರುವರು ಗೋಮಟೇಶ್ವರರು. ನೀಲವಾದ ಆಕಾಶದ ಕೆಳಗೆ, ಕಾಲದೇಶವರ್ತಮಾನವನ್ನು ಲಕ್ಷಿಸದೆ ಅವರು ಮಾನವರಿಗೆ ದರ್ಶನ ನೀಯುತ್ತಲಿದ್ದಾರೆ. ಅವರಿಗೆ ಈಲೋಕದ ಅರಿವಿರುವಂತೆಯೇ ತೋರುವು ದಿಲ್ಲ; ಉಗ್ರ ತಪಸ್ಸಿನಲ್ಲಿದ್ದಾರೆ. ಧ್ಯಾನದಿಂದ ಉದಿಸುವಂತಹುದೊಂದು ಕಾಂತಿಯು ಅವರ ಮುಖದಮೇಲೆ ಪಸರಿಸಿದೆ; ಅದರ ಜೊತೆಗೊಂದು ಮಂದಹಾಸವೂ ಸಹ ವಿರಾಜಿಸುತ್ತಲಿದೆ. ತುಟಿಗಳು ಸ್ವಲ್ಪ ತೆರೆದಿವೆ. ಅವು ಗಳ ರಹಸ್ಯವೇನಿರಬಹುದೆಂಬುದು ಹೊಳೆಯಲಿಲ್ಲ.

ಮರ್ಮವು ಹುದುಗಿರುವ ಆ ಮಂದಹಾಸದ ಅರ್ಥವೇನಿರಬಹುದು? ಆ ಯತೀಶ್ವರರ ಮನಶ್ಶಾಂತಿಯನ್ನು ಅದು ಹೊರಗೆಡಹುತ್ತಿದೆಯೇನು?

ಯಾವ ಕಾರಣದಿಂದಲೋ ಅಷ್ಟರ ಮೇಲೆ ನನ್ನ ಮನಶ್ಶಾಂತಿಯು ಚದುರಿತು. ನನಗೊಂದು ಬಗೆಯ ಹುಚ್ಚೇ ಹಿಡಿಯಿತು. ಒಂದು ಸಾವಿರ ವರ್ಷಗಳಿಂದಲೂ ಆ ಶಿಲಾಮೂರ್ತಿಯಲ್ಲಿ ಐಕ್ಯವಾಗಿದ್ದ ಅತೀತ ಆನಂದವು, ನಾನು ಅದನ್ನು ಸಮೀಪಿಸಿದಾಗ ನನ್ನ ಮೇಲೆ ಹಾದು ಅದಾವಕಾರಣ ದಿಂದಲೋ ನನ್ನ ಹೃದಯವನ್ನು ಭೇದಿಸಿತು! ಒಂದು ನಿಮಿಷ——ಒಂದು

ನಿಮಿಷಮಾತ್ರವೇ——ನನ್ನ ಹೃದಯದೊಳಗೊಂದು ವಿದ್ಯುಚ್ಛಕ್ತಿಯು ಪ್ರಸರಿಸಿದಂತೆ ಭಾಸವಾಯಿತು. ಆ ನಿಮಿಷ ಕಳೆದೊಡನೆಯೇ, ನನ್ನ ಯೋಗನೆಲೆಯೂ ಮುಕ್ತಾಯ ಹೊಂದಿತು ಬಳಿಕ ಹೇಗಾದರೂ ಮಾಡಿ ಆ ಶಾಂತಿಯ ನೆಲೆಯನ್ನೂ, ಆ ಮರ್ಮಯುಕ್ತವಾದ ಮಂದಹಾಸವನ್ನೂ ನಾನು ನನ್ನ ವರ್ಣಗುಚ್ಛದ (painting brush) ಮೂಲಕವಾಗಿ ಚಿತ್ರವೊಂದನ್ನು ಚಿತ್ರಿಸಬೇಕೆಂಬ ಬಯಕೆಯುಂಟಾಯಿತು.

೨

ದಕ್ಷಿಣ ದೇಶಾದ್ಯಂತವೂ ನಾನು ಪ್ರವಾಸ ಮಾಡಿ ಮುಗಿಸಿದೆ. ಹಲವು ಅನುಭವಗಳು, ಹಲವು ಸ್ಫೂರ್ತಿದಾಯಕವಾದ ವಿಷಯಗಳು, ಹಲವು ಬಗೆಯ ಮುಖಗಳು, ಹಲವು ವಿಧವಾದ ಮನುಷ್ಯರು—ಇವನ್ನು ಕುರಿತ ಚಿಹ್ನೆಗಳನ್ನು ಮನನ ಮಾಡಿಕೊಂಡು ಅವೆಲ್ಲವನ್ನೂ ಮುಂದೆ (ಭವಿಷ್ಯದಲ್ಲಿ) ಚಿತ್ರಿಸಿಬಿಡುವುದಕ್ಕಾಗಿ ಶೇಖರಿಸಿಕೊಂಡು ಬಂದೆ. ಆಗಿಂದಾಗ್ಗೆ ಕೆಲವು ಪಠಗಳನ್ನು ಬರೆದುಬಿಡುತ್ತಲೂ ಇದ್ದೆ.

ನನ್ನ ಆಪ್ತ ಸ್ನೇಹಿತನಾದ ನಾರಾಯಣನೂ ನನ್ನ ಜೊತೆ ಪ್ರವಾಸ ಮಾಡಲು ಬಂದನು. ಅವನಿಗೆ ಸ್ನೇಹಿತ 'ಕ್ಯಾಮರಾ' (camera) ಅದರ ಮೂಲಕ ಅವನು ತನಗೆ ಇಷ್ಟವಾದ ಸ್ಥಳಗಳೆಲ್ಲವನ್ನೂ ತಕ್ಷಣ 'ಫೋಟೋ' ತೆಗೆದುಬಿಡುವನು.

"ಆಹಾ, ಎಷ್ಟೊಂದು ಚೆನ್ನಾಗಿದೆ ನೋಡು!" ತಕ್ಷಣ "ಕ್ಲಿಕ್!" ಎಂದು ಅವನ 'ಕ್ಯಾಮರಾ'ದ ಶಬ್ದ.

ಕೊನೆಗೆ ನಾವಿಬ್ಬರೂ ದಟ್ಟವಾದೊಂದು ಅರಣ್ಯದಲ್ಲಿ ಒತ್ತಟ್ಟಿಗಿದ್ದ ಸ್ಥಳವೊಂದನ್ನು ತಲುಪಿದೆವು.

ಸೂರ್ಯಾಸ್ತಮಾನ ಸಮಯ. ಅವನ ನೀಳವಾದ ಹೊಂಗಿರಣಗಳು, ಅರಣ್ಯದ ಎಲ್ಲೆಯಲ್ಲಿ ನಿಂತಿದ್ದ ಮರಗಳ ತಳಭಾಗಕ್ಕೆ ಚಿನ್ನದ ಮುಲಾಮನ್ನು ಸವರಿ, ಬಳ್ಳಿಗಳಿಗೂ ಎಲೆಗಳಿಗೂ ಒಂದು ತರಹೆಯ ಹೊಳಪುಳ್ಳ ಕಾಂತಿಯನ್ನು ಬೀರಿ ಹಚ್ಚನೆಯ ನೆಲದ ಮೇಲೆ ಸ್ವರ್ಣಮಯವಾದ ರತ್ನಕಂಬಳಿ

ಯನ್ನು ಹಾಸಿದಂತೆ ಪಸರಿಸಿ ಎಲ್ಲೆಲ್ಲೂ ಅದ್ಭುತವಾದ ಜ್ಯೋತಿಯನ್ನು ಹರಡಿದ್ದವು. ಅರಣ್ಯದ ಎಲ್ಲೆಯಲ್ಲಿ ನಿಂತ ಗುಡಿಯ ಗೋಪುರವು ಅಗ್ನಿಜ್ವಾಲೆಯಿಂದ ಕರಗುವ ಚಿನ್ನದಂತೆ ಬೆಳಗಿತು; ದೇವಸ್ಥಾನದಾದ್ಯಂತವೂ ವರ್ಣನೀಯವಾದ ಸೌಂದರ್ಯರಾಶಿಯಿಂದ ಸುಶೋಭಿಸುತ್ತಲಿದ್ದಿತು. ದೈವಿಕ ಸೌಂದರ್ಯದಿಂದ ಬೆಳಗುವ ದೃಶ್ಯವದು. ಅದೊಂದು ಸ್ವಪ್ನಲೋಕ. ಹೃದಯದಲ್ಲಿ ಶಾಂತಿ ಉದಿಸಿತು.

ಈ ಪ್ರಶಾಂತ ವಾತಾವರಣದಲ್ಲಿ ಒಬ್ಬಿಬ್ಬರು ಭಕ್ತಾದಿಗಳು ಆ ದೇವಸ್ಥಾನದ ಕಡೆಗೆ ಬಂದು ಹೋಗುತ್ತಲಿದ್ದರು. ಅವರುಗಳ ಬರುವಿಕೆಯಲ್ಲಿಯೂ ಹೋಗುವಿಕೆಯಲ್ಲಿಯೂ ಸಹ ಹೊಸದೊಂದು ವೈಶಿಷ್ಟ್ಯವು ಭಾಸವಾಯಿತು.

"ಮಾಯಾಪ್ರಪಂಚದಂತೆ ತೋರುತ್ತದೆಯಲ್ಲವೇ ? ಸೂರ್ಯನ ಬೆಳಕನ್ನೇ ಪಾನಮಾಡೋಣವೆಂದೆನ್ನುತ್ತದೆಯಲ್ಲಾ!" ಎಂದ ನನ್ನ ಗೆಳೆಯ.

"ಗುಡಿಯೊಳಗೆ ಹೋಗೋಣ ಬಾ, ಒಬ್ಬರೂ ಅರಿಯದ ಮೂಲೆಯಲ್ಲಿ, ನೋಡುವವರಿಲ್ಲದ ಈ ಗುಡಿಗೆ ಬಂದು ನಮಸ್ಕರಿಸಿ ಹೋಗುವ ಭಕ್ತಾದಿಗಳನ್ನು ನೋಡುವಾಗ, ನನ್ನ ಹೃದಯದಲ್ಲಿ ಆಶ್ಚರ್ಯಕರವಾದ ಭೀತಿ ಹುಟ್ಟುತ್ತದೆ" ಎಂದೆ ನಾನು.

ಗುಡಿಯೊಳಗೆ ಹೆಜ್ಜೆ ಇಟ್ಟವನು ಆಕ್ಷಣ ಭಯ ಭಕ್ತಿಯೊಡನೆ ನಿಂತೆ. ಶಾಂತಿರಸದಿಂದೊಡಗೂಡಿದ ದೃಶ್ಯವೊಂದನ್ನು ನಾನು ಅದರೊಳಗೆ ಕಂಡೆ. ಭಗವಂತನ ಸಾಮೀಪ್ಯವನ್ನು ಅದೇ ತಾನೇ ನಾನು ಮನಗಂಡೆನು. ಭಗವಂತನಿಗೆ ಇಷ್ಟೊಂದು ಸಾಮೀಪ್ಯದಲ್ಲಿದ್ದಂತೆ ನಾನು ಅದುವರೆವಿಗೂ ತಿಳಿದಿರಲೇ ಇಲ್ಲ.

ಆ ಗುಡಿಯಲ್ಲಿ ನನ್ನೆದಿರಿನಲ್ಲಿ, ಏಕಾಂತವಾಗಿ ನಿಂತು ದೇವತಾರಾಧನೆಯನ್ನು ಮಾಡುತ್ತಲಿರುವ ಬ್ರಾಹ್ಮಣೋತ್ತಮರೋರ್ವರನ್ನು ನಾನು ಕಂಡೆ. ಇತರರಾರೂ ಅಲ್ಲಿರಲಿಲ್ಲ. ಅವರು, ನಾವು ಬಂದುದನ್ನರಿಯದೆ ಭಕ್ತಿ ಪರವಶರಾಗಿ ಭಗವ ಧ್ಯಾನದಲ್ಲಿ ಮಗ್ನರಾಗಿದ್ದರು.

"ಕ್ಲಕ್!" ಎಂದಿತು ನನ್ನ ಗೆಳೆಯರ ಕ್ಯಾಮರಾ. ಆ ಸಣ್ಣ ಶಬ್ದವೂ ಸಹ ನನಗೆ ಕರ್ಣ ಕಠೋರವೆನಿಸಿತು. ಆ ಪರವಶತೆಯನ್ನು

ಕೆಡಿಸುವಂತಹ ಶಬ್ದವಾಗಿತ್ತು ಅದು. ಆದರೆ ಆ ಭಕ್ತರು ಮಾತ್ರ ಮೈ ಮರೆತು ಹೋಗಿದ್ದರು

ನಾವಿಬ್ಬರೂ ಗುಡಿಯನ್ನು ಬಿಟ್ಟು ಹೊರಗೆ ಬಂದೆವು. ಅಷ್ಟರೊಳಗಾಗಿ ಹೊಂಬಣ್ಣದ ಆಕಾಶವು ಕೆಂಪು ಬಣ್ಣಕ್ಕೆ ತಿರುಗಿದ್ದಿತು. ಪಶ್ಚಿಮ ದಿಕ್ಕಿನಲ್ಲಿ ದಿನಕರನು ಧಗಧಗಿಸುತ್ತಲಿರುವ ತನ್ನ ಕಿರಣಗಳನ್ನು ಅಡಗಿಸಿಕೊಂಡು, ಆಕಾಶದ ತಪ್ಪಲಿನಲ್ಲಿ ಹುದುಗಿಕೊಳ್ಳುತ್ತಿದ್ದನು.

೩

ನಾನು ಪ್ರತ್ಯಕ್ಷವಾಗಿ ನೋಡಿದ ಈ ಅದ್ಭುತವಾದ ಸ್ವಪ್ನಲೋಕವನ್ನು ಕೊನೆಗೆ ನನ್ನ ಚಿತ್ರಲೋಕದಲ್ಲಿ ಹೆಣೆದುಬಿಟ್ಟೆ. ನನ್ನ ಚಿತ್ರದಲ್ಲಿ, ಆ ಸಂಧ್ಯಾ ಕಾಲದಲ್ಲಿ ನಾನು ಕಂಡುದೆಲ್ಲವನ್ನೂ, ಅವು ಎಂದೆಂದಿಗೂ ಅಳಿದು ಹೋಗದಂತೆ ಇರಲು, ಬರೆದು ಬಿಟ್ಟೆ. ಒಂದು ದಟ್ಟವಾದ ಅರಣ್ಯ ಎಲ್ಲೆ ; ಹೊಂಗದಿರುಗಳು ಪಸರಿಸಿದೊಂದು ಪ್ರಾಕೃತಿಕ ನೋಟ ; ಈ ಏಕಾಂತದಲ್ಲೊಂದು ಗುಡಿ, ಅಲ್ಲಿ ಪರವಶತೆಯನ್ನು ಹೊಂದಿದ ಓರ್ವ ಭಕ್ತ, ಅವನ ಮುಖದಲ್ಲಿ ಧ್ಯಾನದ ದೈವಶಾಂತತೆ ; ಅರ್ಧ ಮುಚ್ಚಿದ್ದ ಆತನ ಕಣ್ಣುಗಳಲ್ಲಿ ಒಂದು ತೆರನಾದ ಅತೀತವಾದ ಆನಂದ ; ಸ್ವಲ್ಪವಾಗಿ ತೆರೆದು ಅವನ ತುಟಿಗಳಲ್ಲಿ ಒಂದು ಬಗೆಯ ಆನಂದಮರ್ಮ—ಈ ರೀತಿಯಾಗಿ ಶ್ರವಣಬೆಳಗೊಳದಲ್ಲಿ ನನ್ನ ಮನಸ್ಸಿನಲ್ಲಿ ಗೋಮಟೇಶ್ವರರಿಂದ ಏರ್ಪಟ್ಟಿದ್ದ ಆ ಶಾಂತತೆಯನ್ನು ನಾನು ಈ ಚಿತ್ರದಲ್ಲಿ ತಂದುಕೊಂಡೆ.

ಈ ಚಿತ್ರವನ್ನು ನಾನು ಬರೆದು ಮುಗಿಸಿದ ಕಾಲಕ್ಕೆ ನನ್ನ ಸ್ನೇಹಿತ ನಾರಾಯಣನು ತಾನು ತೆಗೆದಿದ್ದ ಹೊಗೆಯ ಚಿತ್ರವನ್ನು ನನಗೆ ತೋರಿಸಿದ. ಅದರಲ್ಲಿ ನಾನು ಆ ದೇವಸ್ಥಾನದ ಒಳ ಭಾಗವನ್ನು ಕಂಡೆ. ಅಲ್ಲಿ ನಾನೂ ಇದ್ದೆ. ಆದರೆ ಪಠಾತ್ತನೆ ನನಗೊಂದು ಆಲೋಚನೆ ಹೊಳೆಯಿತು. ಅವನು ತೆಗೆದಿದ್ದ ಚಿತ್ರದಲ್ಲಿ ಅವರು ಕಾಣಿಸಲಿಲ್ಲ. ಅದು ಹೇಗೆ ? ಅವರು

ದೇವಸ್ಥಾನದಲ್ಲಿ ನಿಂತಿದ್ದ ಸ್ಥಳ ಸಹ ನನಗೆ ಜ್ಞಾಪಕವಿದೆಯಲ್ಲಾ ! ಆ ಸ್ಥಳವೂ ಸಹ ನನ್ನ ಸ್ನೇಹಿತನ ಚಿತ್ರದಲ್ಲಿ ಬಿದ್ದಿದೆ; ಆದರೆ ಅವರು ಮಾತ್ರ ಕಾಣಿಸಲಿಲ್ಲ.

ಅಂದು ಆ ಅಮೃತವಾದ ದಿನದ ಸಂಧ್ಯಾಕಾಲದಲ್ಲಿ, ಹೊಂಗದಿರುಗಳೂ, ಭಕ್ತಿ ಪರವಶತೆಯೂ ಕೂಡಿದ ಆ ವೇಳೆಯಲ್ಲಿ, ನಾವು ಪ್ರವೇಶಿಸಿದ ದೇವಸ್ಥಾನದಲ್ಲಿ ಒಬ್ಬರೂ ಇರಲಿಲ್ಲವೆಂದು ಈ ಹೊತ್ತೂ ಸಹ ನನ್ನ ಸ್ನೇಹಿತನು ಒಂದೇ ಸಮನಾಗಿ ಸಾಧಿಸುತ್ತಾನೆ.

ಹಾಗಾದರೆ. ನಾನು ಕಂಡದ್ದೂ ಕೂಡ ನನ್ನ ಮನಸ್ಸಿನ ಕಲ್ಪನೆ ಮಾತ್ರವೇನು ?

—※—

# ೬. ವಜ್ರದ ಓಲೆ

೧

ಹಲವು ದಿನಗಳಿಂದಲೂ ಜಯ ತನಗೆ ವಜ್ರದ ಓಲೆ ಬೇಕೆಂದು ಅವನನ್ನು ಕೇಳುತ್ತಿದ್ದಳು ಅವನ ಕೈಯ್ಯಲ್ಲಂತೂ ಹಣ ಕೊಡುವಂತೆ ತೋರಲಿಲ್ಲ. ಯಾರ ಪುಣ್ಯ ವಿಶೇಷದಿಂದಲೋ ಕೊನೆಗೆ ಸರಿಯಾದ "ಕೇಸ್" ಒಂದು ದೊರಕಿತು ಅದರಿಂದ ಅನಿರೀಕ್ಷಿತವಾದ ವರಮಾನ. ಜಯಳಿಗಂತೂ ಕುತೂಹಲವೋ ಕುತೂಹಲ!

"ಈಗಲಾದರೂ ವಜ್ರದ ಓಲೆ ಕೊಡಬಹುದಲ್ಲವೇ?" ಎಂದು ನಂಬಿಕೆಯೂ, ಆಸೆಯೂ ಕಲೆತ ಧ್ವನಿಯಲ್ಲಿ ಕೇಳಿದಳವಳು.

ವರದನು ಮೌನವನ್ನವಲಂಬಿಸಿದನು.

"ನಿಮ್ಮನ್ನೇ ಕಂಡ್ರೀ!" ಎಂದು ತನ್ನ ಧ್ವನಿಯನ್ನು ಸ್ವಲ್ಪ ಏರಿಸಿದಳು.

"ಏನು? ಏನಂದೆ?"

"ವಜ್ರದ ಓಲೆಯನ್ನು ಕುರಿತೇ ಕೇಳಿದೆ..........."

"ಬೇರೆ ಯಾವುದನ್ನು ಕುರಿತು ಕೇಳುವೆ ನೀನು?........"ಕೇಸ್" ಬಂದ ಅದೃಷ್ಟ ನಿನ್ನದೆಂದೇ ಅಲ್ಲವೇ ಹೇಳಿದೆ?" ಎಂದ ವರದ.

"ಹೌದು"

"ಹೌದು ನಾನೂ ಹಾಗೇ ಹೇಳುತ್ತೇನೆ. ಯಾಕೆಂದರೆ, ಬಂದ ಹಣ ಕೂಡಲೇ ವಜ್ರದ ಓಲೆಯ ರೂಪ ತಾಳಿ ನಿನ್ನನ್ನು ಬಂದು ಸೇರುತ್ತದೆಯಲ್ಲವೇ?"

"ಏನಂದರೂ ಜಯ ಕೇಳುವುದಂತೂ ಸರಿಯಲ್ಲ." ಎಂದನ್ನುತ್ತಾ ಅಡಿಗೆಯ ಮನೆಯಿಂದ ಅಲ್ಲಿಗೆ ಬಂದಳು ಪುಟ್ಟಮ್ಮ. ಅವಳು ವರದನ

ತಂಗಿ. ಚಿಕ್ಕಂದಿನಲ್ಲೇ ವಿಧವೆಯಾಗಿ. ವರದನ ಮನೆಯಲ್ಲಿ ವಾಸಿಸುತ್ತಿದ್ದಳು. ಸ್ವಾಭಾವಿಕವಾಗಿ ಒಳ್ಳೆಯ ಗುಣಶೀಲೆಯಾದರೂ, ಬಾಳಿನಲ್ಲಿ ಜಿಗುಪ್ಸೆಯುಂಟಾಗಿ ಬಿಟ್ಟಿತಾದುದರಿಂದ, ಎಲ್ಲ ವಿಷಯಗಳಲ್ಲೂ ಬಂಧು ಬಳಗದವರಲ್ಲಿ ಅಸಮಾಧಾನವನ್ನು ತೋರಿಸುವಳು. ಆದರವಳ ಹೃದಯವು ನಿಷ್ಕಳಂಕವಾದದ್ದು.

"ನಾನು ಏನಂದರೂ, ನೀನದನ್ನು ಇದಿರಿಸಿಯೇ ಹೇಳಬೇಕೇನು?" ಎಂದು ಕೋಪಗೊಂಡು ಅವಳ ಮೇಲೆ ತಿರುಗಿದಳು ಜಯಿ.

"ಹೌದು, ನಿನಗೇನಾದರೂ ಯೋಚನೆ ಗೀಚನೆ ಇದ್ದರೆ ಹೀಗೆ ಹೇಳಲಾರೆ. ನಿನಗೇಕೆ ಈಗ ವಜ್ರದ ಓಲೆ? ಅದಿಲ್ಲದಿದ್ದರೆ ಊಟ ಸೇರದೇ? ನಾವೀಗ ವಜ್ರದ ಓಲೆ ತೆಗೆಯುವುದೆಂದರೆ ಸುಲಭವೇನು?" ಎಂದು ಪ್ರಾರಂಭಿಸಿದಳು ಪುಟ್ಟಮ್ಮ.

ಅಷ್ಟರ ಮೇಲೆ ಇಬ್ಬರ ನಡುವೆಯೂ ಮಾತುಗಳು ಮೇಲಿಂದ ಮೇಲೆ ಬೆಳೆಯಲು, ಕೊನೆಗೆ ಜಯಳಿಗೆ ವಜ್ರದ ಓಲೆ ತೆಗೆಯುವುದಾಗಿ ವರದ ಮಾತು ಕೊಟ್ಟು, ವಿಷಯವನ್ನು ಸಮಾಧಾನ ತಂದನು ಕೊನೆಗೆ ಯೋಚನೆ ಇಲ್ಲದೆ—ವಕೀಲನೆಂದೋ ಏನೋ—ಪ್ರತ್ಯೇಕವಾಗಿ ತಂಗಿಯೊಡನೆ, "ನೀನು ಕೋಪಿಸಿಕೊಳ್ಳಬಾರದು, ಪುಟ್ಟೂ! ನಿನ್ನ ಬಾಳಿನಲ್ಲ ದುರದೃಷ್ಟವೇರ್ಪಟ್ಟುದುದೇನೋ ನಿಜ. ಅದರಿಂದ ನೀನು ಹೀಗೆ ಇತರರಲ್ಲಿ ನಿನ್ನ ಮನಸ್ಸನ್ನು ತೋರ್ಪಡಿಸಿಕೊಂಡಿರಬಾರದಾಗಿತ್ತು." ಎಂದನು. ಎರಡೇ ಎರಡು ವಾಕ್ಯಗಳು; ಆದರೆ ಅವನ್ನು ಹೇಳಿದೊಡನೆಯೇ, ವರದನು ಪಶ್ಚಾತ್ತಾಪಪಟ್ಟನು. "ಯಾಕೆ ಹೀಗೆ ದುಡುಕೆ ಮಾತನಾಡಿಬಿಟ್ಟೆ" ನೆಂದು ತನಗೆ ತಾನೇ ನೊಂದುಕೊಂಡನು. ಬದುಕಿನಲ್ಲಿ ಘಾಯಹೊಂದಿದ್ದ ಪುಟ್ಟಮ್ಮನ ಹೃದಯವನ್ನು ಆ ಎರಡು ವಾಕ್ಯಗಳು ಪುನಃ ಘಾಯಪಡಿಸಿದವು.

"ಹೌದು ನೀನು ಹೇಳುವುದು ನಿಜವೇ." ಎಂದಳವಳು. ಅಷ್ಟರ ಮೇಲವಳು ಮಾತನಾಡಲಿಲ್ಲ. ವರದ ವ್ಯಾಕುಲಿತನಾದ.

"ಯಾಕೆ ಹೀಗೆ ನನ್ನರಿವಿಲ್ಲದೆ ಕೆಲ ಸಮಯಗಳಲ್ಲಿ ಆಡಿ ಬಿಡುತ್ತೇನೆ?" ಎಂದು ತನ್ನನ್ನೇ ಪ್ರಶ್ನಿಸಿಕೊಂಡ. "ನನ್ನ ತಂಗಿ ಹೇಳಿದ್ದು

ನಿಜವಲ್ಲವೇ? ಅದರಲ್ಲಿ ಅಸಮಾಧಾನ, ಹಗೆತನವೇನೂ ಇಲ್ಲವಲ್ಲಾ! ನನ್ನ ಮಡದಿ ಕೇಳಿದುದಲ್ಲವೇ, ತಿಳಿಗೇಡಿತನ? ಅವಳದೊಂದು ಅಲ್ಪ ಆಸೆಯನ್ನು ಪೂರ್ತಿಗೊಳಿಸುವುದಕ್ಕಾಗಿ ಆನಂದ ಜೀವನವನ್ನೇ ಕಂಡರಿಯದ ನನ್ನ ತಂಗಿಯ ಮನಸ್ಸನ್ನು ಹೀಗೆ ನೋಯಿಸಿಬಿಟ್ಟೆನಲ್ಲಾ!'' ಎಂದು ವ್ಯಥೆಗೊಂಡನು. ಅವನಿಗೆ ಅವನ ಮಡದಿಯ ಮೇಲೆ ಕೊಂಚ ಅತೃಪ್ತಿ ತಲೆದೋರಿತು

''ಏನೋ ಬುದ್ಧಿಯಿಲ್ಲದೆ ಅಂದುಬಿಟ್ಟೆ. ಅದನ್ನು ಮನಸ್ಸಿಗೆ ಹಚ್ಚಿಕೊಳ್ಳಬೇಡ ಪುಟ್ಟಮ್ಮಾ'' ಎಂದವನು ಹೇಳಿದ.

''ನಾನೇಕೆ ಅದನ್ನು ಮನಸ್ಸಿಗೆ ಹಚ್ಚಿಕೊಳ್ಳಲಿ? ನನಗಿರುವುದು ನೀನೊಬ್ಬನೇ ಅಲ್ಲವೇ?'' ಎಂದಳು ತಂಗಿ.

"ಪುಟ್ಟೂ! ನೀನು ಜಯಳ ವಿಷಯವಾಗಿ ಹೇಳಿದುದು ಸರಿಯೇ. ಅವಳು ಹೀಗೆ ದುಂದು ವೆಚ್ಚವಾಗಿ ವಜ್ರದೋಲೆ ಕೇಳುವುದು ಜಾಣ್ಮೆಯಲ್ಲ."

ಪುಟ್ಟಮ್ಮನು ಉತ್ತರ ಕೊಡಲಿಲ್ಲ.''

"ನಾನವಳಿಗೆ ವಜ್ರದೋಲೆ ತೆಗೆಯುವುದಿಲ್ಲ. ನಾನು ನಿನ್ನ ಮಾತನ್ನು ಗಮನಿಸಲಿಲ್ಲವೆಂದು ತಿಳಿಯಬೇಡ. ನಾನವಳಿಗೆ 'ಇಮಿಟೇಷನ್' ವಜ್ರವನ್ನೇ ಕೊಂಡು ತರುವೆನು.''

"ನಾನೇನನ್ನೂ ಹೇಳುವುದಿಲ್ಲ. ನಿನ್ನಿಷ್ಟದಂತೆಯೇ ಮಾಡು.''

೨

ಅಂದು ಸಂಜೆ ವರದ ಮನೆಗೆ ಹಿಂದಿರುಗಿ ಬಂದಾಗ ಜಯ ಅವನನ್ನು ಬಹಳ ಸಂತೋಷದೊಡನೆ ಬರಮಾಡಿಕೊಂಡಳು.

''ವಜ್ರದ ಓಲೆ ಎಲ್ಲಿ?'' ಎಂಬುದೇ ಅವಳ ಮೊದಲ ಪ್ರಶ್ನೆ.

ಅವಳ ಕೈಗೆ ವರದ ಓಲೆಗಳನ್ನು ಕೊಟ್ಟನು. ಅವಳ ಮುಖದಲ್ಲಿ ನಸುನಗೆ ಮೂಡಿತು.

''ಓಹೋಹೋ, ಮಳೆ ಬಂದೀತು! ಇಷ್ಟು ದಯ ನಿಮಗೆ ಬಂದಿತಲ್ಲಾ!"

ಅವಳು ಅವನನ್ನು ನೋಡಿದ ನೋಟದಲ್ಲಿ ಪ್ರೇಮ ತುಂಬಿ ತುಳುಕುತ್ತಲಿದ್ದಿತು.

"ಅದೆಷ್ಟೊಂದು ಸುಲಭವಾಗಿ ಪರವಶಳಾಗಿ ಬಿಡುತ್ತಾಳೆ?" ಎಂದು ವರದನಿಗೆ ತೋರಿತು.

ಆದರೆ ಅವನು ಮಾಡಿದ ಮೋಸ ಅವನ ಹೃದಯವನ್ನು ತಟ್ಟನೆ ಚುಚ್ಚಿತು.

ಅವಳ ಆನಂದವು ಎಳೆತನವಾಗಿರಬಹುದು. ಆದರೂ ಆ ಆನಂದದಲ್ಲಿ ಅವನು ಪಾಲುಗಾರನಾಗಲಿಲ್ಲ. ಪೋಲೀ ವಜ್ರವೆಂದು ಅವಳೊಡನೆ ಹೇಳಲು ಅವನಿಗೆ ಧೈರ್ಯ ಹುಟ್ಟಲಿಲ್ಲ. ತನ್ನರಿವಿಲ್ಲದೆಯೇ ಅವನೊಂದು ಸಮಸ್ಯೆಯಲ್ಲಿ ಸಿಲುಕಿ ಬಿದ್ದನು. ಅವಳಲ್ಲಿ ಪಸರಿಸಿದ ಎಳೆತನದ ಆನಂದವು, ಅವಳ ತುಟಿಯಲ್ಲಿ ಅರಳಿದ ಹುಡುಗಾಟದ ನಗೆಯು, ಅವಳ ಕಣ್ಮಣಿಗಳಲ್ಲಿ ಬೆಳಗಿದ ಆನಂದ ರಶ್ಮಿ—ಎಲ್ಲವೂ ಒಂದು ಮೋಸದಿಂದ ಜನಿಸಿದವು!

"ಬೆಲೆಯೇನು? ಬಹಳವಾಗಿರಬೇಕಲ್ಲಾ!"

"ನಿನ್ನ ಮನಸ್ಸಿಗೆ ಒಪ್ಪಿದೆಯೋ ಇಲ್ಲವೋ!"

"ಒಪ್ಪದೆ?—ನೀವು ಹೇಳುವುದು ಚೆನ್ನಾಯಿತು!"

"ಅವಳೊಡನೆ ಅದು ಪೋಲೀ ವಜ್ರವೆಂದು ಹೇಳಿ ಬಿಡಬೇಕೆಂದು ವರದ ಬಹಳ ಸಲ ಯತ್ನಿಸಿದ. ಆದರೆ ಅವಳ ಆನಂದವೆಂಬ ಕೋಟೆಯನ್ನು ಕೆಡವಲು ಅವನಿಗೆ ಮನ ಬರಲಿಲ್ಲ."

"ಏನೀರೀತಿಯಾಗಿ ಯೋಚನೆಯಿಲ್ಲದೆ ಕೆಲಸ ಮಾಡಿಬಿಟ್ಟೆ! ತಂಗಿಯ ವ್ಯಥೆಯನ್ನು ಕಂಡು ಹೀಗೆ ಅವಸರ ಪಟ್ಟುಕೊಂಡು ತಂದುಬಿಟ್ಟೆನಲ್ಲಾ!"

೩

ಅಂದು ರಾತ್ರಿ ವರದನಿಗೆ ನಿದ್ರೆ ಹತ್ತಲಿಲ್ಲ. ಬಹಳ ಹೊತ್ತು, ತಾನು ಕೊಂಡು ತಂದ........ಜಯ ತೃಪ್ತಿ ಹೊಂದಿದ—ಪೋಲೀ ವಜ್ರದೋಲೆಗಳನ್ನು ಕುರಿತೇ ಚಿಂತಿಸುತ್ತಲಿದ್ದನು.

ಪಕ್ಕದಲ್ಲಿ ಜಯ ನಿದ್ರೆಮಾಡುತ್ತಿದ್ದಳು.

"ಇದೇನಪ್ಪ ಅವಸ್ಥೆ! ನಿದ್ರೆ ಹತ್ತಲಿಲ್ಲವಲ್ಲಾ! ಜಯಳೊಡನೆ ಈಗಲೇ ಹೇಳಿಬಿಡಲೇ ?

ಹಾಸಿಗೆಯಲ್ಲಿ ಹೊರಳಿ ಮಲಗಿಕೊಂಡು ನಿದ್ರೆ ಮಾಡಲು ಯತ್ನಿಸಿದನು. ಆದರೆ ಅದೇಕೋ ಅವನ ಮನಸ್ಸು ನೆಮ್ಮದಿ ಹೊಂದಲಿಲ್ಲ.

"ಸರಿ, ನಾಳೆ ಸುಮ್ಮನೆ ಬಂದು ನಿಜವಾದ ವಜ್ರದೋಲೆ ಕೊಂಡು ತಂದು ಬಿಡುತ್ತೇನೆ!—ಆಗ ಈ ಸಂಕಟ ತೊಲಗುವುದು!—ಇಲ್ಲ, ಅವಳೊಡನೆ ಇದು ಪೋಲೀ ವಜ್ರವೆಂದು ಹೇಳಿಬಿಟ್ಟು, ಕೂಡಲೇ ನಿಜವಜ್ರ ಕೊಂಡುಕೊಡುವುದಾಗಿ ಹೇಳಬೇಕು. ಕೂಡಲೇ ಕೊಂಡುಕೊಡಬೇಕು."

"ಆದರೆ ನಾನು ಮೋಸಗೊಳಿಸಿದೆನೆಂಬುದನ್ನು ತಿಳಿದ ಬಳಿಕ ಜಯಳೇನು ಅಂದುಕೊಳ್ಳುವಳೋ ?"

"........ಹೌದು, ಅದೇ ಮತ್ತೆ ಸರಿ. ಒಂದು ಜೊತೆ ವಜ್ರದೋಲೆ ಕೊಂಡು ತಂದು, ಕೈಯಲ್ಲಿಟ್ಟುಕೊಂಡು ನಿಜವನ್ನು ಹೇಳಿಬಿಡುವುದು........,

"........ಆದರೆ ಈಗಲೇ ಇಷ್ಟೊಂದು ಹೊತ್ತು ಮೀರಿತಲ್ಲಾ! ಇನ್ನು ನಾಳೆ ಅವಳೊಡನೆ ಹೇಗೆ ಹೇಳಲಿ ?"

"ಅವಳಿಗೆ ತಿಳಿಯದಂತೆ ನಿಜ ವಜ್ರದೋಲೆಯನ್ನು, ಪೋಲೀಗೆ ಬದಲು ಬದಲಾಯಿಸಿ ಇಟ್ಟುಬಿಡೋಣವೇ? ಆಗ ಸಂಕಟವೆಲ್ಲ ತೊಲಗುವುದು........"

"ಎರಡು ಸಲ ಮೋಸಗೊಳಿಸುವುದು ಒಂದು ಮೋಸಕ್ಕೆ ಪರಿಹಾರವಾಗುವುದೇ ?........"

"ಸರಿ, ಈ ಆಲೋಚನೆಯೇ ಸರಿ. ನಿಜ ವಜ್ರದೋಲೆಯನ್ನು ಜೇಬಿನಲ್ಲಿಟ್ಟುಕೊಂಡು, ಸತ್ಯಾಂಶವನ್ನು ಹೇಳಿ, ಕೂಡಲೇ ಅದನ್ನು ಅವಳಿಗೆ ಕೊಡಬೇಕು."

"........ಛಟ್, ಹಾಗೆ ಮಾಡಕೂಡದು. ನಾಳೆ ಅವಳಿಗೆ ಹೇಳಿ ಅವಳನ್ನು ಸಮಾಧಾನಗೊಳಿಸಿಬಿಟ್ಟು, ಬಳಿಕ ಅವಳನ್ನು ಜೊತೆಯಲ್ಲಿ ಕರೆದುಕೊಂಡು ಹೋಗಿ, ಓಲೆಯನ್ನು ಕೊಂಡು ಕೊಟ್ಟು ಬಿಡಬೇಕು......."

ವರದ ಎರಡು ಸಲ ಹಾಸಿಗೆಯಲ್ಲಿ ಹೊರಳಿದನು. ಕೊಂಚ ಕಾಲ ಕಳೆಯಿತು. ಜಯ ಹಾಸಿಗೆಯಿಂದೆದ್ದು ದೀಪದ 'ಸ್ವಿಚ್' ಹಾಕಿದಳು.

"ಏನು ಜಯ, ಅಷ್ಟರೊಳಗೆ ಎದ್ದುಬಿಟ್ಟೆ?"

"ಕೊಂಚ ನೀರು ಕುಡಿಯೋಣವೆಂದು ಎದ್ದೆನಷ್ಟೆ. ನೀವೇಕೆ? ಯಾವಾಗ ಎಚ್ಚೆತ್ತುಗೊಂಡಿರಿ ?

"........ಇಲ್ಲ, ನಾಳೆ 'ಕೇಸ್' ಇದೆಯಲ್ಲವೇ........ಪೇಚಾಟವಾಗಿದೆ ........ಭಾರೀ 'ಕೇಸ್'.... ...ಮನಸ್ಸಿನಿಂದ ಅಗಲಿ ಹೋಗಲೇ ಬಲ್ಲದು..... ಮನಸ್ಸಿನಲ್ಲೊಂದು ಭಾರದಂತಿದೆ."

"ಚೆನ್ನಾಗಿದೆ! ಹೀಗೆ 'ಕೇಸ್' ಗಾಗಿ ನಿದ್ರೆ ಕೆಡಿಸಿಕೊಳ್ಳುವುದೇನು? ವೈ ಏನಾಗಬೇಕು? ದೇವರೇ ಗತಿಯೆಂದು ಎಲ್ಲವನ್ನೂ ಮರೆತು ಮಲಗೀಂದ್ರೇ! 'ಕೇಸ್' ಹಾಳಾದರೂ ಚಿಂತೆಯಿಲ್ಲ."

ಅವಳು ಜಲಪಾನ ಮಾಡುವಾಗ ವರದ ಅವಳನ್ನು ಕಾತುರತೆಯಿಂದ ದೃಷ್ಟಿಸಿದನು "ನಾಳೆ ನಿಶ್ಚಯವಾಗಿಯೂ ಇವಳೊಡನೆ ನಿಜ ಹೇಳಿಬಿಟ್ಟು, ಕೂಡಲೇ ಒಳ್ಳೆಯ ನಿಜ ವಜ್ರದೋಲೆ ಕೊಂಡು ಕೊಟ್ಟುಬಿಡಬೇಕು" ಎಂದು ತನಗೆ ತಾನೇ ನಿಶ್ಚಯಿಸಿ ಹೇಳಿಕೊಂಡನು.

ಜಯ ನೀರು ಕುಡಿದ ಬಳಿಕ ಆ ದೀಪವನ್ನಾರಿಸುತ್ತಾ, "ಸರಿ, ಇನ್ನಾದರೂ ಮಲಗಿ. ಮನಸ್ಸನ್ನು ಹೀಗೆ ಅನ್ಯಾಯವಾಗಿ ಶ್ರಮಪಡಿಸಿ ಕೊಳ್ಳಬೇಡಿ. ದೇವರೇ ಗತಿಯೆಂದು ಎಲ್ಲವನ್ನೂ ಮರೆತು, ಚೆನ್ನಾಗಿ ನಿದ್ರೆ ಮಾಡಿ" ಎಂದಳು.

—:o:—

# ೭. ಒಂದು ದಿನದ ಸಂಭವ

ಅಂದು ಬೆಳಗಾದಾಗಿನಿಂದ ಪಾರ್ವತಿಯ ಹಿಂಸೆ ಷುರುವಾಯಿತು. ಅವಳಿಗೂ ಅವಳ ಗಂಡನಿಗೂ ಕಲಹ ಹುಟ್ಟಿಸಬೇಕೆಂದೇ ಕಂಕಣ ಬದ್ಧನಾಗಿ ಸೂರ್ಯನುದಯಿಸಿದನೋ ಎಂಬಂತೆ ಆದಿತ್ಯೋದಯವಾಯಿತು.

ವಿಷಯವು ಬೆಳಿಗ್ಗೆ ಅಂಕುರಿಸಿದ ಬೆಂಗಳೂರಿನ ರೇಷ್ಮೆ ಸೀರೆಯ ಪ್ರಶ್ನೆಯಿಂದ ಪ್ರಾರಂಭವಾಯಿತು.

"ಇಲ್ಲಾಂದ್ರೇ" ಎಂದು ಅವನಿಗೆ ಬೆಳಗಿನ ಕಾಫಿಯನ್ನು ಕೊಡುವಾಗ ಪಾರ್ವತಿ ಪ್ರಾರಂಭಿಸಿದಳು; "ನನ್ನನ್ನು ಮೋಸಗೊಳಿಸುವುದೇ ನಿಮಗೆ ಪದ್ಧತಿಯಾಗಿ ಬಿಟ್ಟಿದೆಯಲ್ಲಾ ನಾನು ಎರಡು ದಿನಗಳಿಂದಲೂ ನಿಮ್ಮನ್ನು ಕೇಳುತ್ತಿರುವೆನಲ್ಲಾ."

ಶೇಖರನಿಂದ ಉತ್ತರ ಬಾರದಿರಲು, ಅವಳು ಗದ್ಗದ ಸ್ವರದಲ್ಲಿ ಪ್ರಾರಂಭಮಾಡಿದಳು. "ಉಟ್ಟುಕೊಳ್ಳುವುದಕ್ಕೆಂದು ಒಳ್ಳೆಯದಾಗಿ ಈ ಮನೆಯಲ್ಲೊಂದು ಸೀರೆ ಇದೆಯೇ?"

ಅದಕ್ಕೆ ಉತ್ತರವಾಗಿ ಶೇಖರನಿಂದ ಮುಗುಳುನಗೆಯೊಂದು ಮಾತ್ರವೇ. ಅದನ್ನು ಕಂಡು ಯಾರಿಗೆ ತಾನೇ ಕೋಪ ಉಕ್ಕಲಾರದು? ಅದು ಸಾಲದೆಂದು ಶೇಖರ ಒಂದು ಗುಟುಕು ಕಾಫಿ ಕುಡಿದು "ಏನು, ಒಂದು ದಿನವಾದರೂ ಕುಡಿಯೋವಂಥಾ ಒಳ್ಳೆ ಕಾಫಿ ಉಂಟೆ ಈ ಮನೆಯಲ್ಲೀ?" ಎಂದನು.

"ಬೇಡವಾದರೆ ಕಾಫಿಯನ್ನು ಭಾವಿಯಲ್ಲಿ ಸುರಿದು ಬನ್ನಿ." ಎಂದು ಸಿಡುಕಿನಿಂದ ನುಡಿದಳು ಪಾರ್ವತಿ. ಮೊನ್ನೆಯಿಂದಲೂ ನಿಮ್ಮನ್ನು ಕೇಳುತ್ತಲೇ ಇದ್ದೇನೆ. ಎಲ್ಲಾ ನಿಮಗೆ ಹುಡುಗಾಟವಾಗಿ ತೋರುತ್ತೆ. ನಾನು ಏನಾದರೇನು, ನಿಮಗೆ? ಈ ಹೊತ್ತು ಕ್ಲಬ್ಬಿಗೆ ಏನನ್ನು ಉಟ್ಟುಕೊಂಡು

ಹೋಗಲಿ ? ಇಂದಂತೂ ವರ್ಷೋತ್ಸವ ಬೇರೆ! ನಮ್ಮ ಕಛೇರಿ ನಮಗೆ ಮುಖ್ಯವಂತೂ ಹೌದು !........ಸರಿ, ನಾನು ಹೋಗದೇ ಇದ್ದುಬಿಟ್ಟರೆ......

ಆಗ ಸುಲೋಚನಾ, ಸರೋಜಾ, ಲೀಲಾ ಎಲ್ಲರೂ ಏನನ್ನುವರು ? 'ಆ ಪಾರ್ವತಿಯ ಗಂಡ ಇದ್ದಾರಲ್ಲಾ' ಎಂದನ್ನುವರು ! ...ಅದು ಹೋಗಲಿ, ನನ್ನನ್ನು ನೋಡಲು ಅವರೆಲ್ಲಾ ಇಲ್ಲಿಗೆ ಬಂದರೆ, ಅವರಿಗೆ ನಾನೇನು ಹೇಳಲಿ ! 'ಉಟ್ಟುಕೊಂಡು ಬರಲು ಸೀರೆ ಇಲ್ಲ' ಎಂದು ಹೇಳಲೇ ? "

ಪಾರ್ವತಿ ಇಚ್ಛಿಸಿದ ಸೀರೆ ಶೇಖರನ ಸಂಪಾದನೆಗೆ ಸ್ವಲ್ಪ ಅಧಿಕ ಬೆಲೆಯುಳ್ಳದ್ದೇನೋ ಹೌದು. ಆದರೂ ಕೂಡ ಅದನ್ನು ಅವಳಿಗೆ ಕೊಂಡುಕೊಟ್ಟು, ಅವಳನ್ನು ತೃಪ್ತಿಗೊಳಿಸಬೇಕೆಂದು ಅವನು ಈಗಾಗಲೇ ತೀರ್ಮಾನ ಮಾಡಿಕೊಂಡಿದ್ದನು. ಆದರೂ ಕಾಲ ಕಳೆಯಲು ಮಾತು ಬೇಕಲ್ಲಾ ಎಂದು, ಅವನು ಅವಳನ್ನು ಸ್ವಲ್ಪ ಕೀಟಲೆ ಮಾಡಲಾರಂಭಿಸಿದನು.

" ಓಹೋಹೋ ! ಅಂದರೆ ಅವರಿಲ್ಲಿಗೆ ಬರುವರೇನು ? ನಿಜವಾಗಿಯೇ? ಭಯವಾಗುತ್ತದೆಯಲ್ಲಾ ! ನಾನು ನಿನಗೆ ಸೀರೆ ಕೊಂಡುಕೊಡದೆ, ನಿಮ್ಮ ಸುಲೋಚನಾ........ಎಲ್ಲರ ಮುಖವನ್ನೂ ನೋಡಲು ನನಗೆಲ್ಲಿ ಧೈರ್ಯ ? ಸರಿ, ಅಂದರೆ ಸುಮ್ಮನೆ ಆ ಸೀರೆಯನ್ನು ಕೊಂಡು ಕೊಟ್ಟುಬಿಡಬೇಕಷ್ಟೇ."

" ಸರಿ, ಸರಿ. ನಾನೇನಂದರೂ ನಿಮಗೆ ತಮಾಷೆ. ಹೇಳುವುದನ್ನು ಸ್ವಲ್ಪವಾದರೂ ಆಸಕ್ತಿಯಿಂದ ಕೇಳಿದರಲ್ಲವೇ........ನಾನು ಇನ್ನುಮೇಲೆ ಆಸಕ್ತಿ ಇರುವವರ ಹತ್ತಿರವೇ ಹೋಗಿ, ಬೇಕು ಬೇಕಾದುದನ್ನೆಲ್ಲ ಕೇಳುತ್ತೇನೆ. ಈವಾಗಲೇ ನಮ್ಮ ತೌರುಮನೆಗೆ ಹೊರಟು ಹೋಗುತ್ತೇನೆ. ಆಗ ನಿಮಗೆ ತೃಪ್ತಿ ಅಲ್ಲವೇ ? "

" ಐಯ್ಯಯ್ಯೋ ! ನೀನು ಹೋಗಿಬಿಟ್ಟರೆ, ಆಮೇಲೆ ನಿನ್ನ ಸ್ನೇಹಿತರ ಮುಖವನ್ನು ನಾನು ಹೇಗೆ ನೋಡಲಿ ? ಹಾಗೇನೂ ಮಾಡಿಬಿಡಬೇಡಮ್ಮಾ ತಾಯಿ. ನಿಮ್ಮ ಸುಲೋಚನಾ........ಎಲ್ಲರನ್ನೂ ನೋಡಲು ನನಗೆ ಆಗ ಧೈರ್ಯ ಬರಲಾರದಲ್ಲಾ!........ಮತ್ತು ಈ ಹೊತ್ತು ನಿಮ್ಮ ಕ್ಲಬ್ಬಿನ ವರ್ಷೋತ್ಸವವಲ್ಲವೇ. ಅದಕ್ಕೆ ನೀನು ಹೋಗಬೇಡವೇನು ? "

" ನಿಮಗೂ ಸಹ ಅದು ವ್ಯತ್ಯಾಸವಾಗೆ ತೋರುತ್ತದೆಯೇನು ?........ ಸರಿ, ಸರಿ. ನಾನು ಹೋಗಿ ಬರುತ್ತೇನೆ."

"ಅಯ್ಯೋ ಪಾಪ! ಹಾಗೆ ನೀನು ಅಮ್ಮನ ಮನೆಗೆ ಹೋಗುವು ದಾದರೆ, ಮರೆಯದೆ ಆ ಸೀರೆಯನ್ನು ನಿಮ್ಮಮ್ಮನನ್ನೇ ಕೊಂಡುಕೊಡ ಹೇಳು. ಆ ಸೀರೆಯಿಲ್ಲದೆ ನೀನು ಹಿಂದಿರುಗಿದರೆ ಪುನಃ ಅಮ್ಮನ ಮನೆಗೆ ಹೋಗಬೇಕೆಂದು ಹೊರಡಬೇಕಾಗಬಹುದು. ಅದು ನಿಮ್ಮಮ್ಮನಿಗೆ ಸೌಕರ್ಯವಾಗಿರುವುದೋ ಇಲ್ಲವೋ?"

"ಅದೇನು ಹಾಗನ್ನುವಿರಿ? ನಮ್ಮಮ್ಮನು ನಿಮ್ಮ ಹಾಗೇನು?— ಕೇವಲ ಒಂದು ಸೀರೆಯನ್ನು ತೆಗೆದುಕೊಡಲು ಇಷ್ಟೊಂದು ಮೀನ ಮೇಷ ಮಾಡಳು!" ಎಂದೆನ್ನುತ್ತಾ ಪಾರ್ವತಿ ತಟ್ಟನೆ ಮುಖ ತಿರುಗಿಸಿಕೊಂ ಡಳು. ಅವಳ ಆ ಚಲನವನ್ನು ಕಂಡು, ಶೇಖರನ ಹೃದಯದಲ್ಲೊಂದು ಮುಳ್ಳು ನಾಟಿದಂತಾಯಿತು. ಮುಖವನ್ನು ತಿರುಗಿಸಿಕೊಂಡಿದ್ದರೂ ಕೂಡ ಆವಳ ಕಣ್ಣುಗಳಲ್ಲಿ ಕಣ್ಣೀರು ತುಳುಕಲಾರಂಬಿಸಿ ಬಿಟ್ಟಿದೆಯೆಂದು ಅವನಿಗೆ ಅರಿವಾಯಿತು—"ಆಟದ ಎಲ್ಲೆಯನ್ನು ದಾಟಿ ಬಿಟ್ಟೆನೆಂದು ಪಶ್ಚಾತ್ತಾಪ ಗೊಂಡನು.

"ಕೋಪಿಸಿಕೊಳ್ಳಬೇಡಿ, ಪಾತೂ" ಎಂದು ಶೇಖರನು, ತನ್ನ ಕೈಯಿಂದ ಅವಳನ್ನು ತನ್ನ ಕಡೆಗೆ ಸೆಳೆದು, ಸಮಾಧಾನ ಮಾಡಲಾರಂ ಭಿಸಿದನು. "ನಾನು ಹುಡುಗಾಟದಲ್ಲಿ ಬಹಳ ಮುಂದುವರಿದುಬಿಟ್ಟೆ. ಆದರೂ ಕೂಡ, ಅದರಿಂದೇನೀಗ? ನಿನ್ನಿಷ್ಟದಂತೆಯೇ, ಆ ಸೀರೆಯನ್ನು ಕೊಂಡು ಕೊಳ್ಳೋಣ. ನಾನು ಆಟಕ್ಕಾಗಿ ಅಸಡ್ಡೆಯಾಗಿದ್ದೆನಷ್ಟೇ, ಅದನ್ನು ನೀನು ಲಕ್ಷ್ಯಮಾಡಬಾರದು" ಎಂದನು.

"ಹೌದೌದು, ಆ ಸೀರೆ ಈಗ ಯಾರಿಗೆ ಬೇಕಾಗಿದೆ?" ಎಂದು ಸಿಟ್ಟಿನಿಂದ ನುಡಿದಳು ಪಾರ್ವತಿ; "ಇಷ್ಟೊಂದು ಅಂಗಲಾಚಿ ಬೇಡಿದ ಬಳಿಕ ಏನೂ ಇಲ್ಲ; ಒಂದು ಸೀರೆಗಾಗಿಯೇ ಇಷ್ಟೊಂದು ಗಂಟಲು ಒಣ ಗಿಸಿಕೊಂಡು ಅಂಗಲಾಚಬೇಕು? ರಾಮರಾಮಾ! ಇಷ್ಟೊಂದು ಮಾತಿಲ್ಲ- ದಂತೆ ಮುಂಚೆಯೇ ಆ ಹಾಳು ಸೀರೆಯನ್ನು ಕೊಂಡು ಕೊಟ್ಟಿರಬಾರದೇ?"

ಶೇಖರನು ಬೆಚ್ಚಿ ಬಿದ್ದನು. "ಏನು ಪಾತೂ, ನೀನು ಕೂಡ ಹೀಗೆ ಮಾತನಾಡುವಿಯಲ್ಲ! ನಾನೇ ಮತ್ತೆ ಅದೆಲ್ಲವೂ ಹುಡುಗಾಟವೆಂದು ಹೇಳಿ ದೆನಲ್ಲಾ!"

"ಸರಿ, ನಿಮ್ಮ ಆಟವನ್ನೀಗ ಪೂರ್ತಿ ಮುಗಿಸಿ ಬಿಡಿ."

ಶೇಖರನು ಅವಳನ್ನೆಷ್ಟು ಸಮಾಧಾನಪಡಿಸಿದರೂ ಅವಳು ಸ್ವಲ್ಪವೂ ಜಗ್ಗಲಿಲ್ಲ. ಜವಳಿ ಅಂಗಡಿಗೆ ಹೋಗಿ ಬರೋಣವೆಂದು ಅವನು ಅವಳನ್ನು ಕರೆದರೂ ಕೂಡ, ಅವಳು "ಸೀರೆ ಬೇಡವೇ ಬೇಡ" ಎಂದು ಬಿಟ್ಟಳು. ಅನಿರೀಕ್ಷಿತವಾಗಿ ಅವಳೇಕೆ ಹೀಗೆ ಹಠಾತ್ತನೆ ರೇಗುತ್ತಾಳೆಂದು ಅವನು ವಿಸ್ಮಯಗೊಂಡನು. ಸೀರೆಯ ವಿಷಯವಾದ ಮಾತನ್ನೇ ತೆಗೆಯಬೇಕಾಗಿಲ್ಲವೆಂದು ಅವಳು ಅವನೊಡನೆ ನಿಷ್ಠುರವಾಗಿ ನುಡಿದು ಬಿಟ್ಟಳು. ಅಷ್ಟರ ಮೇಲೆ ಅವನಿಂದ ಏನೂ ಹೇಳಲಾಗಲಿಲ್ಲ.

ಬೆಳಿಗ್ಗೆಲ್ಲವೂ ಅವಳು ನಿರುತ್ಸಾಹದಿಂದಿದ್ದಳೇ ಹೊರತು, ಅವಳಲ್ಲಿ ಬೇರೆ ಯಾವ ಮಾರ್ಪಾಟೂ ತೋರ ಬರಲಿಲ್ಲ. ಎಂದಿನಂತೆ ಮನೆಯ ಕೆಲಸ ಕಾರ್ಯಗಳನ್ನು ಗಮನಿಸಿದಳು; ಸಿಟ್ಟುಗೊಂಡವಳಂತೆ ತೋರ್ಪಡಿಸಿಕೊಳ್ಳಲಿಲ್ಲ.

ಊಟದ ಹೊತ್ತಿನಲ್ಲಿ ಶೇಖರನು ಪುನಃ ಚಾತುರ್ಯದೊಡನೆ ಸೀರೆಯ ವಿಷಯವಾಗಿ ಮಾತೆತ್ತಿದನು. ಆದರೆ ಅವನ ಹಠಮಾರಿತನ ಆಗಲೂ ಸಹ ಅವಳನ್ನು ಬಿಟ್ಟಗಲಿದಂತೆ ತೋರಲಿಲ್ಲ.

"ನಾನು ಈ ಹೊತ್ತು ನಮ್ಮ ಕ್ಲಬ್ಬಿನ ಮೀಟಿಂಗಿಗೆ ಹೋಗುವುದಿಲ್ಲ" ಎಂದು ಅವಳು ಹೇಳಿದಳು.

"ನಿನಗೇಕೆ ನನ್ನ ಮೇಲೆ ಇಷ್ಟೊಂದು ಕೋಪ? ನಾನೇನು ಅಷ್ಟೊಂದು ದೊಡ್ಡ ತಪ್ಪು ಮಾಡಿದ್ದು? ಸೀರೆ ಕೊಂಡು ಕೊಡುವುದಿಲ್ಲವೆಂದೆನೇನು? ಇಲ್ಲವಲ್ಲಾ? ಸ್ವಲ್ಪ ತಮಾಷೆ ಮಾಡುವುದರೊಳಗಾಗಿಯೇ ಇಷ್ಟೊಂದು ಕೋಪವೇ ನಿನಗೆ?"

"ನಾನೇ ಮತ್ತು ಆವಾಗಲೇ ಅಂದೆನಲ್ಲಾ; ನಿಮ್ಮ ತಮಾಷೆ ಎಲ್ಲವನ್ನೂ ಪೂರ್ತಿ ಮುಗಿಸುವುದಕ್ಕಾಗಿಯೇ ನಿಮಗೀಗ ದಾರಿ ತೋರಿಸಿದ್ದೇನೆ."

"ಆದರೂ ಕೂಡ, ಪಾತೂ, ನಾನು ಮಾಡಿದ್ದು ತಪ್ಪೆಂದು ಒಪ್ಪಿಕೊಂಡ ಬಳಿಕ, ನನ್ನ ಮನಸ್ಸನ್ನರಿಯದೆ ಅನ್ನಬಾರದು."

"ನೀವು ಮಾತ್ರ ನನ್ನ ಮನಸ್ಸನ್ನು ಚೆನ್ನಾಗಿ ಅರಿತು ಬಿಟ್ಟಿರೇನು? ನಿಮ್ಮಿಂದಲ್ಲವೇ ನಾನು ಈ ಹೊತ್ತು ನಮ್ಮ ಮೀಟಿಂಗಿಗೆ ಹೋಗಲಾಗಲಿಲ್ಲ?"

"ಅದು ಹೇಗೆ ಕಣೇ? ನಾನೇ ಮತ್ತೆ 'ಹೋಗು, ಹೋಗು' ಎನ್ನುತ್ತಿರುವೆನಲ್ಲಾ?"

"ಓಹೋಹೋ! ಹಾಗೆಂದರೆ, ನೀವು 'ಹೋಗಬೇಡವೆಂದರೆ ನಾನು ಹೋಗಬಾರದು. ಮರುಕ್ಷಣ 'ಹೋಗು' ಎಂದರೆ, ತಕ್ಷಣ ಹೋಗಲು ತಯಾರಿರಬೇಕು. ಬಹು ಚೆನ್ನ ಇದು! ನಾನೇನೂ ಹೋಗುವುದಿಲ್ಲ! ಅದೂ ಕೂಡ ನಿಮ್ಮಿಂದಲೇ ನಾನು ಹೋಗದಿರುವುದು."

ಅಷ್ಟರ ಮೇಲೆ ಅವಳನ್ನು ಸಮಾಧಾನ ಪಡಿಸುವುದು ಕಷ್ಟವೆಂದು ಶೇಖರನು ಅರಿತನು. ಅವಳ ಮನಸ್ಸಿನಲ್ಲಿ ಯಾವತ್ತು ಇಲ್ಲದ ಈವತ್ತು ಏಕೆ ಹೀಗೆ ಅಕಸ್ಮಾತ್ತಾಗಿ ಈ ವ್ಯತ್ಯಾಸವೆಂದು ಅವನಿಗೆ ಆಶ್ಚರ್ಯವಾಯಿತು. ಅವೆಷ್ಟೆಷ್ಟು ಹೇಳಿಯೂ ಕೂಡ ಅವಳು ಕೇಳಲಿಲ್ಲ. 'ನನಗೆ ಸೀರೆಯೂ ಬೇಡ, ನಾನು ಕ್ಲಬ್ಬಿಗೂ ಹೋಗುವುದಿಲ್ಲ' ವೆಂದು ಅವಳು ಮಾತಿಗೆ ಎಡೆಯಿಲ್ಲದೆ ಹೇಳಿಬಿಟ್ಟಳು.

ಕೊನೆಗೆ ಶೇಖರನು ಆಫೀಸಿಗೆ ಹೊರಟನು. ಆಗ ಅವಳೂ ಅದೆಲ್ಲಿಗೋ ಹೊರಡಲು ತಯಾರಾಗಿ ನಿಂತಿರುವುದನ್ನು ಕಂಡನು.

"ಎಲ್ಲಿಗೆ ಹೊರಟಿರುವೆ, ಪಾತೂ?"

ಅವಳು ಉತ್ತರ ಕೊಡಲಿಲ್ಲ.

"ನಿಮ್ಮಮ್ಮನ ಮನೆಗೋ?" ಎಂದು ತನ್ನರಿವಿಲ್ಲದೆ ಸ್ವಲ್ಪ ತಮಾಷೆಯಾಗಿ ಕೇಳಿದನು ಶೇಖರ. ಮೊದಲು ತನ್ನ ವಿಷಯವಾಗಿ ಸ್ವಲ್ಪ ವ್ಯಸನಗೊಂಡರೂ ಕೂಡ, ಬಳಿಕ ಅವಳು ಅವಳ ಹಠಮಾರಿತನವನ್ನು ಕಂಡು ಕೊಂಚ ಅಸಾಮಾಧಾನಗೊಂಡಿದ್ದನು.

"ಕೊನೆಗೆ ನಿಮ್ಮಿಷ್ಟ ಹೊರ ಬಂದು ಬಿಟ್ಟಿತೇನೋ! ಆದರೆ ನಾನು ಹೋಗುವುದು ಅಲ್ಲಿಗಲ್ಲ!" ಎಂದು ಅವಳು ನೆಮ್ಮದಿಯಾಗಿ ಅಂದಳು.

"ಸ್ವಲ್ಪ ತಾಳ್ಮೆಯಿಂದಿರು ಪಾತೂ. ಹೀಗೆ ಮಾತನಾಡುವೆಯೇಕೆ?"

"ನನ್ನ ಗೆಳತಿಯ ಮನೆಗೆ ಹೊರಟಿರುವೆನು—ರಾಜಿಯ ಮನೆಗೆ."

"ಯಾವಾಗ ತಿರುಗಿ ಬರುತ್ತೀ?"

"ನನಗೇ ಗೊತ್ತಿಲ್ಲ; ಮುಕ್ಕಾಲುಪಾಲು ಹೊತ್ತಾಗಬಹುದು."

ಕ್ಷಣಕಾಲ ಶೇಖರ ಮೌನತಾಳಿದನು. ಬಳಿಕ ಪ್ರಾರಂಭಿಸಿದನು. "ಇಕೋ ನೋಡು, ಪಾತೂ, ನೀನಂತೂ ಈಗ ಹೊರ ಹೊರಡಲು ತಯಾರಾಗಿರುವೆ. ನಾವೇಕೆ ಈಗ ಹೋಗಿ ಆ ಸೀರೆಯನ್ನು ಕೊಂಡು ತರ ಕೂಡದು?"

"ಹೌದು, ಕೂಡದು. ನಾನು ನನ್ನ ಗೆಳತಿಯ ಮನೆಗೆ ಹೋಗ ಬೇಕು. ಅವಳು ಇದಿರು ನೋಡುತ್ತಲಿರುವಳು."

"ಅದೇನೂ ಅಷ್ಟೊಂದು ಅವಸರದ ಕೆಲಸವಲ್ಲವಲ್ಲ. ಅವಳೇನೂ ನಿನಗಾಗಿ ಒಂದರ್ಧ ಘಂಟೆಯ ಕಾಲ ಕಾದಿರಲಾರಳೇ? ಅದೂ ಕೂಡ, ನಿನಗೊಂದು ಸೀರೆ ಕೊಳ್ಳುವುದರ ನಿಮಿತ್ತವೆಂದರೆ?"

"ನಾನವಳನ್ನು ಕಾಯಿಸಲಾರೆನಲ್ಲಾ!"

"ಸರಿ, ಹಾಗಾದರೆ ನೀನವಳ ಮನೆಗೆ ಹೋಗು, ನಾನು ಮಾತ್ರ ಅಂಗಡಿಗೆ ಹೋಗಿ ಆ ಸೀರೆಯನ್ನು ನಿನಗಾಗಿ ಕೊಂಡು ತರುತ್ತೇನೆ."

"ಇದೇಸಿದು? ನನ್ನನ್ನು ಸುಮ್ಮನೆ ಬಿಡಲಾರಿರೇ? ಬೇಡ, ಬೇಡ, ಬೇಡವೆಂದರೂ ಕೇಳಬಾರದೇ? ಇದೇನಪ್ಪ ಕಷ್ಟವಾಗಿದೆ. ಆ ಸೀರೆಯನ್ನು ಕೊಂಡು ತಂದು ನೀವೇ ಪೂಜೆಮಾಡುವುದಾಗಿದ್ದರೆ, ಕೊಂಡು ತನ್ನಿ ಏಸೀಗ; ನನ್ನದೇನೂ ಆಕ್ಷೇಪಣೆ ಇಲ್ಲ."

ಈ ರೀತಿಯಾಗಿ, ಶೇಖರನು ಪುನಃ ಸೋತು ಹೋದನು. ಆದರೆ, ಕೊನೆಗೆ ಮತ್ತೊಂದು ಮಾರ್ಗವನ್ನವಲಂಬಿಸಬೇಕೆಂದು ತೀರ್ಮಾನಿಸಿದನು. ಅದೇನೆಂದರೆ, ಅವಳ ಹಠವನ್ನು ಪ್ರತಿಭಟಿಸದೆ ಹೊಂದಿಕೊಂಡು ಹೋಗುವುದು, ಅದೇ ಸಮಯ ಅವಳೊಡನೆ ಸಮರಸ ತೋರುವುದು.

"ಸರಿ, ನೀನು ಒಂದೇ ಹಠವಾಗಿ ಕ್ಲಬ್ಬಿಗೆ ಹೋಗುವುದಿಲ್ಲವೆಂದು ಸಾಧಿಸುವುದರಿಂದ, ನಾನು ಆ ಮಾತನ್ನು ಇಷ್ಟಕ್ಕೇ ಬಿಟ್ಟು ಬಿಟ್ಟೆನು. ಆದರೆ ಈ ಸಂಜೆ ಅದೇನನ್ನು ಮಾಡೋಣವೆನ್ನುತ್ತೀ? ಸಿನೀಮಾಗೆ ಹೋಗೋಣವೇ?"

ಅವಳು ಸ್ವಲ್ಪ ಯೋಚಿಸುತ್ತಿರುವಂತೆ ತೋರಿತು.

"ಆಫೀಸಿನಿಂದ, ಜೇಗ ಬಂದು ಬಿಡುತ್ತೇನೆ, ಏನು, ಹೋಗೋಣವೇ?"

"ಏಕೆ ಹೋಗಬೇಕು?" ಎಂದಳವಳು. ಆ ಧ್ವನಿಯಲ್ಲಿ ಶೇಖರನಿಗೆ ಸಮರಸ ಕೂಡಿಬರುವಂತೆ ತೋರಿತು.

"ಭಾಗ್ಯ ಚಕ್ರ" ಕ್ಕೆ ಎಂದನು ಶೇಖರ, ಕಾತುರತೆಯೊಡನೆ ಶೀಘ್ರವಾಗಿ.

"ಛೇ, ಛೇ! ಯಾರು ಅದಕ್ಕೆ ಹೋಗುವವರು? ನನಗೇನು ಹಿಂದಿ ತಿಳಿಯುತ್ತದೆಯೋ? ನನಗೇನು ಅದರಲ್ಲಿ ತಿಳಿಯುತ್ತೆ?"

ಅದೂ ಕೂಡ ಅನಿರೀಕ್ಷಣೆಯ ಮಾತು. ಆ ಚಿತ್ರಕ್ಕೆ ಬದಲಾಗಿ ಅವನು ಜೇರೆ ಯಾವುದನ್ನಾದರೂ ಅಂದಿರಬಾರವೆ? ಏನು ತಿಳಿಗೇಡಿತನ!

"ಸರಿ, ನಿನ್ನಿಷ್ಟದಂತೆ ಯಾವುದಕ್ಕಾದರೂ ಹೋಗೋಣ, ಸರಿಯೋ?"

"ಇದೆಲ್ಲವನ್ನೂ ನೀವು ಆಫೀಸಿನಿಂದ ಬಂದ ಮೇಲೆ ಯೋಚಿಸಿದರಾಯಿತು!"

ಕೊನೆಗೆ ಶೇಖರನು ಕೊಂಚ ನೆಮ್ಮದಿಯಾಗಿ ಆಫೀಸಿಗೆ ಹೊರಟನು. ಅವಳು ಅಷ್ಟೊಂದು ಹಠವಾದಿಯಾಗಿದ್ದರೂ, ತನ್ನಿಂದವಳು ಲೇಡೀಸ್ ಕ್ಲಬ್ಬಿನ ವರ್ಷೋತ್ಸವಕ್ಕೆ ಹೋಗಲಿಲ್ಲವಲ್ಲಾ ಎಂದು ಅವನಿಗೆ ಕೊಂಚ ಅಸಮಾಧಾನವಾಗಿತ್ತು.

೨

ಪಾರ್ವತಿ ರಾಜಿಯ ಮನೆಯ ಹಜಾರದಲ್ಲಿ ಹಾದು ಹೋದಾಗ, ಪಕ್ಕದ ಕೊಠಡಿಯಲ್ಲಿ ರಾಜಿಯ ಗಂಡನು ಮಂಚದ ಮೇಲೆ ಮಲಗಿರುವುದನ್ನು ಕಂಡಳು.

"ಎಲ್ಲಿಗೆ ಹೋದರೂ ನಮಗೆ ಶನಿಕಾಟ ತಪ್ಪಲೊಲ್ಲದಲ್ಲಾ!" ಎಂದು ಅವಳು ಅಂದು ಕೊಂಡಳು. ರಾಜಿಯೊಡನೆಯಾದರೂ ಕೊಂಚ ಕಾಲ ಸಂತೋಷವಾಗಿ ಮಾತನಾಡಿಕೊಂಡಿದ್ದು, ಎಲ್ಲವನ್ನೂ ಮರೆತಿರೋಣವೆಂದು

ಬಂದರೆ, ಇಲ್ಲಿಯೂ ಒಂದು ಸಂಕಟ. ಅವರೇಕೆ ಈ ಹೊತ್ತು ಆಫೀಸಿಗೆ ಹೋಗದೆ ಮನೆಯಲ್ಲಿ ಕುಳಿತಿದ್ದಾರೆ? ದಿನ ಪೂರ್ತಿಯೂ ನಮಗೆ ಸಿಗಲಾರದೇ ಎಂದರೆ, ಅದೂ ಕೂಡ ಇಲ್ಲ! ಎಲ್ಲಿಯೂ ನಮ್ಮ ದುರದೃಷ್ಟವೇ ಕಾದು ನಿಂತಿವೆ!''

ಈರ್ವರೂ ಗೆಳತಿಯರ ಕುಶಲ ಪ್ರಶ್ನೆಗಳೂ ಮುಗಿದ ಬಳಿಕ, ರಾಜಿ ಪಾರ್ವತಿಗೆ ಮೊಟ್ಟಮೊದಲು ತಿಳಿಸಿದುದು ತನ್ನ ಪತಿಯ ವಿಷಯವಾಗಿಯೇ. ಅವರು ಕೆಲ ದಿನಗಳಿಂದ ಖಾಯಿಲೆಯಿಂದ ನರಳುತ್ತಿರುವರೆಂದೂ, ಮುಂಚೆ ಅವರ ದೇಹ ಸ್ಥಿತಿಯು ಅಪಾಯವಾಗಿದ್ದು ಬಳಿಕ ದೈವಕೃಪೆಯಿಂದ ಮೆಲ್ಲ ಮೆಲ್ಲನೆ ಗುಣ ಮುಖಹೊಂದಿ, ತತ್ಸಮಯ ಹುಷಾರಾಗುತ್ತಿರುವರೆಂದೂ ಪಾರ್ವತಿಗೆ ತಿಳಿಸಿದಳು.

ಇಷ್ಟರ ಮೇಲೆ, ಅವಳಿಗೆ ಜಿಗುಪ್ಸೆಯುಂಟುಮಾಡುವಂತಹ ಮತ್ತೊಂದು ವಿಷಯ ಪಾರ್ವತಿಯನ್ನು ಪೀಡಿಸಿತು. ಅಂದರೆ ರಾಜಿಯ ಅತ್ತೆಯವರ ಸ್ವಾರಸ್ಯ ರಹಿತವಾದ ಆದರೆ ಶಬ್ದದಿಂದೊಡಗೂಡಿದ ಕೊನೆ ಮೊದಲಿಲ್ಲದ ಅಡುಗೂಲಜ್ಜಿಯ ಮಾತು. ವಯೋಧಿಕಳಂತೂ ಹೌದು, ಆದರೆ ಅವಳ ಮಾತಿನಿಂದ ಅನುಮಾನಿಸಿದಲ್ಲಿ ಅವಳು ಅದಕ್ಕೂ ಅಧಿಕಸಾದ ಮುಪ್ಪುಹೊಂದಿರುವಳೆನ್ನಬಹುದು ; ಹಾಗೆಂದರೆ ತಿಳಿವಳಿಕೆಯೇ ಮಂಕಾಗುವಷ್ಟು ಮುಪ್ಪು ಹೊಂದಿರಬೇಕು.

"ನನಗೆ ಗೊತ್ತುಂಟಲ್ಲಾ— ಆ ಹುಡುಗನ ಜ್ವರವಂತೂ ಒಂದು ದೆವ್ವದ ಕೆಲಸವೆಂದು. ಆದರೆ ನಾನು ಹೇಳುವುದನ್ನು ಕೇಳುವರು ಯಾರು?" ಎಂದು ತನ್ನ ತಲೆಯನ್ನಲ್ಲಾಡಿಸಿಕೊಂಡೂ, ಮುಖ ಸಿಂಡರಿಸಿಕೊಂಡೂ, ಪ್ರಸಂಗ ಮಾಡಲಾರಂಭಿಸಿ ಬಿಟ್ಟಳು ಆ ಮುಂದರೆ.

"ಇದೇಕೆ ಹೀಗೆ ಮುಖ ವಕ್ರಮಾಡಿಕೊಳ್ಳಬೇಕೋ ಕಾಣೆ!" ಎಂದೆಂದುಕೊಂಡಳು ಪಾರ್ವತಿ.

"ಈಗಲೂ ಸಹ ಮಲೆಯಾಳ ಸೀಮೆಯಲ್ಲಿ ಹೇಳುತ್ತಾರೆ—"ಕುಟ್ಟಿ ಚಾತಾ" ನೆಂದೂ, "ಸಂಗಿಲಿ ಕರುಪ್ಪ" ನೆಂದೂ ಅವರುಗಳಿಗೆ ಇದರ ವಿಷಯ ಬಹಳ ತಿಳಿದಿದೆ. ಇಲ್ಲಿ ನಗರದಲ್ಲಿ ಔಷಧಿ, ಔಷಧಿ, ಔಷಧಿ ಎಂದು ಪ್ರಾಣಬಿಡುತ್ತಾರೆ. ಔಷಧಿ ಕುಡಿದು ಬಾಳುತ್ತಾರಲ್ಲಾ ಇವರು!

ಮಂತ್ರಿಸಬೇಕೆಂದರೆ ಯಾರು ಕೇಳುತ್ತಾರೆ? ನಾನೇ ಮತ್ತೆ ಮುಂಚಿನಿಂದಲೂ "ಈ ಜ್ವರ ಪಿಶಾಚಿಯಿಂದಲೇ ಬಂದಿದೆ" ಎಂದು ಹೇಳುತ್ತಿರುವೆನಲ್ಲಾ."

"ನಿನ್ನನ್ನು ಸಹ ಪಿಶಾಚಿ ಹಿಡಿದು ಬಿಟ್ಟಿದೆಯೇನು?" ಎಂದು ಅವಳನ್ನು ಕುರಿತು ತನ್ನೊಳಗೆ ಪ್ರಶ್ನಿಸಿಕೊಂಡಳು ಪಾರ್ವತಿ; "ಯಾಕೆ ಹೀಗೆ ಪಿಶಾಚಿಯಂತೆ ಸುಮ್ಮನೆ ಕೂಗಾಡುತ್ತೀಯೆ?" ಎಂದಂದುಕೊಂಡಳು ಪಾರ್ವತಿ (ತನ್ನೊಳಗೆ)

"ಅದೇ ಮತ್ತೆ ನಾನು ಹೇಳಿದೆನಲ್ಲಾ—ಇಲ್ಲಿ ಯಾರೊಬ್ಬರಿಗೂ ಔಷಧಿ ವಿನಃ ಬೇರೆ ಯಾವುದೂ ತಿಳಿಯದು. ಔಷಧಿ, ಔಷಧಿ, ಔಷಧಿ............ಅಷ್ಟೇ! ಇಲ್ಲಿ............ಭಗವಂತಾ, ವೆಂಕಟಾಚಲಪತಿ! ಒಳ್ಳೆಯ ಕಾಲಕ್ಕೆ ನಾನು ಈ ಹುಡುಗನ ಖಾಯಿಲೆಯ ಸಮಯಕ್ಕೆ ಇಲ್ಲಿಗೆ ಬಂದು ಸೇರಿದೆನಲ್ಲಾ!"

"ಅದೇಕೆ ಅಪ್ಪಾ, 'ಸಂಗಿಲಿ ಕರುಪ್ಪಾ' ಎಂದು ಕರೆಯಬಾರದು?" ಎಂದಂದುಕೊಂಡಳು ಪಾರ್ವತಿ.

"ನಾನಿಲ್ಲಿ ಇಲ್ಲದೆ ಹೋಗಿದ್ದರೆ, ಆ ಹುಡುಗನಿಗೆ ಏನಾಗುತ್ತಿತ್ತೋ ಕಾಣೆ?............ಕಂಡವರಾರು? ಪಿಶಾಚಿಯಂತೆ ಹಿಡಿದುಕೊಂಡು ಬಿಟ್ಟಿತಲ್ಲಾ ಜ್ವರ, ಅದು ಅವನನ್ನು ಹಾಗೇ ತಿಂದು ಬಿಡುತ್ತಿತ್ತಲಾ!"

"ಹಾಗೆ ಆಗದಂತೆ ಇರಲು ನೀವೇನು ಮಾಡಿದಿರಿ?" ಎಂದು ತನ್ನರಿವಿಲ್ಲದೆ ಸ್ವಲ್ಪ ದುಡುಕಿ ಅಂದು ಬಿಟ್ಟಳು ಪಾರ್ವತಿ.

"ಏನೇ? ಅದೇ ಮತ್ತೆ, ರಾಜಿಯನ್ನು ಪ್ರತಿನಿತ್ಯವೂ ಗುಡಿಗೆ ಕಳುಹಿಸುತ್ತೇನಲ್ಲಾ! ಇದೇನು ಪ್ರಶ್ನೆಯೋ ನಿನ್ನದು? ರಾಜಿಯೇ ಸಂಜೆ ಬೆಳಿಗ್ಗೆ ಎರಡು ಹೊತ್ತೂ ಗುಡಿಗೆ ಹೋಗಿ ಬರುತ್ತಾಳಲ್ಲಾ!"

ಈಗ ಪಾರ್ವತಿಯು ಮೌನವನ್ನವಲಂಬಿಸಿದಳು.

"ಅಂತೂ, ಈ ಕಾಲದಲ್ಲಿ, ಚಿಕ್ಕ ಪುಟ್ಟವರಿಗೆಲ್ಲಾ ಮಾನ ಮರ್ಯಾದೆಯೆಂಬುದೇ ಇಲ್ಲ. ಇಷ್ಟೂ, ಅಷ್ಟರಿಂದ, ನಿನ್ನೆ ಹುಟ್ಟಿದ ಮಗುವಿನವರೆಗೆ, ಎಲ್ಲರೂ ಹೀಗೆ ಮಾತನಾಡಲಾರಂಭಿಸಿಬಿಟ್ಟರೆ!"

"ಅದಿರಲಿ" ಎಂದು ಪಾರ್ವತಿಯು ಚಾತುರ್ಯದೊಡನೆ ಮುದುಕಿಯ ಮಾತನ್ನು ಕಿವಿಗೆ ಹಾಕಿಕೊಳ್ಳದೆ ನುಡಿ ಅಂದಳು. "ಪಿಶಾಚಿಯನ್ನು ಓಡಿಸಲು ಮಂತ್ರವಾದಿಯನ್ನಲ್ಲವೇ ಕರೆಯಬೇಕು? ಮಲೆಯಾಳದಲ್ಲಿ ಹಾಗಲ್ಲವೇ ಮಾಡುವರು? ನೀವು ಹಾಗೆ ಮಾಡದೆ, ಪಿಶಾಚಿಯನ್ನು ಓಡಿಸಲು, ಗುಡಿಯ ದೇವರನ್ನು ಕರೆದರೆ ಅವೇನು ಮಾಡಬಲ್ಲುದು?"

"ಏನು!" ಎಂದು ಆ ಮುದುಕಿಯು ಆಶೀರ್ವಚನವನ್ನು ನುಡಿದು, ಅವಳೇ ಸ್ವಂತವಾಗಿ ಸೃಷ್ಟಿಸಿಕೊಂಡ ಅದ್ಯಾವುದೋ ಒಂದು ಪಿಶಾಚಿಯಿಂದ ಆಡಿಸಲ್ಪಟ್ಟವಳಂತೆ ನಿಟ್ಟುಸುರು ಬಿಡಲಾಗಿ, ಅವಳ ಬತ್ತಿಹೋಗಿದ್ದ ಮುಖದಲ್ಲಿ ಇನ್ನೂ ಹಲವು ಗೆರೆಗಳು ತೋರಲಾಗಿ, ಅವಳು ವಿಚಿತ್ರವಾದೊಂದು ಮುಪ್ಪಿನ ದೃಶ್ಯವನ್ನಿತ್ತಳು.

ಒಳ್ಳೆಯ ಕಾಲಕ್ಕೆ ಅವಳ ಮಾತು ಕಡಿಮೆಯಾಗಲಾರಂಭಿಸಿತು. ಆದರೂ ಕೂಡ ಅವಳೊಡನಿರುವುದೇ ಪಾರ್ವತಿಗೆ ಮುಳ್ಳಿನಮೇಲಿರುವಂತಿತ್ತು. ಆದ್ದರಿಂದ ಕೊನೆಗೆ ಸಂಜೆ ನಾಲ್ಕು ಘಂಟೆಗೆ ರಾಜಿಯೊಡನೆ ಮನೆಯಿಂದ ಗುಡಿಗೆ ಹೊರಟಾಗ ಪಾರ್ವತಿಗೆ ಸ್ವಲ್ಪ ಮನಶ್ಯಾಂತಿ ತೋರಿತು.

"ರಾಜೀ, ನಿನ್ನ ಗಂಡನಿಗಾಗಿ ನೀನೆ ಪ್ರಾರ್ಥಿಸಿಕೊಳ್ಳುವುದು ಉತ್ತಮ. ನಿನ್ನ ಅತ್ತೆಯಂತಹವಳೊಬ್ಬಳು ಇದನ್ನು ಮಾಡದಿರುವುದೇ ಉತ್ತಮ" ಎಂದಳು ಪಾರ್ವತಿ, ಅವರಿಬ್ಬರೂ ಮನೆಯಿಂದ ಹೊರ ಹೊರಟಾಗ,

ಇದರ ಬಳಿಕ, ಗುಡಿಗೆ ಹೋಗುವ ದಾರಿಯಲ್ಲಿ, ಗೆಳತಿಯರಿಬ್ಬರೂ ಏನೊಂದೂ ಮಾತನಾಡಲಿಲ್ಲ ಏಕೆಂದರೆ ಪಾರ್ವತಿಯು ಚಿಂತಾಮಗ್ನಳಾಗಿದ್ದಳು.

ಆಗ ನಾಲ್ಕು ಘಂಟೆ ಹೊಡೆದು ಬಿಟ್ಟಿತು. ಅವಳ ಪತಿಯು ಮನೆಗೆ ಹಿಂದಿರುಗಿ ಬಂದು ಬಿಟ್ಟಿರಬಹುದು. ಅವಳನ್ನು ಕಾಣದೆ ಅವಳಿಗಾಗಿ ಕಾಯುತ್ತಿರಬಹುದು. ಆದರವಳಿಗೆ ಮನೆಗೆ ಹಿಂದಿರುಗಲು ಇಷ್ಟವಿಲ್ಲ. ಹೋದರೆ, ಅವರು ಹಳೆಯ ಕತೆಯನ್ನು ಪ್ರಾರಂಭಿಸಿಬಿಡುವರು. ಅವಳು

ಕ್ಲಬ್ಬಿಗಾಗಲೀ ಸಿನೀಮಾಗಾಗಲೀ ಹೋಗಬೇಕಾಗಿ ಬರುವುದು. ಅವಳ ಇಷ್ಟದಂತೆಯೇ ಅವಳು ನಡೆಯುವುದು ಸಾಧ್ಯವೆಂಬುದೇನೋ ನಿಜ ಆದರವಳು ತನ್ನ ಮನಸ್ಸಿನ ಮೆದುವನ್ನರಿತಿದ್ದಳು. ಯಜಮಾನರ ಪ್ರೀತಿ ಯುತ ಮಾತುಗಳನ್ನು ಅವಳಿಂದ ಬಹುಕಾಲ ನಿರ್ಲಕ್ಷಿಸಲು ಸಾಧ್ಯವಿಲ್ಲ; ಕೊನೆಗೆ ಅವರಿಷ್ಟದಂತೆಯೇ ನಡೆಯಬೇಕಾಗಿ ಬರುವುದು.

ಆದರವಳು ವಿಷಯವನ್ನು ಹೀಗೆ ಮುಗಿಸಲು ಬಯಸಲಿಲ್ಲ. ಅವ ರನ್ನು ಅವರ ಅಸಡ್ಡೆಗಾಗಿ ದಂಡಿಸಿಯೇ ತೀರಬೇಕೆಂದು ತೀರ್ಮಾನಿಸಿ ಕೊಂಡಳು. ಆದ್ದರಿಂದ ತನ್ನ ಕ್ಲಬ್ಬಿನ ವರ್ಷೋತ್ಸವಕ್ಕೆ ಹೋಗದೇ ಇರುವುದೇ ಅವರಿಗೆ ತಕ್ಕ ದಂಡನೆಯೆಂಬುದಾಗಿ ತೀರ್ಮಾನಿಸಿಕೊಂಡಳು ತಾನು ಹೋಗದಿದ್ದರೆ ಅದನ್ನು ಅವರೆಂದಿಗೂ ಮರೆಯಲಾರರೆಂದು ಅರಿತಿ ದ್ದಳು. ಈ ಕಾರಣದಿಂದ, ತನ್ನ ಮನೆಗೆ ಈಗ ಹಿಂದಿರುಗಬಾರದೆಂದು ಖಂಡಿತವಾಗಿ ತೀರ್ಮಾನಿಸಿಕೊಂಡಳು.

ಗುಡಿಗೆ ಹೋಗುವ ದಾರಿಯಲ್ಲಿ, ಗೆಳತಿಯರು 'ರಸಿಕ ರಂಜನಿ ಸಭೆ' ಯನ್ನು ದಾಟಿ ಹೋಗಬೇಕಾಗಿತ್ತು. ಅಲ್ಲಿ ಅಂಟಿಸಿದ್ದ ನೋಟೀಸೊಂದನ್ನು ಪಾರ್ವತಿ ನೋಡಿದಳು. ಅಂದು ಸಂಜೆ ನಟರಾಜಭಾಗವತರು "ಉತ್ತರ ರಾಮ ಚರಿತ್ರೆ"ಯ ಕಾಲಕ್ಷೇಪವನ್ನು ನಡೆಸುತ್ತಾರೆ ಎಂದವಳು ಓದಿದಳು.

ಅಷ್ಟರ ಮೇಲೆ ಈ ವರ್ತಮಾನವು ಅವಳ ಹೃದಯದೊಳಗಿನ ಅಲೆಗ ಳೊಡನೆ ಸೂಕ್ಷ್ಮವಾಗಿ ಕಲೆತು ಬಡಿಯಲಾರಂಭಿಸಿತು. ಮನೆಗೆ ಹಿಂದಿರುಗ ಬಾರದೆಂದು ಯೋಚಿಸಿದ್ದ ಆ ಸಂಧ್ಯಾಕಾಲವನ್ನು ಹರಿಕಥೆ ಕೇಳುವುದರಲ್ಲಿ ಒಂದು ರೀತಿಯಾಗಿ ಕಾಲ ಕಳೆದು ಬಿಟ್ಟರೇನೀಗ ಎಂದವಳು ಚಿಂತಿಸ ಲಾರಂಭಿಸಿದಳು. ಆದರವಳಿಂದ ಬೇಗನೆ ಒಂದು ತೀರ್ಮಾನಕ್ಕೆ ಬರ ಲಾಗಲಿಲ್ಲ. ಆಲೋಚಿಸುತ್ತ ಆಲೋಚಿಸುತ್ತಲೇ, ಅವರಿಬ್ಬರೂ ಗುಡಿಗೆ ಹೋಗಿಬಂದು ಪುನಃ ರಾಜಿಯ ಮನೆಯನ್ನು ಸಮೀಪಿಸಿಯೇ ಬಿಟ್ಟರು. ಅದೇ ತಾನೇ ಪಾರ್ವತಿಯು ತನ್ನ ಆಲೋಚನೆಯನ್ನು ರಾಜಿಗೆ ತಿಳಿಸಿ, ಅವಳನ್ನು ತನ್ನೊಡನೆ ಹರಿಕಥೆಗೆ ಬರುವಂತೆ ಕರೆದಳು.

"ಅವರಿಗೆ ಮೈ ಸರಿಯಾಗಿಲ್ಲವಲ್ಲಾ," ಎಂದು ಹಿಂಜರಿಯುತ್ತಾ ಕ್ಷಮಾಪಣೆ ಬೇಡುವ ಬಗೆಯಲ್ಲಿ ನುಡಿದಳು ರಾಜಿ.

"ಇದ್ದರೇನೀಗ? ಅವರಮ್ಮ ಮನೆಯಲ್ಲೇ ಇರುವಳಲ್ಲಾ!"

"ಅವಳಿದ್ದರೆ—ನನ್ನ ವಿಷಯ?"

"ಅರೆರೇ! ನೀನೇ ಮತ್ತೆ ಗುಡಿಗೆ ಹೋಗಿ ಪ್ರಾರ್ಥನೆಮಾಡಿದೆಯಲ್ಲಾ, ಅದು ಸಾಲದೇ? ನಾನು ಹೇಳುವುದನ್ನು ಕೇಳು. ನಿನ್ನ ಪ್ರಾರ್ಥನೆಯ ಮಹಿಮೆಯನ್ನು ನಾ ಬಲ್ಲೆ. ಅದು ಮಾತ್ರವೇ ಜ್ವರವನ್ನು ವಾಸಿಮಾಡಬಲ್ಲುದು. ಸಭೆ ಗುಡಿಗೆ ಬಹಳ ಸಮೀಪದಲ್ಲಿರುವುದಲ್ಲ, ನಿನಗೆ ಗೊತ್ತಿಲ್ಲವೇ? ಬಾ, ಹೋಗೋಣ!"

ಆದರೆ ರಾಜಿ ಮಾತ್ರ ಶೀಘ್ರವಾಗಿ ಯಾವ ಬಗೆಯ ಉತ್ತರವನ್ನೂ ಕೊಡಲಿಲ್ಲ. ಅಷ್ಟರೊಳಗಾಗಿ ಅವರಿಬ್ಬರೂ ರಾಜಿಯ ಮನೆಯನ್ನು ತಲುಪಲು, ಅಲ್ಲಿ ಪಾರ್ವತಿಯ ಮನೆಯ ಸೇವಕನು ಅವರುಗಳಿಗಾಗಿ ಕಾದು ನಿಂತಿರುವುದನ್ನು ಕಂಡರು.

"ಯಜಮಾನರು ಆಫೀಸಿನಿಂದ ಬೇಗ ಮನೆಗೆ ಬಂದು ಬಿಟ್ಟರು." ಎಂದನು ಆ ಹುಡುಗ, "ಅವರಿಗೆ ಮೈ ಉಷಾರಿಲ್ಲವಂತೆ. ನಿಮ್ಮನ್ನು ಕರೆತರ ಹೇಳಿದರು."

ಪಾರ್ವತಿಯು ಸ್ವಲ್ಪ ತಾಮಸ ಮಾಡಿದಳು.

"ಏನೇ ಪಾರ್ವತಿ, ಯೋಚಿಸುತ್ತಲಿರುವೆ?" ಎಂದಳು ರಾಜಿ, "ಕತೆಕೇಳುವುದಂತೂ ಹೀಗಾಯಿತು. ನಿನ್ನ ಮಾತನ್ನು ಮೀರಿ ನಡೆಯಲು ನನಗೆ ಆಗ ಶ್ರಮವಾಗಿತ್ತು. ಈಗ ಈ ವರ್ತಮಾನ ವಿಷಯವನ್ನು ತೀರ್ಮಾನಕ್ಕೆ ತಂದು ಬಿಟ್ಟಿತು."

ಪಾರ್ವತಿಗೆ ತನ್ನ ಸ್ವಾಭಾವಿಕ ಜ್ಞಾನದಿಂದಲೇ ವಿಷಯದ ನಿಜಾಂಶವು ತಟ್ಟನೆ ಹೊಳೆಯಿತು. ತನ್ನ ಪತಿಗೆ ಖಾಯಿಲೆಗೀಯಲೆ ಏನೂ ಇಲ್ಲ. ತನ್ನನ್ನು ಮೋಸಗೊಳಿಸುವುದಕ್ಕಾಗಿಯೇ ಈ ಉಪಾಯ ಮಾಡಿದ್ದಾರೆ. ಹಿಂದಿರುಗಿ ಹೋದೊಡನೆಯೇ ಹಳೆಯ ಕತೆಯನ್ನು ಪ್ರಾರಂಭಿಸಿಬಿಡುವರು; ಅಥವಾ ಸಿನೀಮಾಗೆ ಬರುವಂತೆ ಕರೆಯುವರು. ಅವಳ ಮನಸ್ಸು ಬೇಗ ಬೇಗನೆ ಕೆಲಸಮಾಡಲಾರಂಭಿಸಿತು. ನಡೆದ ವಿಷಯಗಳೆಲ್ಲವನ್ನೂ ಅವಳು ತನ್ನ ಮನಗನ್ನಡಿಯ ಮುಂದೆ ತಂದಿರಿಸಿದಳು. ತನ್ನ ಪತಿಯು ಮನೆಗೆ ಬಂದಿರುವರು. ತಾನು ಮನೆಯಲ್ಲಿರುವುದನ್ನು

ಕಂಡು ಆಶ್ಚರ್ಯಹೊಂದಿರಬಹುದು, ತನ್ನ ಆಗಮನವನ್ನು ನಿರೀಕ್ಷಿಸುತ್ತ ಲಿರಬಹುದು. ಎಷ್ಟು ಹೊತ್ತಾಗಿಯೂ ಕೂಡ ತಾನು ಬಾರದಿರುವು ದನ್ನು ಕಂಡು ಈ ಉಪಾಯವನ್ನು ಮಾಡಿರಬೇಕು. ಆದರೆ ತಾನು ಸುಲಭವಾಗಿ ಮೋಸಹೋಗುವವಳಲ್ಲ. ತಾನು ಮನೆಗೆ ಹೋಗುವುದೇ ಇಲ್ಲ. ಹೋದರೆ ತಾನು ಕ್ಲಬ್ಬಿಗಾಗಲೀ, ಸಿನೀಮಾಗಾಗಲೀ ಹೋಗ ಬೇಕಾಗಿ ಬರುವುದು. ಅವಳು ಹಾಗೆ ಹೋಗಲು ಇಷ್ಟಪಡಲಿಲ್ಲ. ಆದ್ದರಿಂದ ಮನೆಗೆ ಹೋಗದೇ ಇದ್ದು ಬಿಡುವುದು.

"ಏನು ಪಾರ್ವತಿ, ಏನೋ ಯೋಚಿಸುತ್ತಲಿರುವೆಯಲ್ಲಾ ?" ಎಂದು ಕೇಳಿದಳು ರಾಜಿ.

ಪಾರ್ವತಿಯು ಗಂಭೀರವಾಗಿ ಮುಖವೆತ್ತಿ ರಾಜಿಯ ಕಡೆಗೆ ತಿರು ಗಿದಳು.

"ಸರಿ, ನೀನೇನು ಹೇಳುವೆ ?" ಎಂದು ತನ್ನ ಗೆಳತಿಯನ್ನು ಕೇಳಿ ದಳು.

"ಹೇಳುವುದೇನಿದೆ ?"

"ಅದನ್ನು ಕುರಿತಲ್ಲ, ಹರಿಕಥೆಗೆ ನೀನು ಬರುವುದನ್ನು ಕುರಿತು" ರಾಜಿಯ ಮುಖದಲ್ಲಿ ಆಶ್ಚರ್ಯಚಿಹ್ನೆ ಪಸರಿಸಿತು.

"ಇದೇನಿದು, ನಿನಗೇನಾಗಿದೆ ?"

"ಏನೂ ಆಗಿಲ್ಲ, ನೀನು ನನ್ನೊಡನೆ ಕಾಲಕ್ಷೇಪಕ್ಕೆ ಬರುವೆಯಾ ಎಂದು ಕೇಳಿದ್ದೆನಷ್ಟೆ."

"ಇದೇನಿದು, ನಿನ್ನ ಬುದ್ಧಿಭ್ರಮೆ ? ನನಗೇನೊಂದೂ ಅರ್ಥವಾಗ ಲಿಲ್ಲವಲ್ಲಾ !"

"ರಾಜೀ, ನಿನ್ನಲ್ಲಿ ಮರೆಮಾಚುವುದೇಕೆ ? ಎಲ್ಲವನ್ನೂ ನಿನಗಾ ಮೇಲೆ ಹೇಳುತ್ತೇನೆ. ಈಗಂತೂ ದಯವಿಟ್ಟು ಏನೊಂದು ಪ್ರಶ್ನಿಸದೆ, ನನ್ನೊಡನೆ ಹರಿಕಥೆಗೆ ಬಾ" ಎಂದು ಅಂಗಲಾಚಿ ಬೇಡಿದಳು ಪಾರ್ವತಿ.

"ಅಂದರೆ ಸೇವಕನೊಡನೆ ಏನು ಹೇಳುವೆ ?"

"ಅವನು ಮನೆಗೆ ಹೋಗಿ, ಡಾಕ್ಟರನ್ನು ಕರೆಯುವುದು ಅವಶ್ಯ ಕವೋ ಇಲ್ಲವೋ ಎಂದು ನೋಡಲಿ."

"ನಿನಗೇಕೆ ಹಠಾತ್ತನೆ ಈ ರೀತಿಯಾಗಿ ಬುದ್ಧಿ ಭ್ರಮಿಸಿ ಹೋಗಿದೆ? ನಾನು ಹೇಳುವಂತೆ ಕೇಳು. ನೀನು ನಿನ್ನ ಮನೆಗೆ ಹೋಗಬೇಕು. ಹಿಂಜರಿಯದೆ ಹೇಳಿ ಬಿಡುತ್ತೇನೆ............ನಿನ್ನೊಡನೆ ನಾನು ಹರಿಕಥೆಗೆ ಬರಲಾರೆ. ನಾನು ಬರುವೆನೆಂದು ಹೇಳಿದರೆ, ನಿನ್ನ ಯಜಮಾನರ ಹತ್ತಿರದಿಂದ ನಿನ್ನನ್ನು ಅಗಲಿಸಿದಂತಾಗುವುದು. ಅದೇಕೆಂದರೆ, ನಾನು ನಿನ್ನೊಡನೆ ಬಾರದಿದ್ದರೆ, ನೀನು ಮನೆಗೆ ಹೋಗುವೆಯಲ್ಲವೇ ?"

"ಹಾಗೋ ನಾನು ನಿನಗಾಗಿ ಹರಿಕಥೆಗೆ ಹೋಗುವುದಿಲ್ಲ. ನನಗಾಗಿ ಹೋಗುತ್ತೇನೆ. ಸರಿ, ಕೊಂಚ ತಾಳು............ಲೋ ಹುಡುಗಾ, ಕೂಡಲೇ ಮನೆಗೆ ಹೋಗಿ, ಡಾಕ್ಟರನ್ನು ಕರೆಯಬೇಕೇ ಎಂದು ರಾಯರನ್ನು ಕೇಳು, ಹೋಗು ಬೇಗ" ಎಂದು ಹೇಳಿ ತನ್ನ ಸೇವಕನನ್ನು ಕಳುಹಿಸಿಬಿಟ್ಟಳು. ಪಾರ್ವತಿ ಅವನು ಐವತ್ತಡಿ ದೂರ ಹೋದ ಬಳಿಕ, ಅವಳು ರಾಜಿಯ ಕಡೆಗೆ ತಿರುಗಿದಳು.

"ಈಗ ನಿನಗೆ ಸಂಶಯವೇನೂ ಇಲ್ಲವಲ್ಲ ? ನಾನು ಹರಿಕಥೆಗೆ ಹೋಗುವುದು ನನಗಾಗಿಯೇ ಎಂಬುದು ನಿಶ್ಚಯವಾಯಿತೇ ? ಇದರಿಂದ ನೀನು, ನಿನ್ನ ಮೇಲೆ ಅಪವಾದ ಬಂದೀತೆಂದು ಹೆದರಬೇಕಾಗಿಲ್ಲವಲ್ಲಾ! ಸರಿ, ಈಗೇನು ಹೇಳುವೆ ? ಹರಿಕಥೆಗೆ ಹೋಗೋಣವೇ ? ಸರಿಯೇ ?"

"ಏನಿದು, ಪಾರ್ವತಿ ? ನೀನು ಮಾಡುವುದೆಲ್ಲವೂ ವಿಚಿತ್ರವಾಗಿದೆಯಲ್ಲಾ................ಸರಿ, ಒಂದು ನಿಬಂಧನೆಯ ಮೇರೆಗೆ ನಿನ್ನೊಡನೆ ಬರುವೆನು. ಅದೇನೆಂದರೆ, ನೀನು ಈ ರೀತಿ ವಕ್ರವಾಗಿ ನಡೆಯಲು ಕಾರಣವೇನೆಂಬುದನ್ನು ನನಗೆ ಹೇಳಬೇಕು."

"ಆಗಲಿ ! ನಿನಗೆ ಹೇಳದೆಯೇನು ? ಆದರೆ ಅದೆಲ್ಲವೂ ಆ ಮೇಲೆ" ಪಾರ್ವತಿ ನಕ್ಕಳು.

ಅವಳ ಕಣ್ಣುಗಳಲ್ಲಿ ಕಣ್ಣೀರು ತುಳುಕಿತು. "ಈಗ ಹರಿಕಥೆಗೆ ಹೋಗೋಣವಂತೆ ಬಾ. ಬಳಿಕ ಎಲ್ಲ ಮಾತನಾಡೋಣ."

ಈ ರೀತಿಯಾಗಿ ಈರ್ವರೂ ಹರಿಕಥೆಗೆ ಹೋದರು. ಸಭೆಯಲ್ಲಿ ಭಾಗವತರು ಭವಭೂತಿ ನಾಟಕದಲ್ಲೂ ಕಾಳಿದಾಸ ಕಾವ್ಯದಲ್ಲೂ ಇರುವ ಶೋಕರಸವನ್ನು ವಿವರಿಸುತ್ತಲಿದ್ದರು.

ಹರಿಕಥೆಯ ನಡುವೆ ಪಾರ್ವತಿ ತಟ್ಟನೆ ಎದ್ದಳು.

“ಬಾ, ರಾಜೀ, ಮನೆಗೆ ಹೋಗೋಣ” ಎಂದಳವಳು.

ರಾಜಿ ವಿಸ್ಮಯಗೊಂಡು, ಏನೊಂದೂ ಅರಿಯದವಳಾಗಿ, ಪಾರ್ವತಿಯನ್ನು ಹಿಂಬಾಲಿಸಿದಳು.

ರಾಜಿಯನ್ನು ಅವಳ ಮನೆಗೆ ಕರೆತಂದು ಬಿಡುವಾಗ, “ರಾಜೀ ಕೊಂಚ ತಾಳು, ನಾಳೆ ಎಲ್ಲವನ್ನೂ ಹೇಳುವೆನು.” ಎಂದು ಹೇಳಿ ಅವಳಿಂದ ಉತ್ತರ ಪಡೆದು, ತನ್ನ ಮನೆಯ ಕಡೆಗೆ ಬೇಗ ಬೇಗ ಹೆಜ್ಜೆ ಹಾಕಲಾರಂಭಿಸಿದಳು.

ಆಗ ಆ ಸ್ತ್ರೀ ಹೃದಯದಲ್ಲಿ ಹಲಕೆಲವು ಯೋಚನಾ ತರಂಗಗಳು ಉದ್ಭವಿಸಿದವು.

ಅವಳ ಪತಿಗೆ ನಿಜವಾಗಿಯೂ ಜ್ವರ ಬಂದಿದ್ದರೆ? ಹಾಗಿರಲಾರದೆಂದು ಅವಳು ಅರಿತಿದ್ದಳು. ಆದರೂ ಕೂಡ? ಮನೆಯಲ್ಲಿ ಅವರ ಸಮೀಪದಲ್ಲಿ ಯಾರೂ ಇಲ್ಲವಲ್ಲಾ? ಅವಳೂ ಹೀಗೆ ಹೊರಗೆ ಇದ್ದು ಬಿಟ್ಟರೆ?

ರಾಜಿಯ ಮನೆಯಲ್ಲಾದರೋ ಅವಳ ಅತ್ತೆ ಇರುವರು. ತನ್ನ ಮನೆಯಲ್ಲೋ?—ತಾನೊಬ್ಬಳೇ ಅಲ್ಲವೇ? ರಾಜಿಯನ್ನು ನೋಡು! ಅವಳಿಗೆ ಎಂತಹ ಮೃದು ಹೃದಯ! ಕೊನೆಗೆ ಪಾರ್ವತಿಯ ಹೃದಯವೂ ಹೀಗೆ ಮೃದುವಾಗಿ ಬಿಟ್ಟಿತು.

ಅಂದು ಆ ಸಭೆಯಲ್ಲಿ ಜರುಗಿದ ಹರಿಕಥೆಯು ಉತ್ತರ ರಾಮ ಚರಿತ್ರೆಯಾಗಿಲ್ಲದಿದ್ದರೂ ಕೂಡ, ಅವಳು ಈಗ ನಡೆದಂತೆಯೇ ನಡೆದಿರುವಳು, ಸಂಶಯವೇನೂ ಇಲ್ಲ. ಆದರೂ ಕೂಡ ಭಾಗವತರು ಅವಳ ಜ್ಞಾನದೃಷ್ಟಿಯ ಇದಿರಿಗೆ ತಂದು ನಿಲ್ಲಿಸಿದ ಸೀತೆ ಅವಳನ್ನು ತನ್ನ ಪ್ರೇಮದ ಮೂಲಕ ಆಕರ್ಷಿಸಿದಳು. ಪ್ರೇಮ ಸ್ವರೂಪವಲ್ಲವೇ ಆ ಸೀತೆ! ರಾಮನು ಅವಳನ್ನು ನಿಷ್ಕಾರಣದೊಡನೆ, ಆಲೋಚನೆ ಇಲ್ಲದೆ, ಗರ್ಭವತಿಯಾದವಳನ್ನು, ಕಾಡಿಗೆ ಅಟ್ಟಿಯೂ ಕೂಡ ಅವನನ್ನವಳು ಪ್ರೀತಿಸಿದಳು! ಅವಳು! ಅವಳ ಮುಂದೆ, ಅವಳ ಕಥೆಯನ್ನು ಕೇಳುವ ತಾನು, ಚಪಲೆಯಾದ ಒಬ್ಬ ನರ ಮನುಷ್ಯಳು!

ರಾಮನು ಸೀತೆಯ ವಿಷಯದಲ್ಲಿ ಮಾಡಿದ ದೋಷವೇನು?—ದೋಷವೇ ಅದು?—ಇಲ್ಲ! ಒಂದು ನಾಚಿಕೆಗೇಡಿನ ಕೆಲಸ, ಒಂದು ಕೆಟ್ಟ ಕೆಲಸ! ತನ್ನ ಪತಿಯು ತನ್ನ ವಿಷಯದಲ್ಲಿ ಏನನ್ನು ಮಾಡಿಬಿಟ್ಟರು?—ಛೇ! ಎಲ್ಲವೂ ಒಂದು ಸೀರೆಯ ವಿಷಯವಾಗಿ! ಅಲ್ಪದಲ್ಲೂ ಅಲ್ಪ! ಹೀಗೆಲ್ಲಾದರೂ ಬೆಲೆ ಇಲ್ಲದ ಅನಿತ್ಯ ವಸ್ತುವೊಂದಕ್ಕಾಗಿ ಈ ತಿಳಿಗೇಡಿತನವಾದ ಕೋಪ, ಈ ಬುದ್ಧಿ ಇಲ್ಲದ ಬಿಗು ಮಾನ, ಈ ಮನಃಕ್ಲೇಶ!—ಇಂತಹ ಚಿಂತೆಗಳು ಅವಳ ಹೃದಯದಲ್ಲಿ ಉದ್ಭವಿಸಿ, ಅವಳನ್ನು ಮನೆಯ ಕಡೆಗೆ ಶೀಘ್ರವಾಗಿ ಕೊಂಡೊಯ್ಯಿತು.

ಸೂರ್ಯಾಸ್ತಮಾನ ಸಮಯಕ್ಕೆ ಅವಳು ಮನೆಯನ್ನು ಸೇರಿದಳು. ಬಾಗಿಲ ಮುಂದೆ ಶೇಖರ ನಿಂತಿದ್ದನು. ಅವನ ಕೈಯ್ಯಲ್ಲೊಂದು ಸೀರೆ, ಅದು! ಅಂತಹದನ್ನು ಅವಳು ನೋಡಿದ್ದೇ ಇಲ್ಲ.

ಅದನ್ನು ಒಬ್ಬ ಮಹಾರಾಣಿಯು ಉಟ್ಟುಕೊಳ್ಳಬಹುದಲ್ಲಾ! ತಿಳಿ ನೀಲೀಬಣ್ಣ! ಅಂಚಿನಲ್ಲಿ ಅಗಲವಾಗಿ ಜರತಾರಿಯ ಹೂಗೆಲಸ,—ಅದೆಷ್ಟು ಬೆಲೆ ಕೊಟ್ಟು ಅದನ್ನು ಕೊಂಡುತಂದರೋ ತಿಳಿಯದು!

ಆದರವಳು ಮಾತಿಗೆ ಪ್ರಾರಂಭಿಸಿದೊಡನೆಯೇ ಇದೆಲ್ಲವನ್ನೂ ಮರೆತಳು. ಮನೆಗೆ ಬರುವ ದಾರಿಯಲ್ಲಿ ತಾನು ಪತಿಯೊಡನೆ ಆಡಬೇಕೆಂದಿದ್ದ ಹಲವು ಮಾತುಗಳು, ತನ್ನ ಆತ್ಮನಿಂದನೆಗಳು, ಎಲ್ಲವೂ ಮರೆತು ಹೋದವು. ತಾನು ತನ್ನ ಪತಿಯಿಂದ ಮೋಸಹೋದೆನೆಂಬುದೊಂದು ವಿಷಯ ಮಾತ್ರವೇ ನೆನಪಿನಲ್ಲಿ ನಿಂತಿತು.

ಇದು ಅವಳಿಗೆ ತಿಳಿದೂ ಕೂಡ, ಅವನು ಅವಳ ಕೈಯ್ಯಲ್ಲಿ ಆ ಹೊಸ ಸೀರೆಯನ್ನಿಟ್ಟಾಗ, ಅದು ಅವಳ ಕೈಯ್ಯಲ್ಲಿ ನಿಲ್ಲದೆ ಜಾರಿ ಕೆಳಗೆ ಬಿದ್ದಿತು. ಏಕೆಂದರೆ ಕಲಹಕ್ಕೆ ಕಾರಣವಾಗಿದ್ದ ಅದನ್ನು ಇಬ್ಬರೂ ಗಮನಿಸಲಿಲ್ಲ. ಅವಳ ಕೈಗಳು, ಸೀರೆಯನ್ನು ತೆಗೆಯದೆ, ಅವನ ಕೈಗಳನ್ನು ಹಿಡಿದವು.

ಅಂದು ರಾತ್ರಿ ಅವಳು ಹಾಸಿಗೆಯಲ್ಲಿ ಮಲಗಿರುವಾಗ "ಆದರೂ, ನನಗೆ ಇಷ್ಟೊಂದು ಹಠಮಾರಿತನವೂ, ಬಿಗುಮಾನವೂ ಇರಬಾರದಾಗಿತ್ತು." ಎಂದಂದುಕೊಂಡಳು.

ಅವನಂತೂ, “ನೋಡ ಹೋದರೆ, ದೋಷ ನನ್ನದೇ. ನಾನು ಅಷ್ಟೊಂದು ಅಲಕ್ಷ್ಯವಾಗಿ ಇರಬಾರದಾಗಿತ್ತು, ಅವಳು ಕೇಳಿದೊಡನೆಯೇ ಸೀರೆಯನ್ನು ಕೊಂಡು ಕೊಟ್ಟಿರಬಹುದಾಗಿತ್ತಲ್ಲವೇ ? ಅವಳಿಗೆ ಆಗ ಅದೆಷ್ಟೊಂದು ತೃಪ್ತಿಯಾಗುತ್ತಿತ್ತು. ನಾನವಳ ಮನಸ್ಸನ್ನು ಚೆನ್ನಾಗಿ ತಿಳಿಯಲಿಲ್ಲ........ಶುದ್ಧ ಮುಟ್ಠಾಳಾದೆ ; ” ಎಂದಂದುಕೊಂಡನು.

# ೮. ಬಳೆಯ ಕೈ

—:o:—

೧

ಕೃಷ್ಣಮೂರ್ತಿಯು ಅದೇ ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ್ದನು. ಅವನಿನ್ನೂ ಹದಿನೆಂಟು ವರ್ಷಗಳು ತುಂಬಿದ ತರುಣ. ಓದು ಎಂಬ ಕಾರಾಗೃಹದಿಂದ ಬಿಡುಗಡೆ ಹೊಂದಿ, ಪರೀಕ್ಷೆಯ ಕಾಟವಿಲ್ಲದೆ, ನೂತನವಾದೊಂದು ಶಾಂತಿಯನ್ನು ಅನುಭವಿಸಿದನು. ಅದರ ಜೊತೆಗೆ ಅವನು ಪರೀಕ್ಷೆಯಲ್ಲಿ ಪ್ರಥಮ ಸ್ಥಾನದಲ್ಲಿ ತೆರ್ಗಡೆಹೊಂದಿದ್ದನಾದುದರಿಂದ, ಬಹಳ ಆನಂದಕರವಾಗಿ ಕಾಲಕಳೆಯುತ್ತಲಿದ್ದನು. ಪ್ರತಿನಿತ್ಯವೂ ಬಿಸಿಲು ಇಳಿದೊಡನೆ, ಸಂಜೆ ಆರು ಘಂಟೆಗೆ ಅವನು ತಿರುಗಾಡಿಕೊಂಡು ಬರಲು ಹೊರಡುವನು. ಅವೇ ತಾನೇ ತಣ್ಣೀರ ಸ್ನಾನಮಾಡಿ, ಸ್ವಚ್ಛವಾದ ಶ್ವೇತ ವರ್ಣ ಉಡುಪು ಧರಿಸಿ, ಕ್ರಾಪನ್ನು ಚೆನ್ನಾಗಿ ಬಾಚಿಕೊಂಡು, ಅವನು ಉಲ್ಲಾಸವಾಗಿ ಹೋಗುವಾಗ ಬಹಳ ಲಕ್ಷಣವಾಗಿ ಕಾಣುವನು.

ಪ್ರತಿನಿತ್ಯವೂ ಅವನು ಮನೆಯಿಂದ ಹೊರಡುವಾಗ ಸೂರ್ಯಾಸ್ತಮಾನ ಸಮಯವಾಗಿರುವುದು. ಏಕೆಂದರೆ, ತನ್ನ ಒತ್ತಾಯ ವ್ಯಾಸಂಗ ಮುಗಿದ ಬಳಿಕ, ಮನೋರಮ್ಯವಾದ ಓದುವಿಕೆಯಲ್ಲೂ, ಮನವೊಪ್ಪಿದ ಕಾರ್ಯಗಳಲ್ಲೂ ಬಹುಕಾಲ ಮೈ ಮರೆತು ಬಿಡುವನು. ಬೆಳಕು ಕುಗ್ಗಿ, ಓದುವುದು ಅಸಾಧ್ಯವಾಗುವ ಸಮಯಕ್ಕೆ ಅವನು ಕುರ್ಚಿಯಿಂದ ಎದ್ದು, ಸ್ನಾನಮಾಡಿ, ಲಾಲ್‌ಬಾಗಿಗೆ ಹೋಗಲು ಉದ್ಯುಕ್ತನಾಗುವನು.

೨

ಹಲವು ದಿನಗಳು ಅವನು ತನ್ನ ಮನೆಯನ್ನು ದಾಟಿ ಬಂದೊಡನೆಯೇ, ಪಕ್ಕದ ಮನೆಯ ಮೆಟ್ಟಲಲ್ಲಿ ಆ ಮನೆಯ ಯಜಮಾನಿಯು ತನ್ನ ಈರ್ವರು ಮಕ್ಕಳೊಡನೆ ಕುಳಿತಿರುವುದನ್ನು ಕಾಣುವ ವಾಡಿಕೆ. ಆದರೆ ಅವನು ಅವ

ಳನ್ನು ಸರಿಯಾಗಿ ನೋಡಿರಲಿಲ್ಲ. ಹಲವು ದಿನಗಳು ಅವನು ಅವಳನ್ನು ಹಾದುಹೋಗುವಾಗ, ತನ್ನದು ಅದೆಷ್ಟೊಂದು ಉಲ್ಲಾಸ ಪ್ರಕೃತಿ ಎಂದವಳು ವಿಸ್ಮಯಗೊಳ್ಳಬೇಕೆಂದು ಮುಖವನ್ನು ಸ್ವಲ್ಪ ಸೆಟ್ಟಗೆ ಮಾಡಿಕೊಂಡು ಬಹಳ ಲಾಘವದೊಡನೆ ನಡೆಯುವನು. ತಾನು ಲೋಕವನ್ನೇ ಅಲಕ್ಷ್ಯ ನೋಟ ದಿಂದ ನೋಡುವಂತೆಯೂ, ತನ್ನನ್ನು ತಾನು ಚೆನ್ನಾಗಿ ಅರಿತವನಾಗಿ ಇಂಬು ಗೊಳ್ಳುವವನಂತೆಯೂ ಅವಳು ತಿಳಿದು ಆಶ್ಚರ್ಯಗೊಳ್ಳುವಂತೆ ಅವನು ಅವಳನ್ನು ಗಮನಿಸದೆಯೇ ಹೋಗುವವನಂತೆ, ಬಹಳ ಅಲಕ್ಷ್ಯವಾಗಿ ತನ್ನಿದಿರುಗಡೆಯೇ ನೋಡುತ್ತ ಹೋಗುವನು. ಮಿಕ್ಕ ದಿನಗಳಲ್ಲಿ ಅವನು ಅವಳನ್ನು ಹಾದುಹೋಗುವಾಗ ಅವಳನ್ನು ಒಂದು ಸಲ .......ಇಲ್ಲ, ಎರಡು ಸಲ.....ಅಥವಾ ಮೂರು ಸಲ ಕೂಡ.....ಓರೆಗಣ್ಣಿನಿಂದ ನೋಡಿ ಬಿಡುವನು.

ಈ ರೀತಿಯಾಗಿ ಅವನು ಅವಳ ವಿಷಯವಾಗಿ ಅರಿತಿದ್ದ ವಿಷಯ ಮೂರು; ಅವಳೊಬ್ಬ ತರುಣಿ; ಒಳ್ಳೆಯ ಕೆಂಪು ಬಣ್ಣ; ಮಂದ ಬೆಳಕಿ ನಲ್ಲಿಯೂ ಸಹ ಅವಳು ಕೆಂಪೆಂದು ತಿಳಿಯುವುದು ಸಾಧ್ಯ. ಅವಳ ಅಚ್ಚ ಗಪ್ಪಾದ ಕಣ್ಮಣಿಗಳಲ್ಲಿ ಅದೊಂದು ಬಗೆಯ ಮಾಯೆಯು ಹುದುಗಿತ್ತು. ಅವು ಅದೆಷ್ಟೊಂದು ಕಪ್ಪಗಿದ್ದುವು? ರಾತ್ರಿಯೊಡನೆ ಸಂಧ್ಯಾಕಾಲವು ಬೆರೆಯುವ ಸಮಯದಲ್ಲಿ, ಆ ಮಸುಕ ಮಸುಕಾದ ಬೆಳಕಿನಲ್ಲೂ ಸಹ ಆ ಕಣ್ಮಣಿಗಳು ಕತ್ತಲೆಗೂ ಅತಿ ಕಪ್ಪಾಗಿ ತೋರುತ್ತಿದ್ದುವು. ಅವುಗಳ ಮಾಯಾಶಕ್ತಿಯನ್ನು ಅವನು ಮೊಟ್ಟಮೊದಲು ಕಂಡದ್ದು ಒಂದು ಶುಕ್ರವಾರ.

೩

"ಓಹೋ,....ಇಂದು ಒಳ್ಳೆಯದಿನ....ಈ ಹೊತ್ತು ಅವಳು ಗುಡಿಗೆ ಕೂಡ ಹೋಗುವಳಲ್ಲವೇ.... .......ಅದಕ್ಕಾಗಿಯೇ ಮತ್ತೆ ಇಂದು ಕಣ್ಣಿಗೆ ಕಾಡಿಗೆ ಹಚ್ಚಿಕೊಂಡಿರುವಳೇನೋ. ಇಲ್ಲದಿದ್ದರೆ ಕಣ್ಣುಗಳು ಇಷ್ಟೊಂದು ಕಪ್ಪಗಿರುವುದೇ ?" ಎಂದವನೂ ಭಾವಿಸಿದನು.

ಒಂದು ದಿನ ಅವನು ಬೀಚಿಗೆ (beach) ಹೋಗಲಿಲ್ಲ. ಅಂದು ಓದು ವುದು ಅಸಾಧ್ಯವಾಗುವಷ್ಟು ಕತ್ತಲು ಕವಿದಮೇಲೂ ಕೂಡ, ದೀಪ

ಹೊತ್ತಿಸಿಕೊಂಡು ಓದುತ್ತಲಿದ್ದನು. “ಪ್ರಕಾಶಮಯವಾದ ಬತ್ತಿಯ ಮೂಲಕ, ದೀಪವೊಂದು ಸೌಂದರ್ಯವನ್ನೂ, ಪ್ರಕಾಶವನ್ನೂ ಹೊಂದುವಂತೆ” ಎಂಬ ಕಾಳಿದಾಸನ ಶ್ಲೋಕವನ್ನು ಓದಿದನು. ಪಾರ್ವತಿಯ ಆಗಮನದಿಂದ ಅವಳ ತೌರುಮನೆಯೂ ಆ ರೀತಿಯಾಗಿ ಸೌಂದರ್ಯದೊಡನೆ ಬೆಳಗಿತಂತೆ. ಮನೆಯೊಂದಕ್ಕೆ ಆನಂದವನ್ನು ತರುವ ಒಂದು ಮಗುವಿನ ಆಗಮನವನ್ನು ಕಾಳಿದಾಸನು ಆ ರೀತಿಯಾಗಿ ವರ್ಣಿಸಿದ್ದನಾದರೂ, ಅದನ್ನು ಓದಿದ ಕೃಷ್ಣಮೂರ್ತಿಯು ಅದರಲ್ಲಿ ಒಬ್ಬ ತರುಣಿ........ಒಬ್ಬ ಪತಿ........ಒಬ್ಬ ಗೃಹಿಣಿ........ಮನೆಗೆ ಬರುವ ಅಂದವನ್ನು ಕಂಡನು. ಅದರ ಬಳಿಕ ಅವನ ಕಲ್ಪನೆಯು ತನ್ನಿಷ್ಟಬಂದಂತೆ ಚಿತ್ರವನ್ನು ಪೂರ್ತಿಗೊಳಿಸಿಕೊಂಡಿತು. ಕತ್ತಲೆಯ ಸಮಯದಲ್ಲಿ ಮಂದ ಬೆಳಕಿನಿಂದೊಡಗೂಡಿದ ಒಂದು ಕೊಠಡಿ—ಅದು ಹೇಗೆ ಜೀವರಹಿತವಾಗಿ, ನಿರುತ್ಸಾಹವಾಗಿದೆ! ಅದರಲ್ಲೊಂದು ಮಾಯಾರೂಪವಾದ ಕೈ ಪ್ರಜ್ವಲಿಸುತ್ತಲಿರುವ ದೀಪವನ್ನು ತಂದು ನಡುವೆ ಇದ್ದ ಮೇಜಿನಮೇಲಿಡುತ್ತದೆ. ತಕ್ಷಣ ಆ ಕತ್ತಲೆ ಕೋಣೆ ಹೇಗೆ ಲಕ್ಷ್ಮೀ ಕಟಾಕ್ಷದಿಂದ ತುಂಬಿ ತುಳುಕಿ, ಅಂದವಾಗಿ ಪ್ರಕಾಶಿಸುತ್ತದೆ.! ಅದರಂತೆ ಒಬ್ಬ ಸ್ತ್ರೀ........ನೈಜವಾದ ಸ್ತ್ರೀತ್ವವನ್ನು ಹೊಂದಿದ ಒಬ್ಬಳು—ಪ್ರೇಮಪೂರಿತಳಾದವಳು—ತನ್ನ ಪತಿಯ ವಾಸಸ್ಥಳವನ್ನು ಪ್ರಕಾಶಮಯವಾಗಿ ಬೆಳಗಿಸುತ್ತಾಳೆ.

ಕೃಷ್ಣಮೂರ್ತಿಯು ಸ್ನಾನ ಮಾಡಿ, ವಾಡಿಕೆಯಂತೆ ಶ್ವೇತ ವಸ್ತ್ರ ಧರಿಸಿ, ತಲೆಯ ಕೂದಲನ್ನು ಅಚ್ಚುಕಟ್ಟಾಗಿ ಬಾಚಿಕೊಂಡು, ಮನೆಯಿಂದ ಹೊರಟನು. ಆಗ ಸಂಧ್ಯಾಕಾಲವನ್ನು ಕತ್ತಲೆಯು ಕವಿಯುತ್ತಿತ್ತು. ರಾತ್ರಿಯ ತ್ವರಿತ ಆಗಮನವು ಪ್ರಾರಂಭವಾಗಿಬಿಟ್ಟಿತು.

ಕೃಷ್ಣಮೂರ್ತಿಯ ಹೃದಯವನ್ನು ಅಚಲರೂಪವಾದ ಯಾವುದೋ ಬಂದು ಆಕ್ರಮಿಸತೊಡಗಿತು. ಬೀಚಿಗೆ ಹೋಗಲೂ ಸಹ ಅವನಿಗೆ ಜಿಗುಪ್ಸೆತೋರಿತು. ಕೊಂಚಕಾಲ ಅವನು, ತನ್ನ ತಲೆಯ ಮೇಲೆ ಗಗನ ಮಾರ್ಗವಾಗಿ ತಂತಮ್ಮ ಗೂಡುಗಳಿಗೆ ಹಾರಿಹೋಗುತ್ತಲಿರುವ ಕಾಗೆಗಳ ಸಾಲನ್ನು ನೋಡುತ್ತ ನಿಂತನು. ಅವುಗಳ ಸಾಲುಗಳು ಮುಗಿಯುವವರೆವಿಗೂ ನೋಡುತ್ತಲಿರುವವುದು ಅಸಾಧ್ಯವೆಂದು, ಪುನಃ ತನ್ನ ನೋಟ

ವನ್ನು ಭೂಲೋಕಕ್ಕಿಳಿಸಿದನು. ತಾನು ಕೊಂಚ ಹೊತ್ತಿಗೆ ಮುಂಚಿತವಾಗಿ ಓದಿದ್ದ ಕಾಳಿದಾಸನ ಶ್ಲೋಕದ ಮತ್ತೆರಡು ಉಪಮಾನಗಳು ಅವನ ನೆನಪಿಗೆ ಬಂದವು....ಆಕಾಶ ಗಂಗೆಯು ಸ್ವರ್ಗಮಾರ್ಗವನ್ನು ಪುನೀತ ಮಾಡುವಂತೆ” ಎಂದೂ, “ಸಂಸ್ಕಾರ ಹೊಂದಿದ ಮಾತು ಮನುಷ್ಯರ ಆಭರಣದಂತಿರುವ ಹಾಗೆಯೂ” ಎಂಬೀ ಉಪಮಾನಗಳ ಆಲೋಚನೆಯು ಅವನ ಮನಸ್ಸನ್ನು ಸ್ತ್ರೀತ್ವದಿಂದ ಪ್ರಕೃತಿಗೂ ಹೃದಯ ನೈರ್ಮಲ್ಯತೆಗೂ ತಿರುಗಿಸಿತು.

ಕೃಷ್ಣಮೂರ್ತಿಯು ತನ್ನ ಇದಿರು ಪಾರ್ಶ್ವವನ್ನು ದೃಷ್ಟಿಸಿದನು. ಪಕ್ಕದ ಮನೆಯ ಬೀದಿಯ ಬಾಗಿಲ ಮುಂದೆ ಆ ಮನೆಯ ಯಜಮಾನಿಯು ಕಾಣಿಸಲಿಲ್ಲ. ಅವಳ ಪುಟ್ಟ ಬಾಲಕಿಯೂ, ಬಾಲಕನೂ ಮಾತ್ರವೇ ಅಲ್ಲಿ ಏನೋ ತಮಾಷೆಮಾಡುತ್ತ ನಿಂತಿದ್ದರು. ಅವರುಗಳಿಗೆ ಅವನೆಂದರೆ ಬಲು ಪ್ರೀತಿ. ವಿಶ್ವವಿದ್ಯಾನಿಲಯದಿಂದ ಹಿಂದಿರುಗಿ ಬರುವ ದಾರಿಯಲ್ಲಿ ಅವನು ಅವರುಗಳಿಗೆ ಹಲವು ಸಲಗಳು ಮಿಠಾಯಿಗಳನ್ನು ಕೊಂಡುತಂದು ಕೊಡುವ ಪದ್ಧತಿ

ಆ ಮನೆಯ ಮುಂಭಾಗದಿಂದ ಹಿಂಭಾಗಕ್ಕೆ ಅವನ ದೃಷ್ಟಿಯು ತಿರುಗಿತು. ಅವನ ಮನೆಗೆ, ಪಕ್ಕದ ಮನೆಯ ಹಿಂಭಾಗವೇ ಅಂಟಿದಂತಿತ್ತು. ಅದರ ಕಿಟಕಿಯೊಂದು ಅವನ ಮುಂಭಾಗದಲ್ಲಿ ರಸ್ತೆಯನ್ನು ನೋಡುತ್ತಲಿತ್ತು. ಕಿಟಕಿಯ ಕೆಳಭಾಗದ ಬಾಗಿಲುಗಳೆರಡೂ, ಮುಚ್ಚಲ್ಪಟ್ಟಿದ್ದವು. ಮೇಲು ಭಾಗದಿಂದ ಕೊಠಡಿಯೊಳಗಿನ ದೀಪವೂ, ಕಿಟಕಿಯ ಪಟ್ಟಿಗೆ ತಗಲು ಹಾಕಿದ್ದ ಸೌಟುಗಳ ಸ್ಟ್ಯಾಂಡೂ ಕಾಣಿಸಿ ಕೊಂಡವು. ಸೌಟು ಸ್ಟ್ಯಾಂಡಿನಲ್ಲಿ ಹಲವಾರು ಸೌಟುಗಳನ್ನೂ, ಒಂದು ಕಡೆಗೋಲನ್ನೂ ಇದರ ಮೊದಲೇ ನೋಡಿದ್ದ ಕೃಷ್ಣಮೂರ್ತಿಯು, “ಓಹೋ, ಇದೇ ಅಡಿಗೆ ಮನೆ” ಎಂದು ತನ್ನಷ್ಟಕ್ಕೆ ತೀರ್ಮಾನಿಸಿ ಕೊಂಡಿದ್ದನು

ಈ ದಿನ ಅವನು ಕಿಟಕಿಯ ಕಡೆಗೆ ನೋಡುತ್ತಿರುವಾಗ ಅಡಿಗೆಯ ಮನೆಯಲ್ಲಿ ಪಾತ್ರೆಗಳ ಶಬ್ದವು ಕೇಳ ಬಂದಿತು. ಮರುಕ್ಷಣ, ಕಿಟಕಿಯ ಮೇಲ್ಭಾಗದ ಮೂಲಕವಾಗಿ, ಸೌಟಿನ ಸ್ಟ್ಯಾಂಡಿನಿಂದ ಸೌಟೊಂದನ್ನು ತೆಗೆದುಕೊಳ್ಳುತ್ತಲಿರುವ ಸ್ತ್ರೀಯೋರ್ವಳ ಕೈಯೊಂದನ್ನು ಕಂಡನು. ಅವನು ಕಿಟಕಿಗೆ ಸಮೀಪವಾಗಿ ಹೊರಗಡೆ ನಿಂತಿದ್ದುದರಿಂದ ಆ ಕೈಯನ್ನು ಚೆನ್ನಾಗಿ

ಗಮನಿಸಲು ಸಾಧ್ಯವಾಯಿತು. ಸಾಟಿನ ಸ್ಟ್ಯಾಂಡಿನಲ್ಲಿ ಸಿಕ್ಕಿ ಸಿಕ್ಕಿದಂತೆ ಸಿಕ್ಕಿಸಿಕೊಂಡಿದ್ದ ಸಾಟುಗಳಿಂದ ಶೀಘ್ರವಾಗಿ ಒಂದನ್ನು ಬಿಡಿಸಿ ತೆಗೆಯುವುದು ಸಾಧ್ಯವಾಗಲಿಲ್ಲ. ಆದರೂ ಕೂಡ ಅರೆ ನಿಮಿಷದಲ್ಲಿ ಅವಳ ಕೈ ಅದೃಶ್ಯವಾಯಿತು.

ನಾರಿಯೋರ್ವಳ ಕೈ, ಕೊಠಡಿಯ ಬೆಳಕಿನಲ್ಲಿ ಪ್ರಕಾಶಮಾನವಾಗಿ, ಕೆಂಪಗಿತ್ತು. ಅದರಲ್ಲೆರಡು ಚಿನ್ನದ ಬಳೆಗಳು. ಅಂಗೈಗೆ ಮೇಲೆ ಸ್ವಲ್ಪ ದೂರ ಮಾತ್ರ ಕಾಣಿಸಿತು. ಬೆರಳುಗಳಲ್ಲಿ ಉಂಗುರವೇನಾದರೂ ಇತ್ತೇ ಎಂಬುದನ್ನು ಅವನಿಂದ ನೋಡಲಾಗಲಿಲ್ಲ. ಆದರೂ, ಆ ಅರೆ ನಿಮಿಷದೊಳಗಾಗಿ ಅವನು ಅವಳ ಕೈಯನ್ನು ಚೆನ್ನಾಗಿ ಪರಿಶೀಲಿಸಿಬಿಟ್ಟನು.

ಕಿಟಕಿಯಲ್ಲಿ ಕಾಣಿಸಿಕೊಂಡದ್ದು ಅವಳ ಮುಖವಾಗಿದ್ದಿದ್ದರೆ, ಅವನಿಗೆ ಆ ರೀತಿ ನೋಡಲು ಧೈರ್ಯ ಹುಟ್ಟಿರಲಾರದು. ಅವನು ಅದೇ ನಾರಿಯನ್ನು, ಅವಳ ಮುಖಸಮೇತವಾಗಿ, ತನ್ನೆದುರಿನಲ್ಲಿ ಹಲವು ಸಲ ನೋಡಿದ್ದುಂಟು. ಆದರೆ ಈ ಹೊತ್ತು ಅವನು ಪ್ರತ್ಯೇಕವಾಗಿ ಕಂಡ ಬಳೆಯ ಕೈ, ಅವನ ಹೃದಯದಲ್ಲೊಂದು ಆಂದೋಳನವನ್ನೆಬ್ಬಿಸಿಬಿಟ್ಟಿತು. ಅವನು ಕಂಡದ್ದು ಆ ಮನೆಯ ಬಡತಿಯ ಕೈಯನ್ನಲ್ಲ, ಅದು ಅವನನ್ನು ಕೂಗಿ ಕರೆಯುತ್ತಲಿದ್ದ ಸ್ತ್ರೀ ಸಹಜ ಸೌಂದರ್ಯದ ಹೊರಗಣ ದೃಶ್ಯ, ಬಳೆಗಳನ್ನು ತೊಟ್ಟು, ಬೆಳಕಿನಲ್ಲಿ ಪ್ರಕಾಶಮಾನವಾಗಿ, ಕಿಟಕಿಯ ಮೂಲಕ ತೋರುವ, ಕೆಂಪನೆಯ ಮೃದುವಾದ, ನಾರಿಯ ಕೈ. ಈ ಚಿತ್ರವು ಕೃಷ್ಣಮೂರ್ತಿಯ ಹೃದಯದಲ್ಲಿ ಅಚ್ಚಳಿಯದಂತೆ ಬೇರೂರಿಬಿಟ್ಟಿತು.

* * *

ದಿನಗಳುರುಳಿದವು. ವಿಶ್ವವಿದ್ಯಾಲಯದಲ್ಲಿ ವಿಜಯಿಯಾದ ಕೃಷ್ಣಮೂರ್ತಿಯನ್ನು ಬದುಕೂ ಅನುಕೂಲವಾಗಿ ಸುಖಾಗಮನ ಬಯಸಿತು. ಅವನ ತಾಯಿತಂದೆಯರು ಬಹಳ ಆಲೋಚಿಸಿ, ಅವನಿಗೆ ಶ್ರೀಮಂತ ಮನೆತನದ ಹೆಣ್ಣೊಂದನ್ನು ತಂದು ವಿವಾಹ ಮಾಡಿದರು ; ಹುಡುಗಿ ಅವಳ ತಾಯಿತಂದೆಯರಿಗೆ ಏಕಮಾತ್ರ ಪುತ್ರಿ ; ಅವರುಗಳು ಬಹಳ ಐಶ್ವರ್ಯವಂತರು.

ಆದರೆ ಕೃಷ್ಣಮೂರ್ತಿಯು ಆ ಎರಡು ವಿವರಗಳನ್ನೂ ಗಮನಿಸಲಿಲ್ಲ; ಹುಡುಗಿ ರೂಪವತಿ ; ಅಷ್ಟರಲ್ಲೇ ಅವನು ತೃಪ್ತಿ ಹೊಂದಿದನು.

ಮದುವೆಯ ಬಳಿಕ ದಿನಗಳು ಮೆಲ್ಲಗೆ ಸರಿದವು. ಏಕೆಂದರೆ, ಜಾನಕಿ ತನ್ನ ತೌರು ಮನೆಗೆ ಹೊರಟು ಹೋದಳು. ಕೃಷ್ಣಮೂರ್ತಿಯು ಮತ್ತೆ ತನ್ನ ಕಾರ್ಯದಲ್ಲಿ ಲೀನನಾದನು. ಆದರೆ ಪದೇ ಪದೇ ಪುಸ್ತಕಗಳ ನಡುವೆ ಒಂದು ಹುಡುಗಿಯ ಮುಖವು ಕಾಣಿಸಿಕೊಳ್ಳುವುದು. ಆ ಮುಖವನ್ನು ಅವನು ಇನ್ನೂ ಚೆನ್ನಾಗಿ ಪರಿಶೀಲಿಸಿ ನೋಡಿರಲಿಲ್ಲ.

ಈ ರೀತಿಯಾಗಿ ಸರಿಯುತ್ತಾ ಸರಿಯುತ್ತಾ ಏಳೆಂಟು ದಿನಗಳು ಕಳೆದುವು. ಬೀಗರ ನಡುವೆ ಹಣದ ವಿಷಯವಾಗಿಯೂ, ಗಡಿಯಾರದ ವಿಷಯವಾಗಿಯೂ ಮಾತುಕತೆ ನಡೆಯಿತು. ಆದರೆ ಗಂಡ ಹೆಂಡಿರ ನಡುವೆ ಆಗ ಮೌನ ಮಾತ್ರವೇ ನೆಲಸಿತ್ತು. ಅದೇಕೋ, ಕೃಷ್ಣ ಮೂರ್ತಿಯು ಜಾನಕಿಗೆ ಹೆಚ್ಚಾಗಿ ಕಾಗದ ಬರೆಯುತ್ತಿರಲಿಲ್ಲ.

ದೀಪಾವಳಿಗವನು ಮಧುರೆಗೆ ತನ್ನ ಮಾವನವರ ಮನೆಗೆ ಹೋದನು. ಒಂದು ವರ್ಷದೊಳಗಾಗಿ ಜಾನಕಿಯು ಅದೆಷ್ಟೊಂದು ಬದಲಾವಣೆ ಹೊಂದಿದವಳಾಗಿ ಬೆಳೆದು ಬಿಟ್ಟಿದ್ದಳು! ತನ್ನೆದುರಿಗೆ ಅಲಂಕಾರ ಭೂಷಿತಳಾಗಿ ನಿಂತಿರುವ ಆ ನವತರುಣಿ ತನಗಾಗಿಯೇ ಅಲ್ಲವೇ ಅಲ್ಲಿ ನಿಂತಿರುವಳು———ಈಗಲೂ, ಯಾವಾಗಲೂ, ನಿರಂತರವೂ, ತನ್ನವಳೇ ಅವಳು———ಎಂದೆಣಿಸಿದಾಗ ಅವನಿಗೆ ಆಸೆ, ಆಕಾಂಕ್ಷೆ, ಆಶ್ಚರ್ಯವೆಲ್ಲವೂ ಒಟ್ಟಿಗೆ ಉದ್ಭವಿಸಿದವು.

ಮಾವನವರ ಮನೆಯನ್ನವನು ತಲುಪಿದ ಬೆಳಿಗ್ಗೆನಿಂದ ಸಂಜೆಯವರೆವಿಗೂ ಅವನಿಗೆ ಜಾನಕಿಯೊಡನೆ ಸಹಜವಾಗಿ ಸಂಭಾಷಿಸಲು ಸಂದರ್ಭವೇ ದೊರಕಲಿಲ್ಲ. ಆರತಿ ಅಕ್ಷತೆ ಸಮಯಗಳಲ್ಲಿ ಅವರಿಬ್ಬರೂ ಒಟ್ಟುಗೂಡಿದಾಗಲೂ ಕೂಡ ಅವರುಗಳು ಒಬ್ಬರಿಗೊಬ್ಬರು ಮಾತನಾಡಿಕೊಳ್ಳಲಿಲ್ಲ. ಕೃಷ್ಣಮೂರ್ತಿಯು ಮಿಕ್ಕವರ ಪರಿಹಾಸ್ಯ ನುಡಿಗಳಿಗೆ ತಮಾಷೆಯಾಗಿ ಉತ್ತರವೀಯುತ್ತಾ, ಅವಳ ಸಮ್ಮುಖದಲ್ಲಿ ಅವಳಿಗಾಗಿ ಮಿಕ್ಕವರೊಡನೆ ಮಾತನಾಡಿದನು. ಅವಳು ಅದೂ ಕೂಡ ಮಾತನಾಡಿರಲಿಲ್ಲ. ಸುಮ್ಮನೆ ನಗುನಗುತ್ತ ನಿಂತಿದ್ದಳು. ಅವನು ಸ್ನಾನಮಾಡಲು ಹೋದಾಗ

ಅವಳು ಬಚ್ಚಲ ಮನೆಯಲ್ಲಿ ಚೆಂಬು ಒಂದನ್ನು ತಂದಿಟ್ಟಳು. ಅವಳು ಹಿಂದಿರುಗಿ ಹೋಗುವುದರೊಳಗಾಗಿ ಅವನು "ಏನು ?" ಎಂದು ಮಾತ್ರ ಒಂದು ಸಲ ವಿಚಾರಿಸಿದನು. ಅವಳು ತಟ್ಟನೆ ಒಂದು ಸಲ ಅವನನ್ನು ನಗುನಗುತ್ತ ನೋಡಿ, ಓಡಿಯೇ ಬಿಟ್ಟಳು.

ಅಂದು ರಾತ್ರಿ ಊಟ ಮುಗಿದ ಬಳಿಕ, ಅವನು ತನಗೆಂದು ಪರಿಷ್ಕಾರ ಮಾಡಿಟ್ಟಿದ್ದ ಕೊಠಡಿಯಲ್ಲಿ, ತಾನು ಜಾನಕಿಗೆಂದು ಉಡುಗೊರೆಯಾಗಿ ತಂದಿದ್ದ ಪುಸ್ತಕವನ್ನು ತಿರುವುತ್ತ ಕುಳಿತಿದ್ದನು. ಜಾನಕಿ ಕೈಯಲ್ಲಿ ಹಾಲಿನ ಬಟ್ಟಲನ್ನು ಹಿಡಿದುಕೊಂಡು ಅಲ್ಲಿಗೆ ಬಂದು, ಅದನ್ನು ಒಂದು ಮೇಜಿನ ಮೇಲೆ ಇಟ್ಟಳು.

"ಹಾಲು ಕುಡಿಯುತ್ತೀರಾ ?" ಎಂದು ಅವನನ್ನು ಕೇಳಿ, ಅವಳು ಕೊಂಚ ದೂರ ಸರಿದು ಮೇಜಿನ ಮೇಲೆ ಕೈ ಊರಿಕೊಂಡು ನಿಂತಳು.

ಕೃಷ್ಣಮೂರ್ತಿಯು ಅವಳನ್ನು ದೃಷ್ಟಿಸಿ ನೋಡಿದನು. ಅವಳು ಅವನನ್ನು ನೋಡಿದಳು. ಇವರಿಬ್ಬರ ನಡುವೆ ಕ್ಷಣಕಾಲ ಮೌನ ಸಂಭಾಷಣೆ ಜರುಗಿತು. ಅಷ್ಟಕ್ಕೇ ಅವಳು ತನ್ನ ಕಣ್ಮನಗಳನ್ನು ಅವನಿಂದ ಸೆಳೆದುಕೊಂಡು ತಲೆ ತಗ್ಗಿಸಿ ನಿಂತಳು.

"ಜಾನಕೀ, ಈ ಪುಸ್ತಕವನ್ನು ನಿನಗಾಗಿ ತಂದಿದ್ದೇನೆ." ಎಂದು ಕೃಷ್ಣಮೂರ್ತಿಯು ಪುಸ್ತಕವನ್ನು ಅವಳ ಕಡೆಗೆ ನೀಡಿದನು.

ನೆಲವನ್ನು ನೋಡುತ್ತ ಬಹಳ ಹೊತ್ತು ಸುಮ್ಮನೆ ನಿಂತಿರಲು ಸಂಕಟಪಡುತ್ತಲಿದ್ದ ಜಾನಕಿಯು ಆ ಸಂಕಟದಿಂದ ಪಾರಾದಳು.

"ಇದೊಂದು ಕವಿತಾ ಸಂಗ್ರಹ. ಬಹು ಸುಂದರವಾದ ಕವಿತೆಗಳಿವೆ. ಇಂಗ್ಲೀಷಿನಲ್ಲಿ ಇದ್ದರೂ ಕೂಡ ಸುಲಭವಾಗಿದೆ. ನಿನಗೆ ಚೆನ್ನಾಗಿ ಅರ್ಥವಾಗುವುದು" ಎಂದು ಹೇಳಿ, ಕೃಷ್ಣಮೂರ್ತಿಯೂ, ಮಾತು ನಿಲ್ಲಿಸಿದನು. ಏಕೆಂದರೆ, ಅವನಿಗೆ ಆಗ ಪುಸ್ತಕವನ್ನು ಕುರಿತ ಮಾತು ಅಸಂಭವವಾಗಿದ್ದಿತು. ಅವಳು ಆ ಪುಸ್ತಕದ ಹಾಳೆಗಳನ್ನು ತಿರುವುತ್ತ, ಅದನ್ನು ನೋಡದೆ; ಅವನನ್ನೂ ನೋಡದೆ ನಿಂತಿದ್ದಳು.

ಮತ್ತೆ ಅವರಿಬ್ಬರ ನಡುವೆ ಕೊಂಚ ಕಾಲ ಮೌನ ನೆಲಸಿತು.

ಕೃಷ್ಣಮೂರ್ತಿಯು ಅವಳನ್ನು ಆಕಾಂಕ್ಷೆಯೊಡನೆ ಈಕ್ಷಿಸಿದನು. ಅವಳು ತಲೆಯೆತ್ತಿದಾಗ ಅವರುಗಳ ಕಣ್ಮನಗಳು ಒಂದು ಗೂಡಿದವು. ಆಗ ಅವುಗಳಿಂದ ಮೃದುವಾದೊಂದು ಪ್ರಕಾಶ ಬೀರಿತು.

" ಯಾಕೆ ಅಲ್ಲಿಯೇ ನಿಂತಿರುವೆ ? ಕುರ್ಚಿಯಲ್ಲಿ ಕುಳಿತು ಕೊಳ್ಳಬಾರದೇ ? ಎಂದು ಕೃಷ್ಣಮೂರ್ತಿಯು ಯಾವುದೋ ಒಂದು ಹೇಳಬಾರದ ಮಾತನ್ನು ಹೇಳಿಬಿಟ್ಟವನಂತೆ ಹೇಳಿ ಮುಗಿಸಿದನು.

ಅವಳು ಅವನನ್ನು ಒಂದು ಸಲ ಈಕ್ಷಿಸಿ, ಅವನ ಕಡೆಗೆ, ಎರಡಂಗುಲ ಸರಿದು, ಕುರ್ಚಿಯ ಹಿಂದೆಯೇ ನಿಂತಳು.

" ಯಾಕೆ, ಹೇಳಿಯೂ ಕೂಡ ಅಲ್ಲಿಯೇ ನಿಂತಿರುವೆಯಲ್ಲಾ ? " ಎಂದು ಕುತೂಹಲನಾಗಿ ನುಡಿದನು ಕೃಷ್ಣಮೂರ್ತಿ.

ಅವಳ ಮುಖವು ಕೆಂಪೇರಿತು. ತಟ್ಟನೆ ಅವನು ಎದ್ದು, ಅವಳ ಕರವನ್ನು ಸ್ಪರ್ಶಿಸಿ ಅವಳನ್ನು ತನ್ನೆಡೆಗೆ ಸೆಳೆದನು. ಅವಳ ಎದೆಯುಬ್ಬಿತು. ಅವಳು ಅವನ ಮುಖವನ್ನು ನೋಡದೆ, ತಲೆ ತಗ್ಗಿಸಿದಂತೆಯೇ ನಿಂತಳು.

ಆಗ ತಟ್ಟನೆ ಅವನ ಮನಗಣ್ಣ ಮುಂದೆ ಒಂದು ಚಿತ್ರವು ಕಾಣಿಸಿಕೊಂಡಿತು............ತಾನು ಒಂದು ಸಲವೂ ಮಾತನಾಡಿ ಅರಿಯದ ಪರಸ್ತ್ರೀಯ ಕೈ............ಆದರೆ ಅವನು ನಿಜವಾಗಿ ಕಂಡದ್ದು ಪರ ಸ್ತ್ರೀಯ ಕೈಯ್ಯನಲ್ಲ. ಅವನು ತನ್ನ ಮನಸ್ಸಿನಲ್ಲಿಯೂ ಸಹ ಜಾನಕಿಯ ಕೈಯನ್ನೇ ಕಂಡನು. ಹೌದು, ಅಂದು ಕಿಟಿಕಿಯ ಹಿಂದೆ ಅವನು ಕಂಡ ಮಾಯಾರೂಪದ ಕೈ ಜಾನಕಿಯದೇ.

# ೯. ಹಡೆದವರು

---

ಅಂಬುಜಮ್ಮನು ತನ್ನ ಮನೆಯ ಅಂಗಳದಲ್ಲಿ ಕುಳಿತು, ಆ ದಿನ ಕೊಂಡು ತಂದ ಉದ್ದಿನ ಬೇಳೆಯಲ್ಲಿ ಕಲ್ಲುಮಣ್ಣು ಆರಿಸುತ್ತಲಿದ್ದಳು. ಅವಳು ತಾರುಣ್ಯಪ್ರಾಯವನ್ನು ದಾಟಿದ್ದರೂ ಕೂಡ ಅವಳ ಮೈ ಕಟ್ಟನ್ನು ಕಂಡರೆ ಅವಳ ತಾರುಣ್ಯದಲ್ಲಿನ ಮುಖ ಕಾಂತಿಯು ಒಂದು ರೀತಿಯಲ್ಲಿ ವಿಶದ ವಾಗುತ್ತಲಿದ್ದಿತು. ಅವಳನ್ನು ನೋಡುವಲ್ಲಿ, ಅವಳ ನಶಿಸಿ ಹೋದ ಸೌಂದರ್ಯ ರಾಶಿಯನ್ನು ಕುರಿತು ಉದ್ಭವಿಸುವ ಅನುಭವದಿಂದ, ಅವಳ ಸುತ್ತಮುತ್ತಲ ವಸ್ತುಗಳೂ ಸಹ ಚಿಂತೆಗೊಳಪಟ್ಟು ಸೌಂದರ್ಯದೊಡನೆ ಬೆಳಗತೊಡಗಿದುವು. ನಿಶ್ಯಬ್ದತೆಯಿಂದೊಡಗೂಡಿದ ಅಂಗಳವೂ, ಅಂಗಳದ ಬಾಗಿಲ ಹೊರಗಡೆ ಕಾಣಿಸಿಕೊಂಡ ಹಸುವೂ, ಅದರ ಸಮೀಪದಲ್ಲಿದ್ದ ಭಾವಿಯೂ, ಅದರ ಮೂಗ ಗೆಳೆಯ ಬಿಂದಿಗೆಯೂ——ಇವೆಲ್ಲವೂ ಕೂಡ ಅವಳೊಡನೆಯೇ ಸರಿಸಮಾನವಾದ ಅಂದ ಚಂದವನ್ನು ವಿಭಾಗಿಸಿಕೊಂಡವು. ತೆರೆದ ತೊಟ್ಟಿ, (ಅಂಗಳ) ಮೋಡ ಕವಿದ ಗಗನವೂ, ಹೊರಗೆ ಗಾಳಿಯಲ್ಲಿ ಅಲ್ಲಾಡುವ ಮರಗಳ ಶಬ್ದವೂ ಶೀಘ್ರದಲ್ಲಿ ಸುರಿಯಲಿರುವ ಮಳೆಯನ್ನು ಸೂಚಿಸುತ್ತಲಿದ್ದುವು.

"ಇದೀಗ ದೊಡ್ಡ ಮಳೆ ಬರುತ್ತದೆ" ಎಂದು ಚಿಂತಿಸಲಾರಂಭಿಸಿದಳು ಅಂಬುಜಮ್ಮ. ಈ ವೇಳೆಯನ್ನು ಬೇಡಿದವರಾರೀಗ ? ನಾನು ಹಪ್ಪಳಕ್ಕೆ (ಬೇಳೆ) ನೆನೆಸಲೆಂದು ಕಾದಿತ್ತೇನೋ ಈ ಹಾಳು ಮಳೆ........ನನಗಂತೂ ಇದೆಂತಹ ಹುಚ್ಚು ಮದುವೆ ನಡೆಯುತ್ತದೆಯೋ ಇಲ್ಲವೋ ಎಂದುದು ದೇವ ರಿಗೇ ಗೊತ್ತು. ಅಷ್ಟರೊಳಗಾಗಿ ನಾನಿಲ್ಲಿ ಹಪ್ಪಳಲಟ್ಟಿಸಲು ಪ್ರಾರಂಭಿಸಿ ಬಿಟ್ಟೆ. ಹಣ ಹಣವೆಂದಲ್ಲವೇ ಎಲ್ಲರೂ ಬಾಯಿ ಬಿಡುತ್ತಾರೆ ಈಗ. ವಿಷಯ ಹೇಗೆ ಮುಗಿಯುತ್ತದೆಯೋ ಗೊತ್ತಿಲ್ಲವಲ್ಲಾ!"

ಆಗ ಅಂಗಳದ ಬಾಗಿಲ ಮೂಲಕ ಮಳೆ ಗಾಳಿ ತಣ್ಣಗೆ ಹಜಾರದೊಳಗೆ ಬೀಸಲು, ಅಂಬುಜಮ್ಮನು ತನ್ನ ಕೆಲಸದ ನಡುವೆ ತಲೆಯೆತ್ತಿ ಗಗನವನ್ನು ದೃಷ್ಟಿಸಿದಳು

"ಈ ಮಳೆಯನ್ನು ಬೇಡಿದವರಾರೀಗ? ಅವರು ಬೇಗ ಹಿಂದಿರುಗಿ ಬರಬೇಕಲ್ಲಾ, ಮಳೆ ಪ್ರಾರಂಭವಾಗುವುದರೊಳಗಾಗಿ."

ಮಳೆ ಯಾವಾಗ ಸುರಿಯುವುದೋ ಎಂದು ಮೇಘ ಕೂಟವು ಹೆದರಿಸುತ್ತಿದ್ದಿತಾದುದರಿಂದ, ಅವಳು ಉದ್ದಿನ ಬೇಳೆಯೆಲ್ಲವನ್ನೂ ಪಕ್ಕದಲ್ಲಿದ್ದ ಪಾತ್ರೆಯಲ್ಲಿ ತುಂಬಿಕೊಂಡು ಒಳಗೆ ಹೋಗಲು ಎದ್ದಳು. ಆಗ ಅಂಗಳದ ಬಾಗಿಲ ಮೂಲಕ ಹದಿನಾಲ್ಕು ವರ್ಷದ ಹುಡುಗಿಯೊಬ್ಬಳು ತನ್ನ ಕೈಯ್ಯಲ್ಲಿ ಫಳ ಫಳನೆ ಹೊಳೆಯುವ ಹಿತ್ತಾಳೆ, ಕಂಚು ಪಾತ್ರೆಗಳ ಸಹಿತ ಒಳನುಗ್ಗಿದಳು. ಅವಳ ಕೈಗಳೂ, ಕಿರಿಗೆಯ ಅಂಚೂ, ಮೇಲುದಾವನಿಯೂ ನೆನೆದು, ಅವಳು ಅದೇ ತಾನೇ ಪಾತ್ರೆಗಳನ್ನು ತೊಳೆದಿರಬೇಕೆಂಬುದನ್ನು ಸ್ಪಷ್ಟಗೊಳಿಸಿದವು.

"ಅಮ್ಮಾ, ಪಾತ್ರೆಯೆಲ್ಲವನ್ನೂ ಬೆಳಗಿದುದಾಯಿತು. ಗುಡಿಗೆ ಹೋಗಿ ಬರುತ್ತೇನೆ. ಸುಬ್ಬಜ್ಜಿ ಕರೆಯುತ್ತಾರೆ." ಎಂದು ತನ್ನ ತಾಯೊಡನೆ ಅಂದಳವಳು.

ಏನೇ, ರತ್ನ? ಮಳೆಯಂತೂ ಬಲು ಜೋರಾಗಿ ಸುರಿಯುವಂತಿದೆಯಲ್ಲಾ, ಈಗ!" ಎಂದನ್ನುತ್ತಾ ಅವಳಮ್ಮನು, ತಲೆಯೆತ್ತಿ ಆಕಾಶವನ್ನು ನೋಡಿದಳು. ರತ್ನಳೂ ತಾಯಿಯನ್ನನುಸರಿಸಿ ಅದೇ ರೀತಿಯಲ್ಲಿ ನೋಡಿದಳು.

ರತ್ನಳು, ಅವಳಮ್ಮನು ಅವಳ ಪ್ರಾಯದಲ್ಲಿ ಹೇಗಿದ್ದಳೆಂದು ಊಹಿಸಬಹುದೋ ಅದೇ ರೀತಿ ತೋರಿದಳು. ನೋಡ ಕವಿದ ಆಕಾಶ, ವರ್ಷಗಳು ಕಳೆಯುತ್ತ ಕಳೆಯುತ್ತ ತಾರುಣ್ಯವು ಮುಚ್ಚಿಹೋಗುವಂತೆ ಮೇಘಗಳಿಂದ ಮುಚ್ಚಲ್ಪಟ್ಟಿದ್ದಿತು; ಬಳಿಕ ಆನಂದ ವೃಷ್ಟಿಯು ಚಿಂತೆಯ ಕುರುಹುಗಳನ್ನು ಮುಖದಿಂದ ಹೋಗಲಾಡಿಸಿಬಿಡುವಂತೆ, ಮಳೆಯು ಮೇಘಗಳನ್ನು ಚಿನ್ನಾಭಿನ್ನ ಮಾಡಿ ಓಡಿಸಿಬಿಡುತ್ತದೆ. ತಕ್ಷಣ ಹಚ್ಚನೆಯ ಹುಲ್ಲು ಹಾಸಿಗೆ, ಹೊಸದೊಂದು ತಾರುಣ್ಯವನ್ನು ತಾಳಿ ಬೆಳಗುತ್ತದೆ. ನಾಲ್ಕು ದಿಕ್ಕುಗಳೂ

ನಿಷ್ಕಳಂಕವಾಗಿ ಪ್ರಕಾಶಿಸುತ್ತದೆ. ಅದರಂತೆಯೇ ರತ್ನಳು ತನ್ನ ಯೌವನ ಸೌಂದರ್ಯದೊಡನೆ ಬೆಳಗುತ್ತಲಿದ್ದಳು. ಅಂಬುಜಮ್ಮನಿಗೂ ರತ್ನಳಿಗೂ ಇರುವ ಬಂಧವು, "ತಾಯಿ ಮಗಳು ಎಂಬುದೊಂದೇ ಬಾಂಧವ್ಯ ಮಾತ್ರ ವಲ್ಲ. ಮನಸ್ಸಿನೊಡನೆ ನೆನಪು ಹೆಣೆದುಕೊಂಡಿರುವಂತೆ ಅಂಬುಜಮ್ಮ ನೊಡನೆ ರತ್ನಳು ಹೆಣೆದುಕೊಂಡಿದ್ದಳು. ಈ ಅನ್ಯೋನ್ಯತೆಯಿಂದಲೋ ಎಂಬಂತೆ, ಅಂಬುಜಮ್ಮನು ತನ್ನ ಮಗಳ ನಿಜವಾದ ಹೆಸರು "ವಿಶಾಲಾಕ್ಷಿ" ಎಂದಿದ್ದರೂ ಕೂಡ ಅದಕ್ಕೆ ಕೊಂಚವೂ ಸಂಬಂಧವಿಲ್ಲದ "ರತ್ನ" ಳೆಂಬ ಮುದ್ದು ಹೆಸರಿನಿಂದ ಅವಳನ್ನು ಕರೆಯುತ್ತಲಿದ್ದಳು."

"ಇರಲೇನೀಗ. ಅಮ್ಮಾ ನಾನು ಗುಡಿಗೆ ಹೋಗಲೇ ಬೇಕು. ಎಂದು ಉತ್ಸಾಹದೊಡನೆ ರತ್ನಳು ಉತ್ತರವಿತ್ತಳು." ಗುಡಿಯು ಇಲ್ಲಿಂದ ಬಹಳ ದೂರವಿಲ್ಲ. ಹಾಗೆ ಮಳೆ ಬಂದರೆ ಬರಲೇನೀಗ. ಮಳೆಯಲ್ಲಿ ನೆನೆಯ ಬೇಕೆಂದರೆ ನನಗೆ ಬಲು ಆಸೆ. ಅದೆಷ್ಟೊಂದು ಶೋಕಾಗಿರುವುದು!........ ತಣ್ಣಗೆ ಗಾಳಿ ಬೀಸುತ್ತ....ಅದರ ಜೊತೆಗೆ ಮಳೆಯ ಸ್ನಾನ ಮಾಡಿದರೆ...."

"ಇನ್ನೂ ನೀನು ಹುಡುಗಾಟವನ್ನು ಬಿಡಲಿಲ್ಲ" ಎಂದು ಅವಳನ್ನು ಅಂಬುಜಮ್ಮನು ಖಂಡಿಸಿದಳು. "ಮದುವೆಯ ಸಮಯದಲ್ಲಿ ಮೈಗೇನಾ ದರೂ ಖಾಯಿಲೇಗೀಯಿಲೇ ಬಂದರೆ!"

"ಅದನ್ನು ಕುರಿತೆಲ್ಲಾ ನೀನು ಚಿಂತಿಸಬೇಡಮ್ಮಾ" ಎಂದು ಪ್ರತ್ಯು ತ್ತರವಿತ್ತಳು ರತ್ನ.

"ಇಷ್ಟರವರವಿಗೂ ನನಗಾಗಿ ಸುಬ್ಬಜ್ಜಿಯು ಕಾದಿರುವಳಲ್ಲಾ ಪಾಪ!" ಎಂದನ್ನುತ್ತಾ ಅವಳು, ತನ್ನ ಕೈಗಳಲ್ಲಿದ್ದ ಪಾತ್ರೆಗಳನ್ನು ಅವು ಗಳ ಸ್ಥಳಗಳಲ್ಲಿಟ್ಟು, ಮಳೆಯ ತುಂತುರು ತುಂತುರುಗಳನ್ನೂ ಒದ್ದೆ ಮಣ್ಣಿನ ಮೇಲೆ ಬೀಸುವ ಸುವಾಸನೆಯನ್ನೂ ಅನುಭವಿಸಬೇಕೆಂಬ ಮಹ ದೋತ್ಸಾಹದೊಡನೆ ಹೊರಗೆ ಹೊರಟಳು. ಗಗನದಲ್ಲಿ ಈಗಾಗಲೇ ಮೇಘ ಮಂಡಲವು ಪಸರಿಸಿತ್ತು. ಆದರೂ ಅಂಬುಜಮ್ಮನು, ಈ ರೀತಿಯಾಗಿ ಒಬ್ಬ ಮುದ್ದು ಮಗುವಿನ ಸ್ವಾತಂತ್ರ್ಯದೊಡನೆ ಹೋಗುತ್ತಲಿರುವ ರತ್ನ ಳನ್ನು ತಡೆಯಲೂ ಅಶಕ್ತಳಾಗಿ, ಅವಳನ್ನು ಸುಮ್ಮನೆ ದೃಷ್ಟಿಸುತ್ತ ನಿಂತಳು

"ಇನ್ನೂ ಕೂಡ ಇವಳು ಹುಡುಗಾಟವನ್ನು ಬಿಡಲೊಲ್ಲಳಲ್ಲಾ." ಎಂದು ಅವಳು ಹೋಗುವಾಗ ತನಗೆ ತಾನೇ ಅಂಬುಜಮ್ಮನು ಅಂದು ಕೊಂಡಳು. "ಇರಲಿ........ಹೀಗೆಯೇ ಇರಲಿ. ಇವಳ ಹುಡುಗಾಟ ಹೀಗೆ ನೆಲಸದಿದ್ದರೆ, ನಮ್ಮ ಬಡತನದ ಬಾಳು ಅದೆಷ್ಟೊಂದು ಕಷ್ಟತರ ವಾಗಿರುತ್ತಿತ್ತು! ಮನೆಯೆಲ್ಲವೂ ಒಂದೇದುಃಖಮಯವಾಗಿರುತ್ತಿತ್ತಲ್ಲಾ!.... ........" ಆಗ ಹೊರಗೆ ಹನಿ ಬೀಳಲಾರಂಭಿಸಲು, ಅಂಬುಜಮ್ಮನು ಪುನಃ ತನ್ನ ಸುತ್ತಮುತ್ತಲಿರುವ ವಿಷಯಗಳನ್ನು ಕುರಿತು ಜ್ಞಾಪಿಸಿಕೊಂಡಳು.

"ಈ ಮಳೆಯಲ್ಲವಳು ಹೋಗಿಬಿಟ್ಟಳಲ್ಲಾ............ನಾ ಹೇಳಿದರೂ ಕೇಳದೆ! ಮಕ್ಕಳು ಹೀಗಿದ್ದರೆ ನಾವೇನು ಮಾಡಬಲ್ಲೆವು!........ಇರಲಿ, ಗುಡಿಗೆ ಅವಳೆಲ್ಲಿ ಹೋಗುತ್ತಾಳೆ? ಹುಡುಗಾಟಕ್ಕಾಗಿ ಮಳೆಯಲ್ಲಿ ನೆನೆಯ ಬೇಕೆಂದು ಹೋಗುತ್ತಾಳೆ. ಆದರೂ, ಹೀಗೆ ಗುಡಿಗೆ ಬರುವವಳನ್ನು ನೋಡಿ, ದೇವರು ಸುಮ್ಮನಿರುವನೇ?............ಇನ್ನೂ ಹುಡುಗಾಟವನ್ನು ಅವಳು ಬಿಟ್ಟಿಲ್ಲ........ಕಪಟವೆಂಬುದನ್ನೇ ಅರಿಯಳು............ಅವಳಿಗೆ ತಕ್ಕಂತಹ ಗಂಡ ಸಿಗಬೇಕಲ್ಲಾ! ಅವಳ ಗುಣವನ್ನರಿತು, ಅವಳನ್ನು ಸರಿಯಾಗಿ ನಡೆ ಸಲು........ಹೀಗೆ ಮಳೆಯಲ್ಲಿ ಓಡಿಬಿಟ್ಟಳಲ್ಲಾ ಅವಳು!" ಎಂದು ಹಲವು ವಿಧಗಳಲ್ಲಿ ಚಿಂತಿಸುತ್ತಲಿದ್ದ ಅಂಬುಜಮ್ಮನು, ಈಗ ತನ್ನ ಮನೋಭಾವ ಗಳನ್ನು ಬಾಯಿ ಬಿಟ್ಟು ಹೇಳತೊಡಗಿದಳು. ಎಂದರೆ ಅವಳು ತನ್ನ ಮನಸ್ಸಿ ನಲ್ಲಿ ಪದೇ ಪದೇ ತೋರುವ, ಯೋಚಿಸುವುದರಿಂದಲೇ ಒಂದು ವಿಧವಾದ ಆತ್ಮ ತೃಪ್ತಿಯನ್ನು ಕೊಡುವ ಒಂದು ವಿಷಯವನ್ನು ಕುರಿತು ಯೋಚಿಸ ತೊಡಗಿದಳು.

"ಒಂದು ಮಗುವೆಂದರೆ ಅದು ಎಂಥಾ ಸಂಪತ್ತೆಂದು ಯಾರಿಗೆ ಗೊ ತ್ತುಂಟು? ಈಗೆಲ್ಲಾ ಏನೋ ಹೆಣ್ಣು ಮಕ್ಕಳ ಪಾಠಶಾಲೆಯಂತೆ, ಕಾಲೇ ಜಂತೆ ಅಲ್ಲಿ ಏನೇನೋ ಕಲಿಯುತ್ತೇವೆ ಆದರೆ ಉಪಯೋಗಕರವಾಗಿ, ಲೋಕದಲ್ಲಿ ಅವಶ್ಯವಾದದ್ದಾಗಿ ಏನಾದರೂ ಓದುತ್ತೇವೆಯೋ ಅವುಗಳಲ್ಲಿ ಸಾಕಲು ಬರುತ್ತದೆಯೋ? ಅಲ್ಲಿ ಓದುವಂತರಿಗಾದರೂ ಮಗುವನು ನೋಡಿ ಕೊಳ್ಳಲು ಬರುತ್ತದೆಯೋ ಇದೆಂಥಾ ಓದು! ಮೂರು ಕಾಸಿಗೆ ಪ್ರಯೋಜನ

ವಿಲ್ಲದ ಓದು ? ಮಗುವಿನ ಬೆಲೆಯೇ ತಿಳಿಯುವುದಿಲ್ಲ. ತನ್ನ ಧರ್ಮವೂ ತಿಳಿಯದೇ ಇರುವುದರಿಂದ ಸರಿಹೋಯ್ತು........"

ಇಷ್ಟರಲ್ಲಿಯೇ ಬೀದಿಯಲ್ಲಿ ಗಾಳಿಯು ಜೋರಾಗಿ ಬೀಸತೊಡಗಿತು. ಗುಡುಗಿನ ಶಬ್ದವು ಕಿವಿಯನ್ನು ಕಿವುಡು ಮಾಡಲು ಅಂಬುಜಮ್ಮನು ಬೆಚ್ಚಿ ಬಿದ್ದಳು. "ಅಯ್ಯೋ ಅಮ್ಮಾ!" ಎಂದು ಬೆದರಿದ ಅಂಬುಜಮ್ಮನು ಬಾಯಿಬಿಟ್ಟು ಕೂಗಿದಳು. ಮೋಡಗಳು ಹೀಗೆ ಕವಿದುಬಿಟ್ಟಿದೆಯಲ್ಲಾ, ಅವರು ಇನ್ನೂ ಹಿಂದಿರುಗಲಿಲ್ಲವಲ್ಲಾ! ಅವರು ಯಾವಾಗ ಬರುವರೋ ಏನೋ ? ಈ ಹೊತ್ತು ಅವರಿಗೆಷ್ಟು ಅಲೆದಾಟವೋ ಪಾಪ, ಕೆಲಸ ಹೇಗೆ ಮುಗಿಯಿತೋ ಒಂದೂ ತಿಳಿಯಲಿಲ್ಲವಲ್ಲಾ. ಆ ನಟರಾಜನೇ ಗತಿ........ ........" ಎಂದು ಹೇಳುತ್ತಲೇ ನಿಟ್ಟುಸಿರು ಗೈದಳು. ಮನೆಯ ಮುಂದೆ ಬಂದು ನಿಂತ ಎತ್ತಿನ ಗಾಡಿಯ ಶಬ್ದವು ಅವಳಿಗೆ ಕೇಳಿಸಿತು. "ಸರಿ ಪುಣ್ಯಕ್ಕೆ ಅವರು ಹಿಂದಿರುಗಿ ಬಂದುಬಿಟ್ಟರು!" ಎಂದು ಹೇಳುತ್ತಾ ಬೇಗ ಬೇಗನೆ ಬೀದಿಯ ಬಾಗಿಲ ಕಡೆಗೆ ಓಡಿದಳು. ತನ್ನ ಮುದ್ದುಗುವರಿ, ಪತಿ, ಈರ್ವರೂ ಆ ಮಳೆ ರಾತ್ರಿ ಮನೆಯಲ್ಲಿಲ್ಲದೆ ಅವಳೊಬ್ಬಳೇ ಒಂಟಿ ಯಾಗಿದ್ದುದರಿಂದ ಚಿಂತಿಸುತ್ತಿದ್ದಳು. ಆದರೆ ಈಗ ಪತಿಯು ಹಿಂದಿರುಗಲು ಮನೆಗೆ ಬಾರದ ಮಗಳ ವಿಷಯದಲ್ಲಿ ಸ್ವಲ್ಪ ಧೈರ್ಯ ಬಂದಿತು.

ಬೀದಿಯ ಬಾಗಿಲಿಗೆ ಬಂದಾಗ ಅವಳ ಪತಿ ಜಾನಕಿ ರಾಮೈಯ್ಯರೂ ಒಳಹೊಕ್ಕರು. ಅವರು ಒಳ್ಳೆಯ ಧೃಡಗಾತ್ರರಾದ ಮನುಷ್ಯರು. ಆದರೆ ಅವರ ಮುಖವು, ಬಾಳ್ವೆಯ ದುಃಖ ಚಿಹ್ನೆಗಳನ್ನು ತಾಳಿ ಬಳಲಿದಂತೆ ತೋರುತ್ತಿತ್ತು. ಅವರು ಆಗ ಇದ್ದ ರೀತಿನೀತಿಯೂ, ಉಡುಪೂ ಅದೇ ತಾನೇ ಗಾಳಿಮಳೆಯಿಂದ ತೊಯ್ದುಬಂದಂತೆ ತೋರಿತು.

"ಅಬ್ಬಾ ಕಟ್ಟಕಡೆಗೆ ಮನೆಗೆ ಬಂದು ತಲುಪಿದುದಾಯಿತು." ಎಂದ ವರು ತಮ್ಮ ವಿಶಾಲ ಎದೆಯು ಏರಿಳಿಯುವಂತೆ ದೊಡ್ಡದೊಂದು ನಿಟ್ಟು ಸಿರು ಬಿಟ್ಟರು. ಬಳಿಕ ಮಳೆ ತುಂತುರು ಹನಿಗಳಿಂದ ಕೊಂಚ ನೆನೆದಿದ್ದ ಅಂಗವಸ್ತ್ರವನ್ನು ಭುಜದ ಮೇಲಿಂದ ತೆಗೆದು ಅದರಿಂದ ಮುಖ ಒರೆಸಿ ಕೊಳ್ಳುತ್ತ ಒಳಹೊಕ್ಕರು ಅಂಬುಜಮ್ಮ ಅವರನ್ನನುಸರಿಸಿದಳು. ಅದೇ

ಸಮಯ ಕೊಟ್ಟಿಗೆಗೆ ಓಡಿಸಲ್ಪಟ್ಟ ಎತ್ತಿನ ಗಾಡಿಯು ಅಂಗಳದ ಬಾಗಿಲ ಮೂಲಕ ಕಾಣಿಸಿಕೊಂಡಿತು.

" ಕೆಲಸವೇನಾಯಿತು ? " ಎಂದು ಕಾತುರತೆಯೊಡನೆ ಅವರನ್ನು ಅಂಬುಜಮ್ಮ ವಿಚಾರಿಸಲಾರಂಭಿಸಿದಳು.

" ಆ ಕದವನ್ನೇಕೆ ತೆರೆದಿಟ್ಟಿರುವೆ ? ಗಾಳಿ ಮಳೆಯಲ್ಲಿ ಹಾಳಾಗುವುದಲ್ಲಾ ಎಂದೇನು ? " ಎಂದು, ಅವಳು ಕೇಳಿದುದಕ್ಕೆ ಉತ್ತರವೀಯದೆ ಕೊಂಚ ಸಿಡುಕಿನಿಂದ ನುಡಿದರು.

ಇದಕ್ಕಿದಿರು ಮಾತನಾಡದೆ ಅಂಬುಜಮ್ಮನು ತನ್ನ ಮೇಲೆ ಬೀಳುವ ಹನಿಗಳನ್ನೂ ಲೆಕ್ಕಿಸದೆ, ಅಂಗಳದ ಕದವನ್ನು ಮುಚ್ಚಿದಳು. ಆಗ ಗಾಡಿಯವನು ಬಾಗಿಲ ಹತ್ತಿರ ನಿಂತಿರಲು " ಸರಿ, ನೀನು ಮನೆಗೆ ಹೋಗಬಹುದು " ಎಂದವನಿಗೆ ಅಪ್ಪಣೆಯಿತ್ತಳು. ಹೀಗೆ ಅವನು ಮನೆಗೆ ಹೋಗಲು ಆತುರಪಡುವುದನ್ನು ಕಂಡೊಡನೆಯೇ ಅವಳಿಗೆ " ರತ್ನ, ಇನ್ನೂ ಮನೆಗೆ ಬರಲಿಲ್ಲವಲ್ಲಾ ! " ಎಂಬ ಚಿಂತೆ ತಲೆದೋರಿತು. " ಅವಳನ್ನು ಈ ಕತ್ತಲೆಯಲ್ಲೂ ಮಳೆಯಲ್ಲೂ ಹೋಗಗೊಟ್ಟೆನಲ್ಲಾ " ಎಂದಂದುಕೊಂಡಳು. " ಆದರೂ........ಹೀಗೆ, ಎಳೆಗೂಸಿನ ಸ್ವಭಾವಕ್ಕನುಗುಣವಾಗಿ ಮಳೆಯಲ್ಲಿ ಗುಡಿಗೆ ಹೋದ ಆ ಹುಡಿಗಿಯ ಮೇಲೆ ದೇವರು ದಯೆತೋರಲಾರನೇ ? ಅವಳ ಮದುವೆ ಸಾಂಗವಾಗಿ ನಡೆಯಬಾರದೇ ? " ಎಂದಂದುಕೊಂಡಳು.

ಆ ಬಳಿಕ ಅಂಬುಜಮ್ಮನು ತೆರೆದಿದ್ದ ಅಂಗಳದ ಬಾಗಿಲನ್ನು ಮುಚ್ಚಿ ಅಗಣಿ ಹಾಕಿದಳು. ಬಳಿಕ ಅವಳು ಹಿಂದಿರುಗುವುದರೊಳಗಾಗಿ ಅವಳ ಪತಿಯು ಬಟ್ಟೆ ಬದಲಾಯಿಸಿಕೊಳ್ಳಲು ತನ್ನ ಕೊಠಡಿಗೆ ಹೋಗಿದ್ದರು. ಆ ಕೊಠಡಿಯಲ್ಲಿ ದೀಪವಿರಲಿಲ್ಲ. ಹಾಗೂ ಅವರು ಅಷ್ಟು ಅವಸರವಾಗಿ ಅಲ್ಲಿಗೆ ಹೋದ ಕಾರಣವೇನು ? ತಾನು ಅವರನ್ನು ಕೂಡಲೇ ಮಾತಿಗೆಳೆಯಬಾರದೆಂದೇ ?

ಅವಳು, ಕೈಯ್ಯಲ್ಲೊಂದು ಲಾಂದ್ರವನ್ನು ತೆಗೆದುಕೊಂಡು ಚಿಂತಿಸುತ್ತಾ, ಕೊಠಡಿಯೊಳಗೆ ಪ್ರವೇಶಿಸಿದಳು. ಅವಳ ಮನಃಕ್ಲೇಶದ ದೆಸೆ

ಯಿಂದ ಕೈಗಳು ಸ್ವಲ್ಪ ನಡುಗಲು, ಕೊಠಡಿಯಲ್ಲಿದ್ದ ಹಲವು ಸಾಮಾನುಗಳ ನೆರಳುಗಳು ವಿಪರೀತ ಆಕಾರಗಳನ್ನು ತಾಳಿ, ನಾಟ್ಯವಾಡಲಾರಂಭಿಸಿದವು.

"ಹೋದ ಕೆಲಸ ಮುಗಿಯಿತೇ ?" ಎಂದವರನ್ನವಳು ಪ್ರಶ್ನಿಸಿದಳು.

ಅವರು ಉತ್ತರ ಕೊಡಲಿಲ್ಲ. ಮತ್ತೆರಡು ಸಲ ಕೇಳಿಯೂ ಕೂಡ ಅವರು ಮೌನವನ್ನವಲಂಬಿಸಿದರು. ಅಷ್ಟರ ಮೇಲೆ ಅವಳೂ ಮಾತ ನಾಡದೆ, ಅವರಾಗಿ ಯಾವಾಗ ಮಾತನಾಡಲು ತೊಡಗುವರೋ ಎಂದು ಕಾಯುತ್ತಾ, ಅವರ ಸಮೀಪದಲ್ಲಿ ನಿಂತಿದ್ದಳು.

ಮನೆಯ ಹೊರಗೆ, ಗಾಳಿಯ ಹೊಡೆತವು ಸ್ವಲ್ಪ ಕಡಿಮೆಯಾಯಿತು. ಯಾವಾಗ ಪ್ರಾರಂಭಿಸಿಬಿಡುವುದೋ ಎಂದು ಹೆದರಿಸುತ್ತಲಿದ್ದ ಮಳೆಯು ಇನ್ನೂ ಪ್ರಾರಂಭವಾಗಿರಲಿಲ್ಲ. ಒಂದೆರಡು ಹನಿಗಳು ಮಾತ್ರ ಬೀಳುತ್ತಿದ್ದವು. ಮಳೆಯು ಒಂದೆರಡು ಘಂಟೆಗಳ ಕಾಲ ಸುರಿಯಲಾರದೆಂದು ವೇದ್ಯವಾಯಿತು. ಆದುದರಿಂದ ರತ್ನಳು ಅಷ್ಟರೊಳಗಾಗಿ ಹಿಂದಿರುಗಿ ಬಂದು ಬಿಡಬಹುದು.

"ರತ್ನಳಿಲ್ಲಿಲ್ಲ ?" ಎಂದು ಕೊನೆಗೆ ತಾವಾಗಿಯೇ ಮಾತಿಗೆ ಪ್ರಾರಂಭಿಸಿದರು ಕುರ್ಚಿಯೊಂದರಲ್ಲಿ ಕುಳಿತಿದ್ದ ಐಯ್ಯರು.

"ಗುಡಿಗೆ ಹೋಗಿದ್ದಾಳೆ, ಸುಬ್ಬಜ್ಜಿಯೊಡನೆ.

"ಗುಡಿಗಾ ?........ಈ ಗಾಳಿಮಳೆಯಲ್ಲಿ ನೀನವಳನ್ನು ಹೋಗಗೊಡಿಸಿದೆಯೇನು ? ನಿಮಗೆಷ್ಟು ಹೇಳಿದರೂ ತಿಳಿಯುವುದಿಲ್ಲ ! ಅದೆಂತಹ ಗುಣವೋ ನಿಮ್ಮದು ?"

"ಹೌದೌದು, ನಿಮ್ಮಂತಹವರೊಬ್ಬರೊಡನೆ ಇದ್ದರೆ, ಬುದ್ಧಿಯೂ ಕೆಟ್ಟುಹೋಗುತ್ತದೆ, ಹುಚ್ಚೂ ಹಿಡಿಯುತ್ತದೆ. ಕಡಲಂಗುಡಿಗೆ ಹೋಗಿದ್ದಿರಲ್ಲಾ; ಅಲ್ಲಿ ಕಾರ್ಯವೇನಾಯಿತೆಂದು ಕೇಳಿವೆನಲ್ಲಾ; ಅದಕ್ಕೇನಾದರೂ ಉತ್ತರ ಹೇಳಿದಿರೇನು ?"

ಜಾನಕಿ ರಾಮಯ್ಯರಿಗೆ ಅಂದಿನ ಅಲೆದಾಟದಿಂದ ಬಹಳ ಬೇಸರಿಕೆಯೂ, ಆಯಾಸವೂ ಎನಿಸಿದುದು ಸಹಜವೇನೋ ಹೌದು. ಬೆಳ್ಳಂಬೆಳಿಗ್ಗೆ ಎಚ್ಚೆತ್ತು ಪಕ್ಕದ ಗ್ರಾಮವಾದ ಕಡಲಂಗುಡಿಗೆ ಹೋಗಿ ದಿನವೆಲ್ಲಾ

ಅಲೆದಲೆದು, ಕೊನೆಗೆ ಮಳೆಗೂ ಸಿಲುಕಿ ಕತ್ತಲೆಯ ಹೊತ್ತಿಗೆ ಮನೆಯನ್ನು ಸೇರಿದರೆ ಯಾರಿಗೆ ತಾನೇ ಬೇಸರವಾಗಲಾರದು ?

"ಕೆಲಸವೇನಾಯಿತೇ ? ಏನಾಗುವುದು ಮತ್ತೆ? ಎಲ್ಲವೂ ಹಣದಲ್ಲೇ ಮುಗಿಯುವುದು ಸಾಧ್ಯ. ಇಡೀ ಪ್ರಪಂಚವೇ ಹಣದಲ್ಲಲ್ಲವೇ ಮುಳುಗಿದೆ ? ನೀನು ನಿನ್ನ ಮಗಳನ್ನು ಮಳೆಯಲ್ಲೂ ಗಾಳಿಯಲ್ಲೂ ಗುಡಿಗೆ ಕಳುಹಿಸಬಹುದು. ಆದರೆ ಅದರಿಂದೇನೂ ಆಗಲಾರದಲ್ಲವೇ ! ಗುಡಿಯು ನಿನ್ನ ದೇವರಿಗೇ ಬಿಟ್ಟುಬಿಡು—ಹಣದ ವಿಷಯ ಗಮನಿಸೀಗ ! ಆ ಮಂದರೆ —ಆ ಪಕ್ಕದ ಮನೆಯ ಅಜ್ಜಿ ಬರಲಿ ಅವಳಿಗೆ ಹೇಳುತ್ತೇನೆ. ರತ್ನಳನ್ನು ಇನ್ನುಮೇಲೆ ಗುಡಿಗೆ ಕರೆದುಕೊಂಡು ಹೋಗಬಾರದೆಂದು. ಇದರಲ್ಲೆಲ್ಲ ಅವಳೇಕೆ ತಲೆ ಇಡಬೇಕು ? ಹೇಗೂ ಈ ದಿನ ರತ್ನ ಮಳೆಯಲ್ಲಿ ಹೋಗಿಬಿಟ್ಟಳು ; ಈ ದಿನ ಏನು ಮಾಡಲೂ ಸಾಧ್ಯವಿಲ್ಲ. ಸರಿ, ರತ್ನಳೇ ಮನೆಯಲ್ಲಿಲ್ಲವಲ್ಲ. ಬಾಯಿ ಬಿಟ್ಟು ಮಾತನಾಡುತ್ತೇನೆ ಕೇಳು ನಿನ್ನ ಹತ್ತಿರ ಎಲ್ಲವನ್ನೂ ಹೇಳಿಬಿಡುತ್ತೇನೆ."

ಹೀಗೆ ಹೇಳಿ ಜಾನಕೀ ರಾಮಯ್ಯರು ಕುರ್ಚಿಯಿಂದೆದ್ದರು. ಮೇಜಿನ ಮೇಲಿದ್ದ ಪುಸ್ತಕ ಒಂದನ್ನು ನಿಷ್ಕಾರಣವಾಗಿ ಕೈಯಲ್ಲಿ ತೆಗೆದುಕೊಂಡು ಕೊಠಡಿಯ ನಡುವೆ ಅಲ್ಲಿಂದಿಲ್ಲಿಗೆ ನಡೆಯಲಾರಂಭಿಸಿದರು. ಅವರು ನಡೆಯುವಾಗ ನೆಲದ ಮೇಲೂ ಗೋಡೆಯ ಮೇಲೂ ಬಿದ್ದ ಅವರ ನೆರಳಿನ ಚಲನವು ಲಾಂದ್ರದ ಮಂಕು ಮಂಕಾದ ಬೆಳಕಿನಲ್ಲಿ ಯಾವುದೋವೊಂದು ಛಾಯಾಭೂತವು ಚಲಿಸುವಂತೆ ತೋರಿತು. ಅವರ ಮೆಲುದನಿಯೂ ಸಹ ಅದಕ್ಕೆ ಹೊಂದಿಕೊಂಡಿತ್ತು.

"ಸರಿ, ನಾವೀಗ ಗಟ್ಟಿಯಾಗಿ ಮಾತನಾಡಬಹುದು" ಎಂದು ತೃಪ್ತಿಯೊಡನೆ ಅವರಂದರು. ಆದರೆ ಮನದೊಳಗೆ ಅದೇಕೋ ಹೆದರಿದವರಂತೆ ತೋರಿತು. "ಅವಳು ಯಾವಾಗ ಹಿಂದಿರುಗಿ ಬರುವಳು ?" ಎಂದು ತಮ್ಮ ಹೆಂಡತಿಯನ್ನು ಕೇಳಿದರು.

"ಇದೇ ತಾನೆ ಹೋದಳು ; ಬರಲು ಕೊಂಚ ಹೊತ್ತಾಗಬಹುದು.

ತಾವು ಗಟ್ಟಿಯಾಗಿ ಮಾತನಾಡಬಹುದೆಂಬ ಭಾವನೆಯನ್ನು ವ್ಯಕ್ತಪಡಿಸಿದರೂ ಕೂಡ "ರತ್ನ ಯಾವಾಗ ಬರುವಳು ಎಂಬ ಮುಂದಾ

ಲೋಚನೆ ಮಾತ್ರವಲ್ಲದೆ, ಮೆಲುದನಿಯಲ್ಲಿಯೇ ಮಾತನಾಡಿದರು. ಅವರ ದನಿ ಕುಗ್ಗಿದರೂ, ಅವರ ಮಾತುಗಳು ಹೇಗೋ ಲಾಂದ್ರದ ಮಂದ ಬೆಳಕಿನೊಡನೆ ಕಲೆತು, ಮತ್ತು ನಿಶ್ಶಬ್ದವಾಗಿ ಚಲಿಸುವ ಅವರ ನೆರಳೊಡನೆ ಕಲೆತು ಅಸಾಧಾರಣವಾದೊಂದು ಶಕ್ತಿಹೊಂದಿ, ಕೊಠಡಿಯಲ್ಲಿ ಪಸರಿಸಿತು.

ಇಷ್ಟರವರವಿಗೂ ದೀಪವನ್ನು ಕೈಯಲ್ಲಿ ಹಿಡಿದಿದ್ದ ಅಂಬುಜಮ್ಮನು. ಇಗ ಉದ್ಭವಿಸಿದ ಚಿಂತೆಯಿಂದ ಆ ಸಣ್ಣ ದೀಪವೂ ಭಾರವಾದೊಂದು ಹೊರೆಯಂತೆ, ಮೇಜಿನ ಮೇಲಿಟ್ಟು, ಅದೇ ಮೇಜಿನ ಮೇಲೆ ಕೈ ಊರಿಕೊಂಡು, ಯಜಮಾನರು ಏನು ಹೇಳುವರೋ ಎಂದು ಇದಿರು ನೋಡುತ್ತ ನಿಂತಳು.

"ನಾನು ನನ್ನ ಮನಸ್ಸಿನಲ್ಲಿ ಇದನ್ನು ಅಂದುಕೊಂಡುದೇ ಪಾಪಕರವಾಗಿರಬಹುದು." ಎಂದು ಗದ್ಗದಸ್ವರದಲ್ಲಿ ಜಾನಕೀರಾಮಯ್ಯರು ಪ್ರಾರಂಭಿಸಿದರು. "ಇದನ್ನು ನಾನು ಬಹಳ ದಿನಗಳಿಂದ ನನ್ನ ಮನಸ್ಸಿನೊಳಗೆಯೇ ಮಡುಗಿಕೊಂಡು ಬಿಟ್ಟೆ. ಇದು ಎಡೆಬಿಡದೆ ನನ್ನ ಮನಸ್ಸನ್ನು ಪೀಡಿಸುತ್ತಲೇ ಇತ್ತು............ಕೆಲ ಸಮಯ ನನಗೆ ತೋರುತ್ತದೆ; ರತ್ನಳ ಜೊತೆಗೇ ನಮ್ಮ ದುರದೃಷ್ಟವೆಲ್ಲವೂ ನಮ್ಮನ್ನು ಬಂದು ಸೇರಿತೆಂದು........"

ಆಗ ಗಗನದಲ್ಲೊಂದು ಮಿಂಚು ಹೊಳೆಯಲು, ಕ್ಷಣಕಾಲ ಆ ಕೊಠಡಿಯೆಲ್ಲವೂ ಪ್ರಕಾಶಮಯವಾಯಿತು. ಆ ಬೆಳಕಿನಲ್ಲಿ ಅಂಬುಜಮ್ಮನು, ಆ ಮಿಂಚು ತನ್ನ ಮೇಲೆಯೇ ಹೊಳೆಯಿತೋ ಎಂಬಂತೆ, ದೊಡ್ಡದೊಂದು ನಿಟ್ಟುಸಿರನ್ನು ಬಿಟ್ಟುದನ್ನು ಜಾನಕಿರಾಮಯ್ಯರು ಕಂಡರು.

"ಹೌದು, ನಾನು ಪಾಪಿ. ನನಗೆ ಈ ಯೋಚನೆಯು ಕೆಲಸಮಯ ತೋರಿದುದುಂಟು. ಅದನ್ನು ಮರೆಮಾಚದೆ ನಿನ್ನ ಹತ್ತಿರ ಹೇಳಿಬಿಟ್ಟೆ. ಆದರೆ ಅದಕ್ಕಾಗಿ ನಾನು ರತ್ನಳನ್ನು ನಿಂದಿಸಲಿಲ್ಲ. ನನ್ನನ್ನೇ ನಿಂದಿಸಿಕೊಳ್ಳುತ್ತೇನೆ, ನಿನ್ನನ್ನೂ ನಿಂದಿಸುತ್ತೇನೆ, ಭಗವಂತನನ್ನೂ, ನಿಂದಿಸುತ್ತೇನೆ. ........"

ಜಾನಕಿರಾಮಯ್ಯರು ದೀಪದ ಸಮೀಪದಲ್ಲಿ ಮೇಜಿನ ಮೇಲೆ ತಮ್ಮ ಕೈಗಳನ್ನು ಇಟ್ಟು, ತಮ್ಮನ್ನು ಸ್ವಲ್ಪ ಆಶ್ವಾಸಪಡಿಸಿಕೊಂಡರು.

“ಹೌದು, ನಿನ್ನನ್ನು ನಿಂದಿಸುತ್ತೇನೆ. ನಿನ್ನ ಮಾತನ್ನು ಕೇಳಿ ಅಲ್ಲವೇ ನಾವು ತಿರುಪತಿಗೆ ಹೋದೆವು? ರಾಮೇಶ್ವರಕ್ಕೆ ಹೋದೆವು? ನೀನು ಹೇಳಿಯಲ್ಲವೇ ಎಲ್ಲರಿಗೂ ಪ್ರಾರ್ಥಿಸಿಕೊಂಡೆವು?”

“ಪ್ರಾರ್ಥನೆಗೇ ಮತ್ತೆ ಫಲ ದೊರಕಿತಲ್ಲಾ?” ಎಂದು ಹೇಳಲು ಅಂಬುಜಳು ಬಾಯಿ ತೆರೆದಳು. ಆದರೆ ಹೇಳಲಿಲ್ಲ. ಅದಕ್ಕೆ ಧೈರ್ಯಸಾಲ ಲಿಲ್ಲವೋ, ಅಥವಾ ಅದಾವಕಾರಣದಿಂದಲೋ ಹೇಳಲು ಮನ ಬರಲಿಲ್ಲವೋ ತಿಳಿಯದು!

“ದೇವರು....ಪ್ರಾರ್ಥನೆಗೆ—ಎಲ್ಲವೂ ಸುಳ್ಳು. ಎಲ್ಲವೂ ಮೋಸ” ಎಂದು ಪುನಃ ಐಯ್ಯರು ಹೇಳಿದರು. “ಮಗುವಿಗಾಗಿ ಪ್ರಾರ್ಥಿಸಿಕೊಂಡೆವು. ಮಗು ದೊರಕಿತು, ರತ್ನ ಹುಟ್ಟಿದಳು. ನಮ್ಮ ಐಶ್ವರ್ಯವೂ ನಮ್ಮನ್ನಗ ಲಿತು. ದೇವರು ನಮ್ಮ ಮೇಲೆ ಒಂದು ತಮಾಷೆ ಆಟವನ್ನಾಡಿದ........”

ಈ ಮಾತಿನ ಬಳಿಕ ಜಾನಕೀರಾಮಯ್ಯರು ಕೊಂಚ ಕಾಲ ತಮ್ಮ ಮಾತನ್ನು ನಿಲ್ಲಿಸಿದರು. ಏಕೆಂದರೆ, ಆ ಸಮಯ ಗಡಗಡವೆಂದು, ಗಗನ ದಿಂದ ಭೂಮಿಗೆ ಧುಮುಕಿದಂತೆ ಆ ಮಂದ ಬೆಳಕಿನ ಕೊಠಡಿಯಲ್ಲಿ ಮೆಲು ದನಿಯಲ್ಲಿ ಉಚ್ಚರಿಸಲ್ಪಡುವ ತಂದೆಯೊಬ್ಬರ ಏಮಾರಿಕೆಯ ವಾರ್ತೆಗಳು ಉಗ್ರವಾಗಿ ದೇವರ ಕಿವಿಯಲ್ಲೇ ಹೇಳಲ್ಪಡುವಂತೆ, ಗುಡುಗೊಂದು ಗುಡಿ ಗಿತು. ಆ ಗುಡುಗು ಮುಗಿಯುವ ವರೆಗೆ ಕಾದಿದ್ದು, ಬಳಿಕ ಜಾನಕೀ ರಾಮಯ್ಯರು ಪುನಃ ಮಾತಿಗೆ ಪ್ರಾರಂಭಿಸಿದರು.

“ಹೌದು, ನನಗಾಗಿ ಹೇಳಲಿಲ್ಲ. ರತ್ನಳಿಗಾಗಿಯೇ ಹೇಳುತ್ತೇನೆ. ಮಗುವಿಲ್ಲದಿದ್ದಾಗ ನಮಗೆ ಐಶ್ವರ್ಯವಿದ್ದಿತು. ಆಗ ಇದ್ದು ಏನು ಫಲ? ಬಳಿಕ ಮುದ್ದು ಮಗು ಒಂದನ್ನು ಪಡೆದೆವು. ಆಗ ಐಶ್ವರ್ಯ ಕುಗ್ಗಿತು, ಅಳಿದೂ ಹೋಯಿತು. ಬರೀ ಬಡತನ! ಬಡತನದಲ್ಲಿ ಬೆಳೆಯುವುದಕ್ಕಾಗಿ ಹುಟ್ಟಿದ ಮಗು ವರವೇ? ನಾವು ದೇವರಲ್ಲಿ ವರ ಬೇಡಿದೆವು. ಆತ ನಮ್ಮನ್ನು ಶಪಿಸಿದ. ರತ್ನಳ ಮೇಲೆ ನಾವಿಟ್ಟ ಆಶಾಭಾವನೆಗಳೆಲ್ಲವೂ ಹೇಗೆ ಮೋಸ ವಾದುವು! ಪಾತ್ರೆ ಉಜ್ಜುವುದರಿಂದ ಹಿಡಿದು ಎಲ್ಲವನ್ನೂ ಮಗುವೇ ಮಾಡುತ್ತಾಳೆ!”

ಈ ಸಮಯದಲ್ಲಿ ಸುಯ್, ಸುಯ್........ಎಂದು ಹೊರಗೆ ಗಾಳಿಯು ಬೀಸಿತು. ಛಟ, ಛಟ, ಛಟವೆಂದು ಪ್ರಮಾದವಾದ ಆರ್ಭಟದೊಡನೆ, ಮಳೆ ಸುರಿಯಲಾರಂಭಿಸಿತು. ಅಂಬುಜಳಿಗೆ ರತ್ನಳ ಮದುವೆಯ ವಿಷಯವಾದ ಚಿಂತೆ ಅಧಿಕವಾಯಿತು.

" ರತ್ನ ಈಗ ಬಂದುಬಿಟ್ಟಾಳು. ಅಷ್ಟರೊಳಗಾಗಿ ನಡೆದುದನ್ನು ಹೇಳಬಾರದೆ ? "

" ಹಣವೂ, ಸುಖವೂ ನೆರೆದ ನಮ್ಮ ಮನೆಯಲ್ಲಿ ಹುಟ್ಟಿ ಅವಳ ಗತಿ ಏನಾಯಿತೀಗ ! ಈಗ ಅವಳ ಮದುವೆಯನ್ನು ಸಾಂಗವಾಗಿ ನಡೆಸಲು ಹಣವಿಲ್ಲ........ಏನು ನಡೆಯಿತೆ ?—ಬೇರೇನು ಇದ್ದೀತು ? ಮಾತಿನಲ್ಲಿ ಎಲ್ಲರೂ ಸಭ್ಯಸ್ತರೇ. ಅದೂ ಕೃಷ್ಣಮೂರ್ತಿ ಶಾಸ್ತ್ರಿಗಳ ವಿಷಯ ಅವರಿಗೆ ಬಹಳ ಇಷ್ಟಪಟ್ಟಿದೆಯಂತೆ. ಜಾತಕ ಹೋಲಿಕೆ ಎಲ್ಲವೂ ಬಹಳ ಚೆನ್ನಾಗಿ ಹೊಂದಿದೆಯೆಂದರು. ನನ್ನ ಮನಸ್ಸಿಗೂ ಎಲ್ಲವೂ ಬಹಳ ಚೆನ್ನಾಗಿ ಸೇರಿದೆ........ ಆದರೆ ಹಣ, ಹಣ, ಹಣ ! ಹಣಕ್ಕೆ ನಾನೆಲ್ಲಿಗೆ ಹೋಗಲಿ ? "

ಜಾನಕಿರಾಮಯ್ಯರು, ತಮ್ಮ ಮನಸ್ಸೇಚ್ಛೆಯು ಉದ್ಭವಿಸಿದ ವೇಗದಲ್ಲಿ, ಕುಣಿಯಲಾರಂಭಿಸಿದವರಂತೆ ನೆಗೆದು ವೇಗವಾಗಿ ನಡೆಯಲಾರಂಭಿಸಿದರು.

" ದಿನವೆಲ್ಲಾ ಅಲೆದಲೆದು, ಕೊನೆಗೆ ನೆಲಗಳನ್ನೂ ಮಾರಿದುದಾಯಿತು. ಹತ್ತು ವರ್ಷಗಳಿಂದ ಮಾರದ ನೆಲವನ್ನೂ ಈಗ ಮಾರಿದುದಾಯಿತು. ಇನ್ನು ಮೇಲೇನಂತೆ ? ಕೃಷ್ಣಮೂರ್ತಿ ಶಾಸ್ತ್ರಿಯನ್ನು ನೋಡಿದೆ. ಮುಹೂರ್ತವನ್ನು ಗೊತ್ತುಮಾಡಿ ಬಿಟ್ಟರಾಯಿತು........"

" ಅಬ್ಬಾ! ಅವರೂ, ಅದನ್ನು ಬೇಗ ಹೇಳಿರಬಾರದೇ ? "

" ಅವಳಲ್ಲಿ ನಾವಿಟ್ಟಿದ್ದ ಆಸೆಯೂ ಪ್ರೇಮವೂ ಅವಳಿಗೆ ಅಲ್ಲೂ ಸಿಗಬೇಕು ! "

" ದೇವರೇ ಗತಿ ! " ಎಂದು ಅಂಬುಜಮ್ಮನು ಅತ್ಯಾನಂದದೊಡನೆ ನುಡಿದಳು, "............" ಆದರೂ ನನ್ನನ್ನು ಹೀಗೆ ಹೆದರಿಸಿಬಿಟ್ಟಿರಲ್ಲಾ! ಕೆಲಸವೆಲ್ಲವನ್ನೂ ಮುಗಿಸಿಕೊಂಡು ಬಂದಿರಲ್ಲಾ, ಬಂದ ಕೂಡಲೇ ಹೇಳಿರಬಾರದೇ ?

ಜಾನಕೀರಾಮಯ್ಯರು ಮುಂದುವರಿದು ಮಾತಾಡುವಲ್ಲಿ ಅವರ ದನಿ ಕುಗ್ಗಿತು.

" ನಾನು ಯಾವುದೋ ಪಾಪ ಮಾಡಿರಬೇಕು. ಇಲ್ಲದಿದ್ದರೆ ನನಗೇಕೆ ಈ ಭಾವನೆಗಳು ತೋರಬೇಕು ?........ಹತ್ತು ವರ್ಷಗಳಿಂದಲೂ ಈ ಮುಗಿಯದ ತೊಂದರೆ ! ಅದರ ಬಳಿಕ, ನಾವು ನಮ್ಮ ಮುದ್ದುಗುವರಿಯನ್ನು ಕಳೆದುಕೊಳ್ಳುವುದಕ್ಕಾಗಿ ಎಲ್ಲವನ್ನೂ ಕಳೆದುಕೊಳ್ಳಬೇಕಾಯಿತು ! ಅವಳು ನಮ್ಮ ಮನೆಯನ್ನು ಬಿಟ್ಟು ಹೋಗುತ್ತಾಳೆ. ಆ ದುಃಖದೊಡನೆ ಈ ಕಷ್ಟವೂ ಕೂಡಿಬಂದಿದೆ ! ನಾನು ಮಾಡಿದ ಪಾಪ !

" ಈ ದಿನ ನೀವು ಬಹಳ ಅಲೆದಾಡಿರಬೇಕಲ್ಲವೇ ? ಒಳ್ಳೆಯ ಸಮಯಕ್ಕೆ, ನನ್ನನ್ನೂ ಕೇಳಿ ಬಳಿಕ ಮಾಡೋಣವೆಂದಿರದೆ ನೀವೇ ಒಮ್ಮೆಲೆ ಕೆಲಸ ಮುಗಿಸಿಕೊಂಡು ಬಂದಿರಲ್ಲಾ! ಹಾಗೂ, ಒಂದು ನಿಮಿಷದಲ್ಲಿ ಹೀಗೆ ನನ್ನನ್ನು ಹೆದರಿಸಿ ಬಿಟ್ಟಿರಲ್ಲಾ!........ಅಮ್ಮಮ್ಮಾ! ಕಡಲಂಗುಡಿ ಕೃಷ್ಣ ಶಾಸ್ತ್ರಿಗಳ ಕುಟುಂಬವೆಂದರೇನು ಸಾಮಾನ್ಯವೇ ? "

ಕೊಠಡಿಯೊಳಗೀಗ ತಣ್ಣನೆಯ ಗಾಳಿ ಬೀಸಿ ಕದವು ತೆರೆಯಿತು. ಮಳೆಯ ನೀರಿನಿಂದ ತೊಯ್ದು ಕಟ್ಟಿಕ್ಕುತ್ತಿರುವ ಸೀರೆಯೊಡನೆ ರತ್ನ ಒಳನುಗ್ಗಿದಳು.

" ರತ್ನ, ರತ್ನ! ಇದೇನಿದು, ಚೆನ್ನಾಗಿ ನೆನೆದು ಬಿಟ್ಟಿರುವೆಯಾ ಸ್ನಾನ ಮಾಡಿದಂತೆ ! " ಎಂದು ಹೇಳುತ್ತಾ ಅಂಬುಜವಲ್ಲಿಯು ಅವಳನ್ನು ಪ್ರೀತಿಯೊಡನೆ ಬರಸೆಳೆದಳು.

" ಅದಕ್ಕೋಸ್ಕರವೇ ನಾನು ಹೋದದ್ದು ! " ಎಂದು ನಗುತ್ತ ಉತ್ತರವಿತ್ತಳು ರತ್ನ. " ಅಪ್ಪಾ ಬಂದುಬಿಟ್ಟಿರುವರಲ್ಲಾ ! "

" ಹೌದು, ಬಂದುಬಿಟ್ಟರು. ಆ ಹುಡುಗನ ತಂದೆಯನ್ನು ಹೋಗಿ ನೋಡಿಕೊಂಡು ಬಂದಿರುವರು. ವಕೀಲ ದೊರೆಯೆಂದರೆ ನಿನಗಿಷ್ಟವಲ್ಲವೆ ರತ್ನಾ? " ಅಂಬುಜಮ್ಮನು ಆ ಅಲ್ಪಾವಕಾಶದಲ್ಲಿಯೇ ಚಿಕ್ಕ ಹುಡುಗಿಯಾಗಿ ಮಾರ್ಪಟ್ಟಳು.

ಮೇಜಿನ ಸಮೀಪದಲ್ಲಿ ನಿಂತಿದ್ದ ಜಾನಕಿರಾಮಯ್ಯರು, ಇಬ್ಬರನ್ನೂ ಪ್ರೇಮಪೂರ್ವಕವಾಗಿ ದೃಷ್ಟಿಸಿದರು. ಹಠಾತ್ತನೆ ತಮ್ಮ ಮಗಳ ಮೇಲೆ ಮಿತಿಮೀರಿದ ವಾತ್ಸಲ್ಯವು ಅವರ ಅಂತರಂಗದಲ್ಲಿ ಉದ್ಭವಿಸಿತು.

"ರತ್ನ, ಇಲ್ಲಿ ಬಾ" ಎಂದು ಪ್ರೇಮ ಚಿಮ್ಮುವ ದನಿಯಲ್ಲಿ ಕರೆದರು. ತನ್ನ ಮಾತೆಯು ಹಿಂಬಾಲಿಸುತ್ತಿರಲಾಗಿ, ರತ್ನಳು ತಂದೆಯನ್ನು ಸಮೀಪಿಸಿದಳು.

ಸಾಧಾರಣವಾಗಿ ಜಾನಕಿರಾಮಯ್ಯರು ತಮ್ಮ ಅಂತರಂಗದಲ್ಲಿ ಉದ್ಭವಿಸುವುದನ್ನೆಲ್ಲಾ ಹೊರಗೆಡಹುವ ಸ್ವಭಾವದವರಲ್ಲ. ಆದರೂ ತತ್ಸಮಯ ಅವರ ಹೃದಯವು ಪ್ರೇಮರಸದಿಂದ ತುಂಬಿಹೋಗಿತ್ತು. ಅವಳನ್ನು ತಬ್ಬಿಕೊಂಡು, "ರತ್ನ, ಹೋಗಿ ಸೀರೆಯನ್ನು ಬದಲಾಯಿಸಮ್ಮಾ ವೈಗೇನಾದರೂ ಆದೀತು." ಎಂದರು.

# ೧೦. ನೆಲಗಡಲೇಕಾಯಿ

೧

ಕಿಟ್ಟಿಯೂ ರಾಮುವೂ ಸಂಜೆ ಪಾಠಶಾಲೆಯಿಂದ ಮನೆಗೆ ಬರುತ್ತಿದ್ದರು. ಆ ಸಂಭವವನ್ನು ವಿಶೇಷವಾಗಿ ವಿವರಿಸಿ ಹೇಳಬೇಕಾಗಿಲ್ಲವಾದರೂ ಕೂಡ, ಆ ಹೊತ್ತು ರಾಮುವಿನ ಪಾಠಶಾಲೆಯ ಜೀವನದಲ್ಲಿ ಹೊಸದೊಂದು ಅನುಭವ ಉಂಟಾಯಿತು. ಅವನು ಎರಡು ತಿಂಗಳ ಹಿಂದೆ ತಾನೇ ಪಾಠಶಾಲೆಗೆ ಸೇರಿದ್ದನು. ಅವನಿಗಿನ್ನೂ ಹತ್ತು ವರ್ಷ ಸಹ ತುಂಬಿರಲಿಲ್ಲ. ಈ ಹೊತ್ತು ಪಾಠಶಾಲೆಯಲ್ಲಿ ಮೊಟ್ಟಮೊದಲವನಿಗೆ ಮಾನಭಂಗವಾಯಿತು. ಚರಿತ್ರೆಯ ಉಪಾಧ್ಯಾಯರು ತರಗತಿಯಲ್ಲಿರುವ ಎಲ್ಲ ಹುಡುಗರನ್ನೂ ಅಶೋಕ ಚಕ್ರವರ್ತಿಯ ಸಾಮ್ರಾಜ್ಯದ ವೈಶಾಲ್ಯೆಯನ್ನು ವಿವರಿಸುವ ಭೂಪಟವೊಂದನ್ನು ಬರೆದು ತರುವಂತೆ ಹೇಳಿದ್ದರು; ಅದನ್ನವನು ತರಲು ಮರೆತುಬಿಟ್ಟ. ಅದಕ್ಕಾಗಿ ಉಪಾಧ್ಯಾಯರು ಅವನನ್ನು ಬೆಂಚಿನ ಮೇಲೆ ನಿಲ್ಲಿಸಿಬಿಟ್ಟರು. ಈ ಅಪಮಾನವನ್ನವನಿಂದ ತಡೆಯಲಾಗಲಿಲ್ಲ. ಬೆಂಚಿನ ಮೇಲೆ ಹತ್ತುವಾಗಲೇ ಅವನ ಕಣ್ಣುಗಳಲ್ಲಿ ಕಣ್ಣೀರು ತುಳುಕಲಾರಂಭಿಸಿಬಿಟ್ಟಿತು. ಇದನ್ನು ಕಂಡ ಉಪಾಧ್ಯಾಯರು, ಚಿಕ್ಕ ಮಕ್ಕಳ ಮನಸ್ಸನ್ನು ಚೆನ್ನಾಗಿ ಅರಿತವರಾದುದರಿಂದ, ಅವನನ್ನು ಕೂಡಲೇ ಕುಳ್ಳಿರಿಸಿಬಿಟ್ಟರು.

"ಏನೋ? ಕೂಡಲೇ ಅಳುವಂತೂ ಬಂತಲ್ಲಾ, ಕೊಟ್ಟ ಕೆಲಸವನ್ನು ಮಾಡಿ ತರಬೇಡವೇ? ರೋಷವಿದ್ದರೆ, ಕೆಲಸ ಸರಿಯಾಗಿ ಮಾಡಬೇಕು; ರೋಷಮಾತ್ರವಿದ್ದರೆ ಸಾಲದು, ಸರಿ, ಕುಳಿತುಕೋ!" ಎಂದು ಗದರಿಸಿದರು.

ಬಳಿಕ ಮತ್ತೊಬ್ಬ ಹುಡುಗನನ್ನು ಕುರಿತು, "ಏನೋ ವೆಂಕಟ! ಅಡಿಕೆ ಮರದಲ್ಲಿ ಅರ್ಧವಿರುವಿಯಲ್ಲಾ, ಕೊಂಚವೂ ಚುಟಿ ಬೇಡವೇ? ಒಳ್ಳೇ ಧಾಂಡಿಗನಾಗಿ ತೆಂಗಿನ ಮರದಂತೆ ಬೆಳೆದಿರುವಿಯೇ ಹೊರತು ಶ್ರದ್ಧೆ ಎಂಬುದೇ ಇಲ್ಲ. ವಯಸ್ಸಂತೂ ಆಗಿದೆ, ಕೋಣದಂತೆ. ರಾಮುವನ್ನು ನೋಡು! ಅವನಿಗೆ ರೋಷ ಬಂತಲ್ಲಾ, ಹಾಗೆ ನಿನಗೆ ಬರಬೇಡವೇ? ನಿನ್ನನ್ನು ಬೆಂಚಿನ ಮೇಲೆ ನಿಲ್ಲೆಂದು ಹೇಳಿ ಲಾಭವೇನು? ತಯಾರಾಗಿ ಅಳಿಯನಂತೆ ನಿಲ್ಲುತ್ತೀ.........ಸರಿ, ಎಲ್ಲರೂ ಕುಳಿತುಕೊಳ್ಳಿ ಕತ್ತೆಗಳಾ!" ಎಂದು ಕ್ರೋಧಗೊಂಡು ಬಲವಾಗಿ ರೇಗಿದರು.

ತರಗತಿ ಮುಗಿದ ಬಳಿಕ ರಾಮುವಿನ ಗೆಳೆಯ ಕೃಷ್ಣಮೂರ್ತಿಯು ಅವನನ್ನು ಸಮೀಪಿಸಿ, "ಲೋ, ರಾಮೂ! ನೀನು ಮೇಷ್ಟ್ರಿಗೆ ಒಳ್ಳೇ ಚೆನ್ನಾಗಿ ಮುಂಕು ಬೂದಿ ಎರಚಿರುವಿಯಲ್ಲೋ. ನೀನು ಅಳುವುದಕ್ಕೆ ಪ್ರಾರಂಭಿಸಿದೊಡನೆಯೇ, ಅದನ್ನು ಕಂಡು ಅವರು ಹೆದರಿಬಿಟ್ಟರು!—ತಕ್ಷಣ ನಿನ್ನನ್ನು ಕುಳ್ಳಿರಿಸಿಬಿಟ್ಟರಲ್ಲೋ! ನೀನೂ ನಿಲ್ಲುವಂತಿರದಿದ್ದರೆ, ಎಲ್ಲರೂ ಅರ್ಧಘಂಟೆಯ ಕಾಲ ನಿಂತಿರಬೇಕಾಗಿರುತ್ತಿತ್ತು!" ಎಂದ.

ಆ ದಿನ ಕೊನೆಯ ಘಂಟೆ ಹೊಡೆದೊಡನೆಯೇ ರಾಮುವು ಬಹು ಬೇಗನೆ ತನ್ನ ತರಗತಿಯಿಂದ ಹೊರಗೆ ಬಂದುಬಿಟ್ಟನು. ತನ್ನ ಮಾನ ಭಂಗವಾದ ಬಳಿಕ ಅವನಿಗೆ ಹುಡುಗರೊಡನೆ ಕಲೆತು ಹೋಗಲು ಸಂಕೋಚ. ಮುಖ್ಯವಾಗಿ ಕೃಷ್ಣಮೂರ್ತಿಯು ತನ್ನನ್ನು ಸಮೀಪಿಸುವುದರೊಳಗಾಗಿ, ಮನೆಗೆ ಹೊರಟುಬಿಡಬೇಕು. ಏಕೆಂದರೆ, ಕೃಷ್ಣಮೂರ್ತಿಯು ಎಂದಿಗೂ ಚೆನ್ನಾಗಿ ಓದುವವನು. ಆ ಹೊತ್ತೂ ಸಹ ಅವನು, ತನ್ನ ದೇಶ ನಕ್ಷೆಯನ್ನು ಬರೆದು ತಂದಿದ್ದನು.

ಈ ರೀತಿಯಾಗಿ ನೊಂದ ಮನಸ್ಕನಾಗಿ ರಾಮುವು ಪಾಠಶಾಲೆಯ ಪಡಸಾಲೆಯಲ್ಲಿ ತನ್ನ ಅಣ್ಣ ಕಿಟ್ಟಿಗಾಗಿ ವಾಡಿಕೆಯಂತೆ ಕಾದಿದ್ದನು. ಸಹೋದರರಿಬ್ಬರೂ ತಮ್ಮ ಮನೆಗೆ ಹೋಗುವಾಗ ರಾಮುವು ಎಂದಿನಂತಿರಲಿಲ್ಲ. ಮೌನವಾಗಿ ನಡೆದನು. ಅವನಿಗೆ ಜೀವನದಲ್ಲಿ ಇಂತಹ ಅಪಮಾನವು ಇಷ್ಟರವರೆವಿಗೂ ಆಗಿರಲಿಲ್ಲ.

ಕಿಟ್ಟಿಯದು ಸೂಕ್ಷ್ಮ ಬುದ್ಧಿ. ರಾಮುವಿಗಿಂತ ಎರಡು ತರಗತಿಗಳು ಮೇಲನ ತರಗತಿಯಲ್ಲಿ ಓದುತ್ತಿದ್ದ.

"ಏನೋ ರಾಮು? ಏನಾಯಿತು ಈ ಹೊತ್ತು?"

"ಈ ಹೊತ್ತು ಚರಿತ್ರೆಯ ಕ್ಲಾಸಿನಲ್ಲಿ................" ಎಂದು ಮಾತು ನುಂಗಿದ ರಾಮು.

"ಊಂ?"

"ಮೇಷ್ಟ್ರು "ಮ್ಯಾಪ್" ಬರೆದುಕೊಂಡು ಬರ ಹೇಳಿದ್ದರು............

"ನೀನು ಬರೆದುಕೊಂಡು ಹೋಗಲಿಲ್ಲವೇನು?"

"ಹೌದು............"

"ಏನೋ ಹುಚ್ಚನಾಗಿರುವೆ? ಅತ್ತುಬಿಟ್ಟೇಯ............"

ಅದಕ್ಕೇನೊಂದು ಉತ್ತರವೂ ಕೊಡಲಿಲ್ಲ ರಾಮು.

"ಹೋಗೋ ದಡ್ಡ. ಹೀಗೆ ಮಾಡಲು ನಾಚಿಕೆಯಿಲ್ಲವೇ ನಿನಗೆ? ಬೆಂಚಮೇಲೆ ನಿಂತರೆ ಕೊಳ್ಳೆಹೋದದ್ದೇನಂತೆ?............ಈ ಮೇಷ್ಟ್ರುಗಳೇ ಹೀಗೆ ಕಣೋ; ಕೊಂಚವಾದರೂ "ಹೋಗಲಿ ಬಿಡು" ಎಂದಿರುವುದಿಲ್ಲ. ನೀನು ಮ್ಯಾಪನ್ನು ನಿಜವಾಗಿಯೂ ಬರೆದಿದ್ದು, ಮನೆಯಲ್ಲಿ ಮರೆತುಬಿಟ್ಟು ಬಂದಿದ್ದರೂ ಕೂಡ ಅವರು ಬಿಡಲೊಲ್ಲರು. ನೀನು ಹೇಳಿದರೂ, ಅದನ್ನು ನಂಬಲೊಲ್ಲರು. ಈ ಹೊತ್ತು ನಾನೂ ಕೂಡ ಬೆಂಚಿನ ಮೇಲೆ ನಿಂತೆ. ಆದರೆ, ನಿನ್ನಂತೆ ಅಳುತ್ತೇನೆಯೇ?"

ರಾಮುವಿಗೆ ಆಶ್ಚರ್ಯವೂ ಆನಂದವೂ ಒಮ್ಮೆಲೆ ಹೊಮ್ಮಿತು. ಕಿಟ್ಟಿಯೂ ಆ ಹೊತ್ತು ಬೆಂಚಿನ ಮೇಲೆ ನಿಂತಿದ್ದನಲ್ಲಾ!

"ನೀನೂ ಕೂಡ ಈ ಹೊತ್ತು ಬೆಂಚಮೇಲೆ ನಿಂತೆಯೇನು?"

"ಹೌದು, ಕಳೆದ ಕ್ಲಾಸಿನಲ್ಲಿ ಈ ಹೊತ್ತು ಒಂದು ವ್ಯಾಕರಣ ಪಾಠ ವನ್ನು ಬರೆದು ತರಹೇಳಿದ್ದರು. ನಾನು ಬರೆದುಕೊಂಡು ಹೋಗಿರಲಿಲ್ಲ. ಅದಕ್ಕಾಗಿ ಮೇಷ್ಟ್ರು ಬೆಂಚಿನ ಮೇಲೆ ನಿಲ್ಲಿಸಿದರು."

"ನೀನು ಪಾಠವನ್ನು ಬರೆದುಬಿಟ್ಟು, ಪಾಠಶಾಲೆಗೆ ತರಲು ಮರೆತು ಹೋದೆಯೇನು?" ಎಂದವನನ್ನು ರಾಮು ಕೇಳಿದ.

" ಹೌದು............" ಎಂದು ತಡವರಿಸುತ್ತಾ ಕಿಟ್ಟೀ ಉತ್ತರವಿತ್ತನು, ಕಿಟ್ಟೀ. " ಆದರೆ. ಹಾಗೆ ಹೇಳಿದ್ದರೂ ಕೂಡ ಅವರು ನಂಬಿರುವರೆಂದು ತಿಳಿದಿದ್ದೀಯೇನು ? ಇಲ್ಲವೇ ಇಲ್ಲ ! ಅವನು ನ್ನನ್ನು ಬೆತ್ತದಿಂದ ಹೊಡೆದರು............" ಎಂದು ಶಾಂತವಾಗಿ ಹೇಳಿ ಮುಗಿಸಿದನು.

೨

ಅವರುಗಳು ಮನೆಯನ್ನು ತಲುಪಿದಾಗ ರಾಮುವು ಮನಸ್ಸಿನ ಆಲಸ್ಯದ ಜೊತೆಗೆ ದೇಹಾಲಸ್ಯವನ್ನೂ ಹೊಂದಿದ್ದನು. ವಿಷಯ ಹೀಗಿರಲಾಗಿ ಅಮ್ಮನು ಆ ದಿನ ಸಂಜೆ ಅವರುಗಳಿಗೆ ಟಿಫಿನ್ ಇಲ್ಲವೆಂದು ಹೇಳಲಾಗಿ ಅವನಿಗೆ ಆಲಸ್ಯದೊಡನೆ ಆತುರವೂ ಹೊಮ್ಮಿತು. ಗೊಣಗಿದನು, ರೇಗಿದನು, ತಾಯನ್ನು ಎಡಬಿಡದೆ ತೊಂದರೆ ಪಡಿಸಿದನು.

" ಯಾಕೆ ಈ ಹೊತ್ತು ಟಿಫಿನ್ ಮಾಡಲಿಲ್ಲ.........ಆಂ.........ಆಂ ? ನನಗೆ ಹಸಿವಾಗುತ್ತದೆ........ನನಗೆ ಟಿಫಿನ್ ಬೇಕೂ............ಊಂ............ ಊಂ............"

" ಏನೋ ಇದು ನಕ್ಷತ್ರಕನಂತೆ ಹಿಂಸಿಸುತ್ತೀ ? "

" ನನಗೆ ಹಸಿವಾಗುತ್ತದೆ........"

" ಶನೀ, ಕೊಂಚ ಹೊತ್ತು ಸುಮ್ಮನಿರಲೊಲ್ಲೆ ?........ಬಾ ತುಂಬ 'ಕೊಕೊ' ಹಾಕಿಕೊಡುತ್ತೇನೆ, ಅದನ್ನು ಕುಡಿದು, ಆಟವಾಡಲು ಹೋಗು. ರಾತ್ರಿ ಬೇಗ ಊಟಮಾಡಿಬಿಡುವೆಯಂತೆ."

" ನನಗೆ 'ಟಿಫಿನ್' ಬೇಕು. ಯಾಕೆ 'ಟಿಫಿನ್' ಮಾಡಲಿಲ್ಲ ? "

" ಸರಿ, ಇಕೋ, ಎರಡಾಣೆ. ಅಂಗಡಿ ಬೀದಿಗೆ ಹೋಗಿ ಬೇಕಾದುದನ್ನು ಕೊಂಡುತಿನ್ನು ?"

" ಸರಿ ನೆಲಗಡಲೇಕಾಯಿ ಕೊಳ್ಳುತ್ತೇನೆ ! " ಎಂದು ರಾಮು ಕಿರಿಚಿದ.

"ಎರಡಾಣೆಗೂ ಕೊಳ್ಳಬೇಡ, ವ್ಯೈಗಾಗದು. ಹಣ ಮಿಗಿಸಿಟ್ಟು ಕೊಂಡು, ನಾಳೆ ಕೊಳ್ಳೋಣ'' ಎಂದಳು ತಾಯಿ. ರಾಮುವು ಈ ಮಾತು ಗಳನ್ನು ಕಿವಿಗೆ ಹಚ್ಚಿಕೊಳ್ಳಲಿಲ್ಲ. ಅವಳಿಂದ ಎರಡಾಣೆ ತೆಗೆದುಕೊಂಡು ಒಂದೇ ಸಮನೆ ಬೀದಿಗೆ ನೆಗೆದ.

"ಲೋ ರಾಮೂ, ಇಲ್ಲಿ ಬಾರೋ" ಎಂದವನನ್ನು ತಾಯಿ ಕರೆದಳು. "ಕೋಕೋ" ಕುಡಿದು ಹೋಗೋ, ಅಷ್ಟರೊಳಗೇನಂತೆ ಓಟ?"

ರಾಮುವು 'ಕೊಕೊ'ವನ್ನು ಅವಸರದಿಂದ ಕುಡಿದು ಅಂಗಡಿ ಬೀದಿಗೆ ಹೋದನು ಅಲ್ಲಿ ಯಾರ ಹತ್ತಿರ ಕಡಲೇಕಾಯಿ ಕೊಳ್ಳೋಣವೆಂದು ಆಲೋಚಿಸುತ್ತ ಕೊಂಚ ನಿಂತ. ರಸ್ತೆಯ ಪಾರ್ಶ್ವದಲ್ಲಿ ಅಂಗಡಿ ಬೀದಿಯ ಸಂದಿಯ ತುದಿಯಲ್ಲಿ ಆರು ವರ್ಷದ ಹುಡುಗಿಯೊಬ್ಬಳು ಗೋಣೀಚೀಲ ವೊಂದರ ಮೇಲೆ ನೆಲಗಡಲೇಕಾಯಿಯನ್ನು ಹರಡಿಟ್ಟುಕೊಂಡಿದ್ದಳು.

"ಇಲ್ಲಿ, ಬಾ, ಸಾಮೀ! ನೆಲಗಡಲೇಕಾಯಿ ಬೇಕೆ?" ಎಂದು ವಿಚಾರಿಸಿದಳು.

"ಬೆಲೆ ಏನು?" ಎಂದು ಕೊಂಚ ಜಂಭವಾಗಿ ಕೇಳಿದ ರಾಮು.

"ಪಾವು ಕಾಲಾಣೆ" ಎಂದು ಉತ್ತರವಿತ್ತಳು ಅವಳು.

"ಸರಿ, ಎಂಟು ಪಾವು ಕೊಡು" ಎಂದು ತನ್ನ ಜೇಬಲ್ಲಿದ್ದ ಎರಡಾ ಣೆಗೆ ಲೆಕ್ಕ ಹಾಕಿ ಕೇಳಿದ ರಾಮು.

ಅಂಗಡಿಯ ಹುಡಿಗಿಯು ಮೂರನೆಯ ಪಾವನ್ನು ಅಳೆಯುವಾಗ ಅವನು ಹಠಾತ್ತನೆ, "ತಾಳು, ಬೇಡ! ಏಳು ಪಾವು ಕೊಡು ಸಾಕು ಎಂದ."

ಹೀಗೆ, ಮಿಗುವ ಕಾಲಾಣೆಗೆ ಮರುದಿನ ಮಧ್ಯಾಹ್ನ, ಒಂದು ಪಾವು ಕಡಲೇಕಾಯಿ ಕೊಳ್ಳೋಣವೆಂದವನು ಎಣಿಸಿದ.

"ಸರಿ, ಸಾಮೀ" ಎಂದಳವಳು. ಮೂರನೇಯ ಪಾವನ್ನು ಅಳೆದ ಬಳಿಕ, "ಸಾಮೀ ನನಗೆ ಲೆಕ್ಕ ಬರೋಲ್ಲ, ನೀವೇ 'ಸರಿಯೋ' ಎಂದು ಲೆಕ್ಕ ನೋಡಿ ಕಾಸು ಕೊಡಬೇಕು." ಎಂದಳು.

" ಹಾಗೇನು ? ನೀನು ಪಾಠಶಾಲೆಗೆ ಹೋದದ್ದೇ ಇಲ್ಲವೇ ? " ಎಂದವಳನ್ನು ಪ್ರಶ್ನಿಸಿದ ರಾಮು.

" ಇಲ್ಲ ಸಾಮೀ " ಎಂದವಳು ತಲೆಯಲ್ಲಾಡಿಸಿದಳು.

" ಓಹೋ............ನೀನು ಪಾಠಶಾಲೆಗೆ ಹೋಗಿದ್ದರೆ, ನಿನ್ನನ್ನು ಮೇಷ್ಟ್ರು ಬೆಂಚಿನ ಮೇಲೆ ನಿಲ್ಲಿಸುತ್ತಿದ್ದರು." ಎಂದಂದುಕೊಂಡ ರಾಮು. ಬಳಿಕ ಎರಡಾಣೆಯನ್ನು ತೆಗೆಯಲು ಜೇಬಲ್ಲಿ ಕೈ ಬಿಟ್ಟಾಗ ಅವನಿಗೊಂದು ಯುಕ್ತಿ ಹೊಳೆಯಿತು.

" ಅರ್ಧಾಣೆ ಓಂದಕ್ಕೆ ಕೊಡು " ಎಂದು ತಟ್ಟನೆ ಕೇಳಿದ. ಅವಳಿಂದ ಅರ್ಧಾಣೆಯನ್ನೂ ಏಳು ಪಾವುಗಳು ಕಡಲೇಕಾಯಿಯನ್ನೂ ತೆಗೆದುಕೊಂಡು ಮನೆಗೆ ಹಿಂದಿರುಗಿದ.

" ನಾಳೆ ಪಾಠಶಾಲೆಗೆ ಹೋಗುವಾಗ ಎರಡು ಪಾವು ಕೊಳ್ಳೋಣ " ಎಂದಂದುಕೊಂಡನು. ದಾರಿಯಲ್ಲೊಂದೊಂದು ಕಾಳಾಗಿ ಬಾಯಲ್ಲಿ ಹಾಕಿಕೊಂಡು ತಿನ್ನುತ್ತಾ ಬರಲಾಗಿ. ಅವನ ನಡಿಗೆ ನಿಧಾನವಾಗಿಯೇ ಇತ್ತು.

ಅವನು ಬಹಳ ದೂರ ಹೋಗಿರಲಿಲ್ಲ; ಅಷ್ಟರೊಳಗಾಗಿ ಅವನ ಮನಸ್ಸಾಕ್ಷಿಯು ಅವನನ್ನು ಪೀಡಿಸ ತೊಡಗಿತು. ಅವನ ಸ್ವಭಾವವೇ ವಿಚಿತ್ರವಾದದ್ದು, ಎಳೆತನದಲ್ಲಿಯೂ ಸಹ ಒಂದು ರೀತಿಯ ಆಳವಿತ್ತು, ಕೆಲಸಮಯ ಅವನು, ತನ್ನ ತಾಯಿಗೆ ತಿಳಿಯದಂತೆ ಭಕ್ಷ್ಯಗಳನ್ನು ತೆಗೆದು ತಿನ್ನುವುದುಂಟು, ಅಷ್ಟರ ಬಳಿಕ ಅವನ ಎಳೆ ಮನಸ್ಸು ಆತ್ಮ ಶೋಧನೆ ಮಾಡಲು ತೊಡಗುವುದು. ತನ್ನ ತಾಯನ್ನು ಸಮೀಪಿಸಿ ತಾನಾಗಿಯೇ ತನ್ನ ಕಳ್ಳತನವನ್ನು ಒಪ್ಪಿ ಹಲವು ಸಲ ಹೀಗೆ ಮಾಡಲಾಗಿ ಅವನನ್ನು ಒಂದು ಸಮಯ ಅವನ ತಾಯಿ ಹೊಡೆದಳು. ಆಗ ಅವನು " ನಾನೇ ಮತ್ತೆ ನಾನಾಗಿಯೇ ಬಂದು ಹೇಳಿಬಿಟ್ಟೆನಲ್ಲಾ. ಆದರೂ ಏಕೆ ಹೊಡೆಯುವಿ " ಎಂದು ಕೋಪದಿಂದ (ನೋವಿನಿಂದಲ್ಲ, ಕೋಪದಿಂದ) ಅತ್ತದ್ದೂ ಉಂಟು.

ಅದೇ ರೀತಿಯಲ್ಲೀಗ ಅವನು ಸ್ವಲ್ಪ ದೂರ ಹೋದ ಬಳಿಕ, ತನ್ನ ಮೋಸಕಾರ್ಯದ ಪರವಾಗಿ ಪಶ್ಚಾತ್ತಾಪ ಹೊಂದಿದನು. ಒಂದಕ್ಕೆ ಹೋಗಿ, ಆ ಹುಡಿಗಿಯ ಹತ್ತಿರ ತಪ್ಪುಕೆಲಸ ಮಾಡಿಬಿಟ್ಟೆನೆಂದು ಹೇಳಿ, ಅವಳಿಗೆ ಕೊಡಬೇಕಾದ ಕಾಲಾಣೆಯನ್ನು ಅವಳಿಗೆ ಕೊಟ್ಟು "ಊ........ಊ........" ಎಂದು ಚೀಟಿಹಾಕುತ್ತಾ ಮನೆಗೆ ಹೊರಟನು.

"ಲೋ, ರಾಮೂ !" ಎಂಬ ಬಲವಾದ ಧ್ವನಿಯು ಅವನಿಗೆ ಕೇಳಿಸಿತು.

ಅವನ ಇದಿರಲ್ಲಿ ಕಿಟ್ಟಿ ಬರುತ್ತಿದ್ದ.

"ಏನೋ ಅದು, ಚೀಟೀ ಹೊಡೆಯುತ್ತ ಬರುತ್ತಿದ್ದೀ? ಕಡಲೇ ಕಾಯಿ ಕೊಂಡು ತಿಂದ ರುಚಿಯೇನು ?........ಒಳ್ಳೇ ಘಾಟಿಕಣೋ ನೀನು. ಅಮ್ಮನ ಹತ್ತಿರ ಎರಡಾಣೆ ತೆಗೆದುಕೊಂಡು ಓಡಿಹೋದೆಯಲ್ಲೋ ನನಗೆ ತಿಳಿಯದೆ !"

"ನೀನೂ ಅಮ್ಮನ ಹತ್ತಿರ ಕೇಳಿ ತೆಗೆದುಕೊಳ್ಳುವುದಕ್ಕೇನಂತೆ !"

"ನೀನೇನೂ ನನಗೆ ಹೇಳಿಕೊಡಬೇಕಾಗಿಲ್ಲ ! ನಾನೇ ಅಮ್ಮನನ್ನು ಕೇಳಿ ತೆಗೆದುಕೊಂಡದುದಾಯಿತು !" ಹೀಗೆ ಹೇಳುತ್ತ ಕಿಟ್ಟಿ ರಾಮುವಿಗೆ ಬಲಗೈಯನ್ನು ನೀಡಿ ತೋರಿಸಿದ. ಅದರಲ್ಲಿರಡಾಣೆ ಇತ್ತು.

"ಸರಿ ! ನೀನೂ ಹೋಗಿ ಕಡಲೇಕಾಯಿ ಕೊಳ್ಳುವುದು ತಾನೇ !" ಎಂದ ರಾಮು.

ಅದರ ಬಳಿಕ ಕಿಟ್ಟೀ ಅಂಗಡೀ ಬೀದಿಗೆ ಹೋದ. ರಾಮು ಮನೆಯ ಕಡೆಗೆ ನಡೆದ.

೩

ರಾಮು ಮನೆಯನು ತಲುಪಿದ ಕೊಂಚ ಹೊತ್ತಿಗೆಲ್ಲಾ ಕಿಟ್ಟಿಯೂ ಮನೆಗೆ ಬಂದ.

" ಇಕೋ ನೋಡು ರಾಮೂ ! " ಎಂದು ಕಿಟ್ಟೀ ಜಯ ಘೋಷಿದ, " ಎರಡಾಣೆಗೆ ಒಂಭತ್ತು ಪಾವು ಕಡಲೇಕಾಯಿ ಕೊಂಡೆ ಕಣೋ ! "

" ಓಹೋ ?........ಆ ಹುಡಿಗಿಯು ಹತ್ತಿರ ತಾನೇ ? ರಸ್ತೆಯು ಪಾರ್ಶ್ವದಲ್ಲಿ, ಕೊನೆಯ ಸಂದಯು ಮೂಲೆಯಲ್ಲಿರುವಳಲ್ಲಾ, ಅವಳ ಹತ್ತಿರ ತಾನೇ ಎಂದು ಶಾಂತವಾಗಿ ಕೇಳಿದ ರಾಮು.

" ಏಳು ಪಾವು ಕೊಂಡೆ, ಒಂದೂಮುಕ್ಕಾಲಾಣೆಗೆ. "

" ನಾನು ಒಂಬತ್ತು ಪಾವು ಕೊಂಡೆನಲ್ಲಾ !........ಎರಡಾಣೆಗೆ ! "

" ನೀನವಳನ್ನು ಮೋಸ ಮಾಡಿರುವೆ, ಕಿಟ್ಟೀ ! ನಾನು ಹಾಗೆ ಮಾಡಬಾರದೆಂದೇ ಅವಳನ್ನು ಮೋಸ ಮಾಡಲಿಲ್ಲ "

" ಹೋಗೋ ಹೋಗು ! ಹುಚ್ಚ ಕಣೋ ನೀನು ! ಎರಡಾಣೆಯನ್ನಿಟ್ಟುಕೊಂಡು, ಯಾಕೋ ಏಳು ಪಾವು ಕೊಂಡೆ ? ಬಾಕಿ ಕಾಲಾಣೆಯನ್ನೇನು ಮಾಡಿದೆಯೋ ? "

ಇಕೋ ನೋಡು ! " ಎಂದು ಬಾಕಿಯಿದ್ದ ಕಾಲಾಣೆಯನ್ನು ಕಿಟ್ಟೀಗೆ ತೋರಿಸಿದ ರಾಮು ; ನಾಳೆ ಸ್ಕೂಲಿನಲ್ಲೊಂದು ಪಾವು ಕೊಳ್ಳೋಣವೆಂದು ಇಟ್ಟುಕೊಂಡಿದ್ದೇನೆ. "

ಈ ವಿಷಯವನ್ನು ಕೇಳಿದೊಡನೆಯೇ ಕಿಟ್ಟಿ ರಾಮುವಿನೊಡನೆ ಸ್ನೇಹ ಭಾವದಿಂದ ಮಾತನಾಡಲು ತೊಡಗಿದ.

" ಊಂ............ನಾ ಹೇಳುವುದನ್ನು ಕೇಳು, ರಾಮೂ. ನಾನೀಗ ನಿನಗೊಂದು ಪಾವು ಕೊಡುವೆನು. ಆಗ ಇಬ್ಬರಿಗೂ ಎಂಟೆಂಟು ಪಾವು ಆಗುತ್ತದೆ. ನೀನು ನಾಳೆ ಪಾಠಶಾಲೆಯಲ್ಲಿ ಕೊಳ್ಳುವುದರಲ್ಲಿ ನನಗರ್ಧ ಕೊಡಬೇಕು, ಸರಿಯೇ ? "

" ಈ ಒಪ್ಪಂದದ ಪ್ರಕಾರ ಕಿಟ್ಟಿಗೆ ಏರ್ಪಡುವಂತಹುದು ನಷ್ಟವೇ. ಆದರೂ ಕೂಡ ಕಿಟ್ಟಿ——ಅಂಗಡೀ ಬೀದಿಯ ಹುಡಿಗಿಯನ್ನು ಮೋಸಗೊಳಿ

ಸಿದ ಕಿಟ್ಟಿ——ತನ್ನ ತಮ್ಮನ ವಿಷಯದಲ್ಲಿ ಯೋಗ್ಯವಾಗಿ ನಡೆಯಲು ತಯಾರಿದ್ದನು."

ರಾಮುವು ಕೊಂಚ ಆಲೋಚಿಸಿದ. ಬಳಿಕ, "ಈಗ ನನಗೆ ನಿನೇನೂ ಕೊಡಬೇಕಾಗಿಲ್ಲ. ಈ ದಿನ ನನಗೆ ಈ ಏಳು ಪಾವಿನಲ್ಲೇ ಮಿಗಬಹುದು. ನಾಳೆ ಪಾಠಶಾಲೆಯಲ್ಲಿ ಕೊಳ್ಳುವುದರಲ್ಲಿ ನಿನಗರ್ಧ ಕೊಡುವೆನು" ಎಂದ.

"ಸರಿ" ಎಂದು ಅನುಮೋದಿಸಿದ ಕಿಟ್ಟಿ. ಆ ಬಳಿಕ ಬುಗುರೀ ಆಡಲು ಬೀದಿಗೆ ಓಡಿಬಿಟ್ಟ.

೪

ಕತ್ತಲು ಕವಿಯುವ ಹೊತ್ತಿಗೆ ರಾಮುವು ತನ್ನ ಪಾಠಶಾಲೆಯ ಪಾಠಗಳನ್ನು ಗಮನಿಸಲು ಆರಂಭಿಸಿದ. ಇಷ್ಟರವರೆವಿಗೂ ಕಡಲೇಕಾಯಿ ಕೊಂಡು ತಿನ್ನುವ ವ್ಯವಹಾರದಲ್ಲಿ ಅವನು ಆ ಹೊತ್ತು ಪಾಠಶಾಲೆಯಲ್ಲಿ ಹೊಂದಿದ್ದ ಅಪಮಾನವನ್ನು ಮರೆತಿದ್ದ. ಈಗ, ಕತ್ತಲಿನ ಶಾಂತತೆಯಲ್ಲಿ, ಅವನಿಗೆ ತನ್ನ ಮಾನಭಂಗದ ವಿಷಯವಾಗಿ ನೆನಪು ಬಂತು. ಕಿಟ್ಟಿಯು ಮನೆಯ ತೋಟದಲ್ಲಿನ್ನೂ ಆಡುತ್ತಿದ್ದನು.

"ಕಿಟ್ಟಿಮಾತ್ರ ಇಷ್ಟೊಂದು ಅಲಕ್ಷ್ಯವಾಗಿ, ಬೆಂಚ ಮೇಲೆ ನಿಂತದ್ದನ್ನು ಕುರಿತು ಚಿಂತಿಸದೆ ಇರುವನಲ್ಲಾ!" ಎಂದು ರಾಮುವು ಯೋಚಿಸಿದ.

ಆಗ ಮನೆಯ ಬಾಗಿಲ ಮುಂದೆ ಅಪ್ಪಾವರ ಕಾಲ ಸಪ್ಪಳ ಕೇಳಿಸಿತು. ಅವರು ಆದೇತಾನೇ ಆಫೀಸಿನಿಂದ ಹಿಂದಿರುಗಿ ಬರುತ್ತಿದ್ದರು. ರಾಮುವು ತನ್ನ ಪುಸ್ತಕವನ್ನು ಪುನಃ ತಿರುವ ತೊಡಗಿದ.

"ಕಿಟ್ಟೀ!" ಎಂದು ಅಪ್ಪಾವರ ಧ್ವನಿಯು ಕೊಂಚ ಹೊತ್ತಿಗೆ ಕೇಳಿಸಿತು. "ನನ್ನ ಜೋಡನ್ನು ತೆಗೆದು ಜೋಡಿನ ಗೂಡಿನಲ್ಲಿಡು?"

ಬಳಿಕ ಕಿಟ್ಟಿಯು ಹಜಾರವನ್ನು ದಾಟಿಹೋಗುವ ಶಬ್ದ. ಆ ಬಳಿಕ ಮಾತಿನ ಸರಣಿ............ಕಿಟ್ಟಿ ಅಪ್ಪಾವರ ಹತ್ತಿರದಲ್ಲಿ ತಾನು ಸಾಮರ್ಥ್ಯವಾಗಿ ಆ ಹೊತ್ತು ಕಡಲೇಕಾಯಿ ಕೊಂಡು ತಂದ ವಿಷಯವನ್ನು ಹೇಳುತ್ತಿದ್ದ...............ಅವನನ್ನು ಅಪ್ಪನು ಆಕ್ಷಣ ಕೋಪಿಸಿಕೊಳ್ಳುವರೆಂದು ರಾಮುವು ತಿಳಿದಿದ್ದ. ಆದರವನಿಗೆ ಅನಿರೀಕ್ಷಿತವಾದೊಂದು ಆಶ್ಚರ್ಯವೇರ್ಪಟ್ಟಿತು. ಅಪ್ಪನು ಆಕ್ಷಣ ಕೋಪಾಕ್ರಾಂತರಾಗಲಿಲ್ಲ.

" ಲೆಕ್ಕಬಾರದವಳು ಸಹ ಅಂಗಡಿಯಲ್ಲಿ ಬಂದು ಮಾರಲು ಹೊರಟು ಬಿಟ್ಟಳೇನು ? " ಎಂದು ಆಶ್ಚರ್ಯದಿಂದವರು ಕೇಳಿದರು.

" ಇಲ್ಲ, ಅಪ್ಪಾ! ಕಡಲೇಕಾಯಿಯವಳಿಗೆ ಜ್ವರವಂತೆ. ಅದರಿಂದವಳು ತನ್ನ ಮಗಳನ್ನು ಅಂಗಡಿಗೆ ಕಳುಹಿಸಿದ್ದಳು. ಆ ಹುಡಿಗಿ ಶುದ್ಧ ದಡ್ಡಿ!........ಅವಳಿಗೆ ಲೆಕ್ಕವೇ ತಿಳಿಯಲಿಲ್ಲ ! " ಎಂದ ಕಿಟ್ಟಿ.

ತನ್ನ ಕೊಠಡಿಯಲ್ಲಿ ಕುಳಿತಿದ್ದ ರಾಮುವಿಗೆ ಕಡಲೇಕಾಯಿಯವಳ ಮೇಲೆ ಅನುತಾಪವೇರ್ಪಟ್ಟಿತು. " ಅವಳು ಖಾಯಿಲೆಯಾಗಿ ಮನೆಯಲ್ಲಿ ಮಲಗಿರುವಳಲ್ಲಾ! ಅವಳಿಗೆ ಔಷಧಿ ಬೇಡವೇ ? ಹಣ ಬೇಡವೇ ? ಅವಳನ್ನು ಕಿಟ್ಟೀ ಮೋಸಮಾಡಿದನಲ್ಲಾ! ಅಪ್ಪಾವರೂ ಅವನನ್ನು ಕೋಪಿಸಿಕೊಳ್ಳಲಿಲ್ಲವಲ್ಲಾ."

ರಾಮುವು ಈ ರೀತಿಯಾಗಿ ಯೋಚಿಸುತ್ತಿರುವ ಸಮಯದಲ್ಲಿ ಅಪ್ಪಾವರು ಹಠಾತ್ತನೆ ಕಿಟ್ಟಿಯನ್ನು ಖಂಡಿಸತೊಡಗಿದರು. ಸಾಕುಮಾಡು ನಿನ್ನ ಜಾಣತನವನ್ನು!—ಕತ್ತೆ! ಕೊಂಡುದಕ್ಕೆ ಸರಿಯಾಗಿ ಬೆಲೆ ಕೊಡಬೇಡವೇ ? ಕಳ್ಳ ಹುಡುಗ! ನನ್ನ ಹತ್ತಿರ ಬಂದು ಹೆಮ್ಮೆ ಬೇರೆ ಕೊಚ್ಚಿಕೊಳ್ಳುವಿಯಾ ! ಪೋಲೀ ರಾಸ್ಕಲ್ !

" ಅಲ್ಲ ಅಪ್ಪಾ........" ಎಂದು ಕಿಟ್ಟೀ ಪ್ರಾರಂಭಿಸಿದನು.

" ಬಾಯಿ ಮುಚ್ಚು! " ಎಂದು ಅಪ್ಪಾವರು ಅವನಿಗೆರಡು ಏಟು ಕೊಟ್ಟರು.

ತನಗೆ ತೊಂದರೆಯಾಗುವ ವಿಷಯದಲ್ಲಿ ಕಿಟ್ಟೀ ಅದೆಷ್ಟು ಉದಾಸೀನನಾಗಿರುವನೆಂದು ರಾಮು ಅಂದುಕೊಂಡನು. ಅಷ್ಟಕ್ಕೇ ಮೇಜಿನ ಹತ್ತಿರ ಪುಸ್ತಕ ಹಿಡಿದು ಕುಳಿತಿದ್ದ ರಾಮುವಿಗೆ, ಪಾಠದ ವಿಷಯದಲ್ಲೂ ಕೂಡ ಕಿಟ್ಟೀ ಅದೇ ರೀತಿಯಲ್ಲಿ ನಡೆದುಕೊಳ್ಳುತ್ತಾನೆಂದು ಯೋಚನೆ ಹೊಳೆಯಿತು. ಆ ಹೊತ್ತು ಉಪಾಧ್ಯಾಯರು ಬೆಂಚ ಮೇಲೆ ನಿಲ್ಲಿಸಿರುವರು; ಪಾಠವನ್ನು ಬರೆದೂ ಸಹ ಪಾಠಶಾಲೆಗೆ ಪುಸ್ತಕವನ್ನು ತರಲಿಲ್ಲವೆಂದು, ಅವನನ್ನು ಬೆತ್ತದಿಂದ ಹೊಡೆದಿರುವರು. ಅದರೆ ಅದೊಂದನ್ನೂ ಅವನು ಲಕ್ಷಿಸುವಂತೆ ತೋರಲಿಲ್ಲವಲ್ಲಾ!............ಸ್ವಲ್ಪವೂ ಹಿಂಜರಿಯದೆ ಸುಳ್ಳು ಹೇಳುತ್ತಾನಲ್ಲಾ, ಬಹುಶಃ ಅವನು ವ್ಯಾಕರಣ ಪಾಠವನ್ನು ಬರೆಯದೆಯೇ ಪಾಠಶಾಲೆಗೆ ಹೋಗಿರಬಹುದೊ? ಪಾಠವನ್ನು ಬರೆದೂ ಕೂಡ ಏಟು ತಿಂದಿದ್ದರೆ ಒಬ್ಬ ಮನುಷ್ಯನಿಗೆ ಇಷ್ಟೊಂದು ನೆಮ್ಮದಿಯಾಗಿರಲು ಸಾಧ್ಯವೇ?

ರಾಮುವು ತನ್ನ ಮೇಜ ಹತ್ತಿರದಿಂದೆದ್ದು ಕಿಟ್ಟಿಯ ಮೇಜನ್ನು ಸಮೀಪಿಸಿದ. ಅದರ ಡ್ರಾಯರನ್ನು ತೆರೆದು, ಕಿಟ್ಟಿಯ ವ್ಯಾಕರಣ ನೋಟು ಪುಸ್ತಕವನ್ನು ತೆಗೆದು ನೋಡಿದ ತಾನು ಸಂಶಯ ಪಟ್ಟದ್ದು ನಿಜವೆಂದು ಅರಿತ. ನೋಟು ಪುಸ್ತಕದಲ್ಲಿ ಕೊನೆಯ ಪಾಠದ ತಾರೀಖು ಒಂದು ವಾರದ ಹಿಂದಣದಾಗಿತ್ತು; ತಳಭಾಗದಲ್ಲಿ ಉಪಾಧ್ಯಾಯರ ರುಜು ಸಹ ಇತ್ತು, ಅದರ ಬಳಿಕ ಯಾವ ಪಾಠವೂ ಬರೆಯಲ್ಪಟ್ಟಿರಲಿಲ್ಲ; ಆದ್ದರಿಂದ ಕಿಟ್ಟೀ ಈ ವಿಷಯದಲ್ಲಿ ಸುಳ್ಳನ್ನೇ ಹೇಳಿರುವನು.

ಕೊಂಚ ಹೊತ್ತಿನ ಬಳಿಕ ಕಿಟ್ಟೀ ಆ ಕೊಠಡಿಯೊಳಗೆ ಬಂದ. ತಂದೆಯ ಬೈಗಳಿನಿಂದಲೂ ಏಟುಗಳಿಂದಲೂ ಅವನು ಮನನೊಂದಿದ್ದನು.

"ಕಿಟ್ಟೀ, ನೀನು ಈ ಹೊತ್ತು ವ್ಯಾಕರಣ ಪಾಠವನ್ನು ಬರೆದಿದ್ದೆನೆಂದು ನನ್ನ ಹತ್ತಿರದಲ್ಲಿ ಸುಳ್ಳಲ್ಲವೇ ಹೇಳಿದೆ?'' ಎಂದು ಮೆಲ್ಲಗೆ ಕೇಳಿದ ರಾಮು.

"ನಿನ್ನ ಕೆಲಸ ನೋಡಿಕೊಂಡು ಹೋಗೋ!'' ಎಂದು ರೇಗಿದನು ಕಿಟ್ಟಿ. "ರಾಸ್ಕಲ್! ಯಾಕೋ ನನ್ನನ್ನು ಕೇಳದೆ ನನ್ನ ಡ್ರಾಯರನ್ನು ತೆರೆದೆ? ನನ್ನ ಪುಸ್ತಕವೆಲ್ಲವನ್ನೂ ನಿನ್ನನ್ನು ತೆಗೆದು ನೋಡಲು ಹೇಳಿದವರಾರೋ?''

"ನೀನು ಸುಳ್ಳು ಹೇಳುತ್ತೀಯೆಂದು ಅಮ್ಮನಿಗೆ ಹೇಳುವೆನು.''

"ಊಂ............'' ಎಂದು ಅವನನ್ನು ದುರದುರನೆ ನೋಡಿದನು ಕಿಟ್ಟಿ; ನಾನೇನು ಮಾಡಿದರೆ ನಿನಗೇನಂತೆ? ನಿನ್ನ ಕೆಲಸ ನೋಡಿಕೊಂಡು ಹೋಗು! ಹೆಂಗಸಿನಂತೆ ಸ್ಕೂಲಿನಲ್ಲಿ ಅತ್ತುಬಿಟ್ಟು! ಈಗ ನನ್ನ ಮೇಲೆ ಚಾಡಿಹೇಳಲು ಬರುತ್ತಾನೆ? ನಾನು ನನ್ನ ಪಾಠವನ್ನು ಬರೆಯುದಿದ್ದರೆ ನಿನಗೇನಂತೆ?............ಸರಿ, ನಾನು ನನ್ನ ಪಾಠವನ್ನು ಬರೆಯಲಿಲ್ಲ ನಿಜ. ಶೀನೀ ನಿಜವಾಗಿಯೂ ಪಾಠ ಬರೆದಿದ್ದನಲ್ಲಾ? ಅವನನ್ನೇಕೆ ಮೇಷ್ಟ್ರು ಹೊಡೆದರು? ಅವನು ಪುಸ್ತಕವನ್ನು ತರಲು ಮರೆತುಬಿಟ್ಟನಷ್ಟೇ. ಮಧ್ಯಾಹ್ನ ಊಟಕ್ಕಾಗಿ ಮನೆಗೆ ಹೋಗಿ ಬಂದಾಗ, ಅವನು ನೋಟು ಬುಕ್ಕನ್ನು ತಂದು, ನಮಗೆ ತೋರಿಸಿದ. ಅದಕ್ಕೇನು ಹೇಳುವಿ? ಮೇಷ್ಟ್ರು ನಂಬದಿರುವಾಗ, ನಾವು ಸುಳ್ಳುಹೇಳಿದರೇನೀಗ?"

"ಕಿಟ್ಟೀ! ರಾಮೂ! ಕೂಗಾಡಬೇಡಿ! ಒಬ್ಬರಿಗೊಬ್ಬರು ಏನು ಜಗಳ? ಪಾಠವನ್ನು ಓದಿ!" ಎಂದು ಅಮ್ಮನ ಧ್ವನಿ ಕೇಳಿಸಿತು.

ಇಬ್ಬರೂ ತಂತಮ್ಮ ಪಾಠಗಳನ್ನು ಗಮನಿಸ ತೊಡಗಿದರು. ರಾಮುವಿನ ಮನಸ್ಸು ಮಾತ್ರ ಪಾಠದ ಮೇಲೆ ಲಯಿಸಲಿಲ್ಲ. "ಜ್ವರ ಮಲಗಿರುವ ನೆಲಗಡಲೇಕಾಯಿಯುವಳನ್ನು ನೆನೆದುಕೊಂಡನು." ಅವಳ ಮಗಳಿಗೆ ಲೆಕ್ಕ ತಿಳಿಯಲಿಲ್ಲ.............ಅವಳನ್ನು ಮೋಸ ಮಾಡಿಬಿಟ್ಟ.............ಅಪ್ಪನ ಹತ್ತಿರ ಬೈಗಳನ್ನೂ ಏಟನ್ನೂ ತಿಂದ................ಚೆನ್ನಾಗಿ ಬೇಕವನಿಗೆ! ಹೌದು, ಅಪ್ಪನು ಅವನನ್ನು ಕೋಪಿಸಿಕೊಂಡು, ಇನ್ನುಮೇಲೆ ಒಬ್ಬರನ್ನೂ ಮೋಸ ಮಾಡಬಾರದೆಂದು ಖಂಡಿಸಿದರಲ್ಲಾ? ಯಾಕೆ ಈಗ, ಈಗಾಗಲೇ

ಮಾಡಿರುವ ಮೋಸವನ್ನು ಕುರಿತು ಅವರೇನೂ ಹೇಳಲಿಲ್ಲ ? ಆ ಹುಡಿಗಿಗೆ ಕಾಲಾಣೆ ಕೊಡಬೇಕೆಂಬ ವಿಷಯವನ್ನು ಕುರಿತು ಅವರೇಕೆ ಗಮನಿಲಿಸಲ್ಲ ? ಅವಳ ಹತ್ತಿರ ಕೊಡೆಂದು ಅವೆರೇಕೆ ಕಿಟ್ಟೀಗೆ ಕಾಲಾಣೆ ಕೊಡಲಿಲ್ಲ ? ".....ಇಂತಹ ಯೋಚನೆಗಳಲ್ಲಿ ರಾಮುವಿನ ಮನಸ್ಸು ಲಯಿಸಿತು.

೫

ಮರುದಿನ ಮಧ್ಯಾಹ್ನ ಊಟಕ್ಕಾಗಿ ಪಾಠಶಾಲೆ ಬಿಟ್ಟಾಗ, ರಾಮುವೂ ಕಿಟ್ಟಿಯೂ ಟಿಫನ್ ರೂಮಿನಲ್ಲಿ ಸಂಧಿಸಿದರು.

"ರಾಮೂ, ನೆಲಗಡಲೇಕಾಯಿ ಕೊಳ್ಳಲು ಕಾಲಾಣೆ ತಂದಿರುವಿಯಾ ?" ಎಂದು ಕೇಳಿದ ಕಿಟ್ಟಿ.

ರಾಮೂ ತಕ್ಷಣ ಉತ್ತರ ಕೊಡಲಿಲ್ಲ. "ಅದರಲ್ಲಿ ನನಗರ್ಧ ಭಾಗ ಕೊಡುತ್ತೇನೆಂದು ನಿನ್ನೆ ಹೇಳಿದೆಯಲ್ಲಾ" ಎಂದು ಪುನಃ ಕೇಳಿದನು ಕಿಟ್ಟಿ.

"ನನ್ನಲ್ಲಿ ಕಾಲಾಣೆ ಇಲ್ಲವಲ್ಲಾ!'' ಎಂದ ರಾಮೂ. "ಅದನ್ನು ಆ ಹುಡಿಗಿಗೆ ಈ ಹೊತ್ತು ಬೆಳಿಗ್ಗೆ ಕೊಟ್ಟುಬಿಟ್ಟೆ''

"ಯಾಕೆ ?'' ಎಂದು ಆಶ್ಚರ್ಯದಿಂದ ಕೇಳಿದ ಕಿಟ್ಟೀ.

"ನೀನವಳನ್ನು ನಿನ್ನೆ ಮೋಸಮಾಡಿದೆಯಲ್ಲಾ! ಅದಕ್ಕಾಗಿಯೇ ಈಗ ಅವಳಿಗೆ ಕಾಲಾಣೆ ಕೊಟ್ಟೆ!'' ಎಂದು ಉತ್ತರವಿತ್ತ ರಾಮೂ.

ಕಿಟ್ಟೀ ಅವನನ್ನು ದುರುಗುಟ್ಟಿ ನೋಡಿದ. ಹಿಂದಿನ ದಿನ ಕಿಟ್ಟೀ ರಾಮುವಿಗೆ ಒಂದು ಪಾವು ಕೊಡುತ್ತೇನೆಂದು ಮುಂದೆ ಬಂದ. ಆದರೆ ಕೊನೆಗೆ ರಾಮೂನೇ ಕಿಟ್ಟಿಗೆ ಒಂದು ಪಾವು ನೆಲಗಡಲೆ ಕೊಟ್ಟಂತಾಯಿತು.

# ಕೆಲವು ಉತ್ತಮವಾದ ಕಥೆ ಪುಸ್ತಕಗಳು

---

| | | | |
|---|---|---|---|
| 1 | ಅಲೆಗಳು | ಬಿ. ಎಸ್. ವೆಂಕಟರಾಂ | ೧—೦—೦ |
| 2 | ಅಡ್ಡಿಕೆಯ ಕಳವು | ತ. ಸು. ರಾಮಸ್ವಾಮಯ್ಯ | ೦—೬—೦ |
| 3 | ಉಪನಿಷತ್ತಿನ ಕಥೆಗಳು (ಎರಡನೇ ಮುದ್ರಣ) | ಚಕ್ರವರ್ತಿರಾಜಗೋಪಾಲಾಚಾರ್ | ೦—೧೨—೦ |
| 4 | ಕಾಡುಮಲ್ಲಿಗೆ | ಸಿ. ಕೆ. ನಾಗರಾಜಾರಾವ್ | ೦—೧೨—೦ |
| 5 | ಕೆಲವು ಸಣ್ಣ ಕಥೆಗಳು | ಶ್ರೀನಿವಾಸ | ೧—೮—೦ |
| 6 | ಕೋಲಾರ ನಾಡು ಕಥೆಗಳು | ಮು. ವೆಂಕಟ ಕೃಷ್ಣಪ್ಪ | ೦—೮—೦ |
| 7 | ಜೋಯಿಸರ ಜಾಡಿ | ಆನಂದ | ೦—೧೦—೦ |
| 8 | ತುಂಬಿದ ಕೊಡ | ಡಾ॥ ವೆಂಕಟಗಿರಿರಾವ್ | ೧—೦—೦ |
| 9 | ತುರಾಯಿ | ಸಿ. ಕೆ. ವೆಂಕಟರಾಮಯ್ಯ | ೧—೪—೦ |
| 10 | ತೆನಾಲಿರಾಮ | ಜಿ. ಪಿ. ರಾಜರತ್ನಂ | ೧—೦—೦ |
| 11 | ದೇವುಡುಕಥೆಗಳು | ದೇವುಡು | ೧—೧೨—೦ |
| 12 | ನಮ್ಮೂರಿನರಶಿಕರು | ಗೋರೂರು ರಾಮಸ್ವಾಮಿ ಐಯ್ಯಂಗಾರ್ | ೧—೮—೦ |
| 13 | ನಾಲ್ಕು ಸಣ್ಣ ಕಥೆಗಳು | ಶ್ರೀನಿವಾಸ | ೦—೧೨—೦ |
| 14 | ಪಂಡಿತ ನೆರಳು | ಜಿ. ಪಿ. ರಾಜರತ್ನಂ | ೧—೦—೦ |
| 15 | ಪುಟಾಣಿ ಪಂಚ ತಂತ್ರ | ,, | ೧—೦—೦ |
| 16 | ಮಕ್ಕಳ ಮಂಭಾಸನ್ | ,, | ೦—೧೦—೦ |
| 17 | ಮೂರು ಮುತ್ತುಗಳು | ಕೆ. ನಂಜುಂಡರಾವ್ | ೧—೮—೦ |
| 18 | ರವೀಂದ್ರರ ಕಥೆಗಳು ೧ | ಅ. ನಾರಾಯಣಸ್ವಾಮಿ | ೧—೦—೦ |
| 19 | ,, ೨ | ,, ಅಯ್ಯರ್] | ೧—೦—೦ |
| 20 | ,, ೩ | ,, | ೧—೦—೦ |
| 21 | ,, ೪ | ,, | ೧—೦—೦ |

| | | | |
|---|---|---|---|
| 22 | ರತೀದೇವಿ | ಎಂ. ವಿ. ಸೀತಾರಾಮಯ್ಯ | ೧—೦—೦ |
| 23 | ರಾಜಾಜಿಯವರ ಕಥೆಗಳು | ಚಕ್ರವರ್ತಿರಾಜ ಗೋಪಾಲಾಚಾರ್ | ೧—೪—೦ |
| 24 | ರೂಪಸಿ | ತ. ರಾ. ಸುಬ್ಬರಾಯರು | ೧—೪—೦ |
| 25 | ರೋಹಿಣಿ | ಬಾಲಶಶಿ | ೦—೧೩—೬ |
| 26 | ಸಂಧ್ಯಾ | ವೈ. ಎಂ. ಕಣ್ಮುಖಯ್ಯ | ೦—೧೦—೦ |
| 27 | ವಿಜ್ಞಾನಿಗಳ ಕಥೆಗಳು | ಎಲ್.ಕೆ. ನರಸಿಂಹ ಮೂರ್ತಿ | ೧—೪—೦ |
| 28 | ವೀಳ್ಯ ಮತ್ತು ಇತರ ಕಥೆಗಳು | ಕ್ಷೀರಸಾಗರ | ೧—೦—೦ |
| 29 | ಸಂಗಮ | ಸಿ. ಕೆ. ನಾಗರಾಜಾರಾವ್ | ೦—೧೨—೦ |
| 30 | ಸಣ್ಣ ಕಥೆಗಳು | ಶ್ರೀನಿವಾಸ | ೧—೦—೦ |
| 31 | ,, ೪ | ,, | ೧—೪—೦ |
| 32 | ,, ೫ | ,, | ೦—೧೪—೦ |
| 33 | ,, ೬ | ,, | ೦—೧೪—೦ |
| 34 | ಹಳ್ಳಿಯ ಚಿತ್ರಗಳು | ಗೋರೂರು ರಾಮಸ್ವಾಮಿ ಅಯ್ಯಂಗಾರ್ | ೧—೮—೦ |
| 35 | ಹಿಡಿ ಹೂ | ಎಂ. ವಿ. ಸೀತಾರಾಮಯ್ಯ | ೦—೧೦—೦ |
| 36 | ಹೆಸರಿಟ್ಟರು | ವೈ. ಎಂ. ಕಣ್ಮುಖಯ್ಯ | ೧—೪—೦ |

ನಮ್ಮಲ್ಲಿ ಎಲ್ಲಾ ಕವಿಗಳ, ಕತೆಗಾರರ, ಕಾದಂಬರೀ ಕಾರರ, ನಾಟಕ ಕರ್ತರ ಪುಸ್ತಕಗಳೂ, ಸಾಮಾಜಿಕ ಧಾರ್ಮಿಕ ಗ್ರಂಥಗಳೂ ಮತ್ತು ಎಲ್ಲಾ ಸ್ಕೂಲ್ ಪುಸ್ತಕಗಳೂ ದೊರೆಯುತ್ತವೆ.

## ಸತ್ಯಶೋಧನ ಪುಸ್ತಕ ಭಂಡಾರ

**ಕೋಟೆ, ಬೆಂಗಳೂರು ನಗರ.**

# ಇದೇ ಲೇಖಕಿಯವರ ಇತರ ಕಥೆ ಪುಸ್ತಕಗಳು

| | | |
|---|---|---|
| 1 | ಕಲಾವಿದನ ತ್ಯಾಗ ಮತ್ತು ಇತರ ಕಥೆಗಳು | ೧—೦—೦ |
| 2 | ದೀಪಾವಳಿ ಮತ್ತು ಇತರ ಕಥೆಗಳು | ೧—೪—೦ |
| 3 | ಪ್ರತಿಫಲ ಮತ್ತು ಇತರ ಕಥೆಗಳು | ೧—೪—೦ |
| 4 | ಮೊಗ್ಗು | ೧—೦—೦ |
| 5 | ಸರೋಜ ನಳಿನಿ | ೧—೦—೦ |

**ಸತ್ಯಶೋಧನ ಪುಸ್ತಕ ಭಂಡಾರ**
ಕೋಟೆ, ಬೆಂಗಳೂರು ನಗರ.